ಸೋಮವಾರ, ಆಗಸ್ಟ್ 28, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಯೂರ
ಭಾನುವಾರ
ನವದೆಹಲಿಯಲ್ಲಿ
ನವಿಲೊಂದು
ಕಾಣಿಸಿಕೊಂಡ
ಪರಿ







1. ಸೌಜನ್ಯಾ ತಾಯಿ ಕುಸುಮಾವತಿ ಅವರು ನ್ಯಾಯಕ್ಕಾಗಿ ಧರ್ಮಸ್ಥಳದಲ್ಲಿ ಅಣ್ಣಪ್ಪ ಸ್ವಾಮಿಗೆ ಪ್ರಾರ್ಥನೆ ಸಲ್ಲಿಸಿದರು 2. ಧೀರಜ್ ಕೆಲ್ಲ, ಮಲ್ಲಿಕ್ ಜೈನ್ ಮತ್ತು ಉದಯ ಜೈನ್ ಅವರು ಅಣ್ಣಪ್ಪ ಬೆಟ್ಟದ ಪದತಲದಲ್ಲಿ ಪ್ರಾರ್ಥನೆ ಮಾಡಿದರು

ಸೌಜನ್ಯಾ ಕೊಲೆ ಪ್ರಕರಣದ ಆರೋಪಿಗಳ ಪತ್ತೆಗೆ ಆಗ್ರಹ: ವಿಎಚ್‌ಪಿ, ಬಜರಂಗ ದಳ ನೇತೃತ್ವದಲ್ಲಿ ಪಾದಯಾತ್ರೆ

ಅಣ್ಣಪ್ಪಸ್ವಾಮಿ ಪದತಲದಲ್ಲಿ ನ್ಯಾಯಕ್ಕೆ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ನೇತೃತ್ವದಲ್ಲಿ ನೇತ್ರಾವತಿ ಸ್ನಾನಘಟ್ಟದಿಂದ ಧರ್ಮಸ್ಥಳದ ಪ್ರವೇಶದ್ವಾರದವರೆಗೆ ಶಿವಪಂಚಾಕ್ಷರಿ ಪಠಣದೊಂದಿಗೆ ಭಾನುವಾರ ಪಾದಯಾತ್ರೆಯಲ್ಲಿ ಬಂದ ಸೌಜನ್ಯಾ ತಾಯಿ ಕುಸುಮಾವತಿ ಅವರು ಅಣ್ಣಪ್ಪಸ್ವಾಮಿ ಬೆಟ್ಟದ ಬಳಿ ಬಂದು ನ್ಯಾಯಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು.

'ಸೌಜನ್ಯಾ ಕೊಲೆ ಪ್ರಕರಣದ ಆರೋಪಿಯನ್ನು ಪತ್ತೆ ಮಾಡಿ ಉಗ್ರ ಶಿಕ್ಷೆ ನೀಡಬೇಕು. ನನ್ನ ಮಗಳ ಆತ್ಮಕ್ಕೆ ಶಾಂತಿ ದೊರಕುವಂತಾಗಬೇಕು' ಎಂದು ಕುಸುಮಾವತಿ ಕಣ್ಣೀರು ಸುರಿಸುತ್ತಾ ಅಣ್ಣಪ್ಪಸ್ವಾಮಿ ಪದತಲದಲ್ಲಿ ಪ್ರಾರ್ಥನೆ ಸಲ್ಲಿಸಿ ಕಾಣಿಕೆ ಅರ್ಪಿಸಿ, ಪ್ರಸಾದ ಸ್ವೀಕರಿಸಿದರು.

ಧೀರಜ್ ಕೆಲ್ಲ, ಮಲ್ಲಿಕ್ ಜೈನ್ ಮತ್ತು ಉದಯ ಜೈನ್ ಅವರೂ ಅಣ್ಣಪ್ಪಸ್ವಾಮಿ ಬೆಟ್ಟದ ತಳದಲ್ಲಿ ಪ್ರಾರ್ಥನೆ ಸಲ್ಲಿಸಿ, 'ಸೌಜನ್ಯಾ ಕೊಲೆ ಪ್ರಕರಣಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ. ನಮ್ಮ ಬಗ್ಗೆ ಅಪಪ್ರಚಾರವಾಗುತ್ತಿದ್ದು, ನೈಜ ಆರೋಪಿಯನ್ನು ಪತ್ತೆ ಮಾಡಿ ಉಗ್ರಶಿಕ್ಷೆ ನೀಡಬೇಕು' ಎಂದು ಪ್ರಾರ್ಥಿಸಿದರು.

ಧೀರಜ್ ಕೆಲ್ಲ ಮಾತನಾಡಿ, 'ನಾವು ಕಾನೂನು ಪ್ರಕಾರ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದೇವೆ. ಯಾವುದೇ ರೀತಿಯ ತನಿಖೆಗೂ ಸಿದ್ಧರಿದ್ದೇವೆ. ನಮ್ಮ ಕುಟುಂಬದ ಬಗ್ಗೆಯೂ ಮಾಧ್ಯಮದವರು ಕಾಳಜಿ ವಹಿಸಬೇಕು. ಅಪಪ್ರಚಾರ ಮಾಡಬಾರದು' ಎಂದರು.

ಮಾತಿನ ಚಕಮಕಿ: ಅಣ್ಣಪ್ಪಸ್ವಾಮಿ ಬೆಟ್ಟ ಮತ್ತು ಪ್ರವೇಶದ್ವಾರದ ಬಳಿ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು. ಭಕ್ತರೂ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ನೇತ್ರಾವತಿ ಸ್ನಾನಘಟ್ಟದಿಂದ ಧರ್ಮಸ್ಥಳದವರೆಗೂ ಬಿಗಿ ಪೊಲೀಸ್ ಬಂದೋಸ್ತ್ ಮಾಡಲಾಗಿತ್ತು.

ಎಸ್‌.ಪಿ. ರಿಷ್ಯಂತ್ ಅವರೇ ಉಸ್ತುವಾರಿ ವಹಿಸಿಕೊಂಡಿದ್ದರು. ಪೊಲೀಸ್ ವಾಹನವನ್ನು ಅಣ್ಣಪ್ಪ ಸ್ವಾಮಿ ಬೆಟ್ಟದ ಎದುರು ತಂದು ನಿಲ್ಲಿಸಿದಾಗ ಪೊಲೀಸರು ಮತ್ತು ಸಾರ್ವಜನಿಕರ ಮಧ್ಯೆ ಮಾತಿನ ಚಕಮಕಿ ನಡೆಯಿತು. ವಾಹನವನ್ನು ತೆರವುಗೊಳಿಸಿ ಪ್ರವೇಶದ್ವಾರದ ಬಳಿ ನಿಲ್ಲಿಸಬೇಕೆಂದು ಸಾರ್ವಜನಿಕರು ಪಟ್ಟು ಹಿಡಿದರು. ವಾಹನವನ್ನು ಹೊರಗೆ ಕಳುಹಿಸಿದ ಬಳಿಕ ವಾತಾವರಣ ತಿಳಿಯಾಯಿತು.

ಮುಖ್ಯಮಂತ್ರಿ ಭೇಟಿಗೆ ಬಿಜೆಪಿ ನಿರ್ಧಾರ

ಬೆಳ್ತಂಗಡಿ: ಉಜಿರೆಯ ಸೌಜನ್ಯಾ ಕೊಲೆ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬಿಜೆಪಿ ಶಾಸಕರು ಹಾಗೂ ಸಂಸದರು ನಿರ್ಧರಿಸಿದರು.

ಬೆಳ್ತಂಗಡಿಯ ತಾಲ್ಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಈ ವಿಷಯವನ್ನು ಘೋಷಿಸಿದ್ದು, ಸದ್ಯದಲ್ಲೇ ಮುಖ್ಯಮಂತ್ರಿಯನ್ನು ಭೇಟಿ ಮಾಡಲಾಗುವುದು ಎಂದು ತಿಳಿಸಲಾಯಿತು. ಸೌಜನ್ಯಾಗೆ ನ್ಯಾಯ ಒದಗಿಸಲು ಯಾವುದೇ ಸಂಘಟನೆ ಹೋರಾಟ ನಡೆಸಿದರೂ ಬೆಂಬಲ ನೀಡುವುದಾಗಿ ಶಾಸಕರು ತಿಳಿಸಿದರು.

ಸಂಸದ ನಳಿನ್‌ಕುಮಾರ್ ಕಟೀಲ್ ಮಾತನಾಡಿ, 'ಸೌಜನ್ಯಾ ಅವರಿಗೆ ನ್ಯಾಯ ಸಿಗುವವರೆಗೂ ಬಿಜೆಪಿಯು ಹೋರಾಟ ನಡೆಸಲಿದೆ. ಮರು ತನಿಖೆಗೆ ಆಗ್ರಹಿಸಿ ರಾಜ್ಯಪಾಲರಿಗೂ ಮನವಿ ಸಲ್ಲಿಸಲಿದೆ' ಎಂದು ಹೇಳಿದರು.

'ಎರಡೂ ಜಿಲ್ಲೆಯ ಶಾಸಕರು ಮುಂದಿನ ವಾರ ಗೃಹ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದ್ದೇವೆ' ಎಂದು ಶಾಸಕ ಸುನಿಲ್ ಕುಮಾರ್ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ 'ಮುಂದಿನ ಮೂರು ದಿನ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬಿಜೆಪಿ ಕಾರ್ಯಕರ್ತರು ಮನೆಯಲ್ಲಿ ಪ್ರಾರ್ಥನೆ ಮಾಡುವಾಗ ಸೌಜನ್ಯಾ ಕೊಲೆ ಆರೋಪಿಗಳ ಶೀಘ್ರ ಪತ್ತೆಯಾಗುವಂತೆ ಕೋರಲಿದ್ದಾರೆ' ಎಂದರು.

'ಪ್ರಧಾನಿ ಬಳಿ ಕರೆದೊಯ್ಯುವಿರಾ?'

ಪ್ರತಿಭಟನೆಯಲ್ಲಿ ಮಾತನಾಡಿದ ಸೌಜನ್ಯಾ ತಾಯಿ ಕುಸುಮಾವತಿ ಅವರು, 'ಶಾಸಕ ಹರೀಶ್ ಪೂಂಜ ಅವರ ಕರೆಗೆ ಓಗೊಟ್ಟು ಇಲ್ಲಿಗೆ ಬಂದಿದ್ದೇನೆ. ಸೌಜನ್ಯಾ ಕೊಲೆಯಾಗಿ ದಶಕವಾಗಿದೆ. ಮೊದಲ ಬಾರಿ ಸಂಸದರು ಭರವಸೆಯ ನುಡಿಗಳನ್ನಾಡಿದ್ದಾರೆ. 11 ವರ್ಷಗಳಿಂದ ನಾನು ನ್ಯಾಯಕ್ಕಾಗಿ ಹೋರಾಡುತ್ತಿದ್ದು ನನ್ನನ್ನು ಪ್ರಧಾನಿ ನರೇಂದ್ರ ಮೋದಿ ಅವರ ಬಳಿಗೆ ಕರೆದುಕೊಂಡು ಹೋಗಿ ಅಹವಾಲು ಸಲ್ಲಿಸಲು ಸಹಕರಿಸುವುದಾಗಿ ನೀವೆಲ್ಲ ಮಾತು ಕೊಡಬೇಕು' ಎಂದು ಒತ್ತಾಯಿಸಿದರು.

ವೇದಿಕೆಯಲ್ಲಿದ್ದ ಶಾಸಕರು ಆದೀತು ಎಂಬ ಅರ್ಥದಲ್ಲಿ ತಲೆಯಾಡಿಸಿದರು. ಕುಸುಮಾವತಿ ಅವರು ಮತ್ತೆ ಮತ್ತೆ ಒತ್ತಾಯಿಸಿದಾಗ ಸಭಿಕರು 'ಭಾರತ್ ಮಾತಾ ಕಿ ಜೈ' ಎಂದು ಕೂಗಿದರು.

'17 ವರ್ಷ ಮುದ್ದಾಗಿ ಸಾಕಿದ ಮಗಳನ್ನು ದುರುಳರು ಕಚ್ಚಿ ತಿಂದು ಬಿಸಾಕಿದ್ದಾರೆ. ಕೊಂದವರು ಯಾರು ಎಂಬುದು ನನಗೆ ಗೊತ್ತು, ಅವರಿಗೆ ಶಿಕ್ಷೆ ಆಗಬೇಕು' ಎಂದು ಕುಸುಮಾವತಿ ಭಾವುಕರಾಗಿ ನುಡಿದರು.

ಸುದ್ದಿ 2 ನಿಮಿಷ

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಶಾಲೆಗಳ ವಿಲೀನ: ಚರ್ಚೆ

ಶಿವಮೊಗ್ಗ: 'ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ರಾಜ್ಯದ ಶಾಲೆಗಳನ್ನು ವಿಲೀನಗೊಳಿಸುವಂತೆ ಶಾಸಕರಿಂದ ಸಲಹೆ ಬಂದಿದೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

'ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಆದರೆ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಡೆ ಶಿಕ್ಷಕರಿಗೆ ಕೆಲಸವೇ ಇಲ್ಲದಂತಾಗಿದೆ. ಸಾರಿಗೆ ವ್ಯವಸ್ಥೆ ಅನುಕೂಲ ಇರುವ ಕಡೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಶಾಲೆಗಳನ್ನು ವಿಲೀನ ಮಾಡಿದರೆ ಅನುಕೂಲವಾಗಲಿದೆ ಎಂಬ ಮಾತು ಕೇಳಿಬಂದಿವೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



'ಮನೆ ಮನೆಗೆ ಆರೋಗ್ಯ ಸೇವೆ' ಶೀಘ್ರ

ಹುಬ್ಬಳ್ಳಿ: 'ಸಾಂಕ್ರಾಮಿಕವಲ್ಲದ ರೋಗಗಳಿಂದ ಮೃತಪಡುವವರ ಸಂಖ್ಯೆ ಹೆಚ್ಚಾಗಿದೆ. ಇದನ್ನು ತಡೆಗಟ್ಟಲು ಗ್ರಾಮೀಣ ಭಾಗದಲ್ಲಿ ಮನೆ ಮನೆಗೆ ತೆರಳಿ ಆರೋಗ್ಯ ತಪಾಸಣೆ ನಡೆಸಲು ವಿಶೇಷ ಯೋಜನೆ ರೂಪಿಸಲಾಗುತ್ತಿದ್ದು, ಎರಡು ತಿಂಗಳಲ್ಲಿ ಅನುಷ್ಠಾನಗೊಳಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ಇದಕ್ಕಾಗಿ 70 ವಾಹನಗಳ ಖರೀದಿಗೆ ಶೀಘ್ರ ಟೆಂಡರ್ ಕರೆಯಲಾಗುವುದು. ಹ್ಯಾಂಡ್ ಹೆಲ್ಡ್ ಎಕ್ಸ್‌-ರೇ ಯಂತ್ರಗಳನ್ನು ಖರೀದಿಸಲಾಗುತ್ತಿದ್ದು, ಎಂಟು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೆ ತರಲಾಗುವುದು. ನಂತರ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ವೈದ್ಯರು, ಶುಶ್ರೂಷಕರು, ತಂತಜ್ಞರು ಈ ತಂಡದಲ್ಲಿ ಇರುತ್ತಾರೆ. ದಂತ, ನೇತ್ರ, ರಕ್ತದೊತ್ತಡ, ಕ್ಯಾನ್ಸರ್ ತಪಾಸಣೆ ಮಾಡಿ ಔಷಧ, ಕನ್ನಡಕಗಳನ್ನು ಉಚಿತವಾಗಿ ವಿತರಿಸಲಾಗುವುದು. ಹಿಂದಿನ ಸರ್ಕಾರ ಆರಂಭಿಸಿದ್ದ 'ನಮ್ಮ ಕ್ಲಿನಿಕ್'ಗಳನ್ನು ಮುಂದುವರಿಸಿ, ಅವುಗಳ ಸುಧಾರಣೆಗೂ ಕ್ರಮ ಕೈಗೊಳ್ಳಲಾಗುವುದು. ಜನರ ಅನುಕೂಲಕ್ಕಾಗಿ ಇವು ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು' ಎಂದು ತಿಳಿಸಿದರು.

ಎಲ್ಲ ಅವ್ಯವಹಾರಗಳ ತನಿಖೆ: 'ಹಿಂದಿನ ಸರ್ಕಾರದಲ್ಲಿ ನಡೆದಿದ್ದ ಭ್ರಷ್ಟಾಚಾರ, ಹಗರಣಗಳನ್ನು ಜನರ ಮುಂದಿಟ್ಟಿದ್ದೆವು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು, ಪ್ರಕರಣವನ್ನು ತಾರ್ಕಿಕ ಅಂತ್ಯಗೊಳಿಸಬೇಕು ಎಂಬ ಉದ್ದೇಶದಿಂದ ಕೋವಿಡ್ ಹಗರಣದ ತನಿಖೆಗೆ ಸರ್ಕಾರ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಿದೆ' ಎಂದು ಹೇಳಿದರು.

'ತನಿಖೆಗೆ ಆದೇಶ ಮಾಡದಿದ್ದರೆ ಸುಮ್ಮನೆ ಆರೋಪ ಮಾಡುತ್ತಾರೆ ಎಂದು ಬಿಜೆಪಿಯವರು ದೂರುತ್ತಾರೆ. ತನಿಖೆ ಮಾಡಿಸಿದರೆ ದ್ವೇಷದ ರಾಜಕಾರಣ ಎನ್ನುತ್ತಾರೆ. ಈ ಹಿಂದೆ ನಾವು ಆರೋಪ ಮಾಡಿರುವ ಪ್ರಕಾರ ಈಗ ತನಿಖೆಗೆ ಆದೇಶಿಸಲಾಗಿದೆ. ತಪ್ಪು ಮಾಡಿಲ್ಲವಾದರೆ ಬಿಜೆಪಿ ನಾಯಕರಿಗೆ ಭಯವೇಕೆ' ಎಂದು ಪ್ರಶ್ನಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	101.93	2,931	2,294
ಹಾರಂಗಿ	2,859	2,857.64	714	1,700
ಕಬಿನಿ	2284.00	2,274.29	1,495	4,325
ಹೇಮಾವತಿ	2,922	2,909.80	848	5,000
ಲಿಂಗನಮಕ್ಕಿ	1,819	1,789.30	3,940	6,056.92
ಸೂಪಾ (ಮೀ)	564	546.05	2,666	4,767
ಮಾಣಿ	595	580.14	569	651
ತುಂಗಭದ್ರಾ	1,633	1,625.97	409	7,030
ಮಲಪ್ರಭಾ	2079.50	2,067.20	694	694
ಘಟಪ್ರಭಾ	2175	2,162.61	1,146	4,513
ಭದ್ರಾ	186	165.2	306	3,223
ಆಲಮಟ್ಟಿ (ಮೀ)	519.60	519.55	00	1,025
ನಾರಾಯಣಪುರ (ಮೀ)	492.25	490.01	00	310

* ನೆಲಮಟ್ಟದಿಂದ

ಸಾಲಕ್ಕೆ ಹೆದರಿ ತಂದೆ–ತಾಯಿ ಕೊಲೆ

ಪ್ರಜಾವಾಣಿ ವಾರ್ತೆ



ಮಂಜುನಾಥ

ಕೊಣನೂರು (ಹಾಸನ): ಸಮೀಪದ ಅಕ್ಕಲವಾಡಿಯಲ್ಲಿ ನಂಜುಂಡಪ್ಪ (55), ಉಮಾ (45) ದಂಪತಿ ಒಂದೇ ದಿನದಲ್ಲಿ ಮೃತಪಟ್ಟ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ಅವರ ಮೊದಲ ಮಗ ಮಂಜುನಾಥ ಆಹಾರದಲ್ಲಿ ವಿಷ ಬೆರೆಸಿದ್ದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಆಗಸ್ಟ್ 15 ರಂದು ಮನೆಯಲ್ಲಿ ತಯಾರಿಸಿದ್ದ ಪಲಾವ್ ತಿಂದಿದ್ದ ದಂಪತಿ ಅಸ್ವಸ್ಥಗೊಂಡು, ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆ.23 ರಂದು ಆಸ್ಪತ್ರೆಯಿಂದ ಮನೆಗೆ ವಾಪಸಾಗುವ ವೇಳೆ ಮೃತಪಟ್ಟಿದ್ದರು. ಅದರಿಂದ ಅನುಮಾನಗೊಂಡ ಮೂರನೇ ಮಗ ಜೈರಾಜ್ ಕೊಣನೂರು ಠಾಣೆಗೆ ದೂರು ನೀಡಿದ್ದರು. ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಿಜಾಂಶ ಬೆಳಕಿಗೆ ಬಂದಿದೆ.

'ಆರೋಪಿಯು ಮನೆ ಕಟ್ಟಲು ತಾಯಿ ಉಮಾ ಹೆಸರಿನಲ್ಲಿ ಮಹಿಳಾ ಸಂಘಗಳಿಂದ ಸಾಲ ಪಡೆದಿದ್ದ. ಕೈ ಸಾಲ ಮಾಡಿದ್ದ. ಅವರು ಬದುಕಿದ್ದರೆ ಸಾಲ ತೀರಿಸಬೇಕಾಗುತ್ತದೆ. ಸತ್ತರೆ ಸಾಲ ವಜಾಗೊಳ್ಳುತ್ತದೆ ಎಂದು ಭಾವಿಸಿ, ಮನೆಯಲ್ಲಿ ಮಾಡಿದ್ದ ಪಲಾವ್ ಅನ್ನು ತಾನು ತಿಂದು, ಉಳಿದದ್ದಕ್ಕೆ ಕಳೆನಾಶಕವನ್ನು ಬೆರೆಸಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಕುಟುಂಬದ ನಾಲ್ವರ ಶಂಕಾಸ್ಪದ ಸಾವು

ಮೈಸೂರು: ನಗರದ ಚಾಮುಂಡಿಪುರಂನಲ್ಲಿ ತರಕಾರಿ ದಲ್ಲಾಳಿ ಮಹದೇವಸ್ವಾಮಿ (48), ಅವರ ಪತ್ನಿ ಅನಿತಾ (38), ಪುತ್ರಿಯರಾದ ಚಂದ್ರಕಲಾ (17) ಹಾಗೂ ಧನಲಕ್ಷ್ಮೀ (15) ಅವರ ಶವಗಳು ಭಾನುವಾರ ಕೊಳೆತ ಸ್ಥಿತಿಯಲ್ಲಿ ಕಂಡುಬಂದಿವೆ.

ಮನೆಯಿಂದ ದುರ್ವಾಸನೆ ಬರುತ್ತಿದ್ದಂತೆಯೇ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಒಬ್ಬ ಪುತ್ರಿಯ ಮೃತದೇಹ ನೇಣುಬಿಗಿದ ಸ್ಥಿತಿಯಲ್ಲಿ, ಉಳಿದ ಮೂವರ ಮೃತದೇಹಗಳು ಹಾಲ್‌ನಲ್ಲಿ ಕುಳಿತ ಸ್ಥಿತಿಯಲ್ಲಿ ಪತ್ತೆಯಾಗಿವೆ. ಸಾವಿಗೆ ಕಾರಣ ತಿಳಿದುಬಂದಿಲ್ಲ.

ವಿಚಾರಣಾ ಆಯೋಗ: ಜೋಶಿ ಟೀಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಯಾವುದೇ ಹಗರಣದ ತನಿಖೆ ಮಾಡಲಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ, ದಿನ ಬೆಳಿಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಯ್ಯುತ್ತಿರುವ ನಿವೃತ್ತ ನ್ಯಾಯಮೂರ್ತಿ ಅವರಿಂದ ತನಿಖೆ ಮಾಡಿಸಲು ಹೊರಟಿರುವ ರಾಜ್ಯ ಸರ್ಕಾರದ ನಿಯತ್ತು ಏನು ಎನ್ನುವುದನ್ನು ತೋರಿಸುತ್ತದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಟೀಕಿಸಿದರು.

ಬಿಜೆಪಿ ಸರ್ಕಾರದ ಭ್ರಷ್ಟಾಚಾರಗಳ ತನಿಖೆಗೆ ರಾಜ್ಯ ಸರ್ಕಾರ ನೇಮಿಸಿರುವ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ವಿಚಾರಣಾ ಆಯೋಗದ ಬಗ್ಗೆ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ನ್ಯಾಯಮೂರ್ತಿಯವರು ನಿವೃತ್ತರಾದ ನಂತರ ಮೋದಿ, ಬಿಜೆಪಿಯನ್ನು ಪ್ರತಿದಿನ ಟೀಕಿಸುತ್ತಿದ್ದಾರೆ. ಅವರೊಬ್ಬ ರಾಜಕಾರಣಿಯಾಗಿದ್ದಾರೆ. ರಾಜ್ಯ ಸರ್ಕಾರ ಉದ್ದೇಶಪೂರ್ವಕವಾಗಿಯೇ ಬಿಜೆಪಿ ವಿರೋಧಿ ನ್ಯಾಯಮೂರ್ತಿ ಅವರನ್ನು ತನಿಖಾ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದೆ' ಎಂದು ಕಿಡಿಕಾರಿದರು.

'ಪಕ್ಷಾಂತರ ಸಹಜ ಪ್ರಕ್ರಿಯೆ; ದೌರ್ಭಾಗ್ಯವೂ ಹೌದು'

ಹುಬ್ಬಳ್ಳಿ: 'ರಾಜಕೀಯ ವ್ಯವಸ್ಥೆಯಲ್ಲಿಕೆಲ ಜನ ಪ್ರತಿನಿಧಿಗಳು ಪಕ್ಷಾಂತರ ಮಾಡುವುದು ಸಹಜ ಪ್ರಕ್ರಿಯೆ ಹಾಗೂ ಇದೊಂದು ದೌರ್ಭಾಗ್ಯವೂ ಆಗಿದೆ. ಸದ್ಯದ ಸ್ಥಿತಿಯಲ್ಲಿ ಯಾರೂ ನಮ್ಮ ಪಕ್ಷವನ್ನು ಬಿಟ್ಟು ಹೋಗುತ್ತಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕಿ ಬಾತ್' ರೇಡಿಯೊ ಕಾರ್ಯಕ್ರಮದ 104ನೇ ಸಂಚಿಕೆಯ ಪ್ರಸಾರ ಕಾರ್ಯಕ್ರಮ ವೀಕ್ಷಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ರಾಷ್ಟ್ರೀಯ ನಾಯಕರ ನೇತೃತ್ವದಲ್ಲಿ ರಾಜ್ಯದಲ್ಲಿ ನಾವು ಕನಿಷ್ಠ 22ರಿಂದ 23 ಸ್ಥಾನಗಳನ್ನು ಗೆಲ್ಲುತ್ತೇವೆ. ಕಾಂಗ್ರೆಸ್ ಪಕ್ಷದಿಂದ ಯಾರು ನನ್ನ ವಿರುದ್ಧ ಸ್ಪರ್ಧಿಸುತ್ತಾರೊ ಗೊತ್ತಿಲ್ಲ. ಯಾರಾದರೂ ಒಬ್ಬರು ನನ್ನ ವಿರುದ್ಧ ಸ್ಪರ್ಧಿಸಲೇ ಬೇಕಲ್ಲ' ಎಂದು ಧಾರವಾಡ ಕ್ಷೇತ್ರದಿಂದ ಶಾಸಕ ವಿನಯ ಕುಲಕರ್ಣಿ ಅವರ ಪತ್ನಿ ಶಿವಲೀಲಾ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ಚಿಂತನೆ ನಡೆಸಿರುವುದರ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಇಬ್ಬರು ಪ್ರಮುಖರು ಕಾಂಗ್ರೆಸ್ ಸೇರುತ್ತಾರೆ- ಲಾಡ್: ಧಾರವಾಡದಲ್ಲಿ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್‌.ಲಾಡ್, 'ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹಾಗೂ ಎಸ್‌.ಐ.ಚಿಕ್ಕನಗೌಡ್ರ ಅವರು ಕಾಂಗ್ರೆಸ್ ಸೇರುತ್ತಾರೆ ಎಂಬ ಮಾಹಿತಿ ಇದೆ. ಈವರೆಗೆ ಯಾರೂ ನನ್ನನ್ನು ಸಂಪರ್ಕಿಸಿಲ್ಲ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಸರ್ಕಾರದ ಹಗರಣಗಳ ತನಿಖೆಗೆ ಆಗ್ರಹ

ಬೆಳಗಾವಿ: 'ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಎಲ್ಲ ಹಗರಣಗಳ ಬಗ್ಗೆ ತನಿಖೆ ಮಾಡಲೇಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಸರ್ಕಾರದ ಹಗರಣಗಳ ಬಗ್ಗೆ ಆರೋಪ ಮಾಡಿದವರೇ ನಾವು. ಈಗ ನಮ್ಮ ಬಳಿಯೇ ಅಧಿಕಾರವಿದೆ. ಹಾಗಾಗಿ ಅಕ್ರಮಗಳ ತನಿಖೆಯನ್ನು ಮುಂದಿನ ಹಂತಕ್ಕೆ ಒಯ್ಯುವುದು ನಮ್ಮ ಜವಾಬ್ದಾರಿ. ಕೋವಿಡ್ ಸಂಕಷ್ಟ ಕಾಲದಲ್ಲಿ ₹10 ಮೌಲ್ಯದ ವಸ್ತುವನ್ನು ₹100ಕ್ಕೆ, ₹100 ವಸ್ತುವನ್ನು ₹1 ಸಾವಿರಕ್ಕೆ ಖರೀದಿಸಿ ಮಿತಿಮೀರಿ ಅವ್ಯವಹಾರ ಮಾಡಲಾಗಿದೆ. ಸಂಬಂಧಿತ ಹಿಂದಿನ ಸಚಿವರು ಹಾಗೂ ಅಧಿಕಾರಿಗಳು ಅದರಲ್ಲಿ ಭಾಗಿಯಾಗಿರುತ್ತಾರೆ. ಸಮಗ್ರ ತನಿಖೆಯಿಂದ ಸತ್ಯ ಹೊರಬರಲಿದೆ' ಎಂದರು.

'ಮಾಜಿ ಸಚಿವ ಕೆ.ಸುಧಾಕರ್ ಕಾಂಗ್ರೆಸ್‌ಗೆ ಬಂದರೂ ತನಿಖೆಯಾಗಲಿದೆಯೇ' ಎಂಬ ಪ್ರಶ್ನೆಗೆ, 'ಯಾರೇ ಕಾಂಗ್ರೆಸ್‌ಗೆ ಬಂದರೂ, ಬಾರದಿದ್ದರೂ ತನಿಖೆ ಆಗಲೇಬೇಕು. ಒಬ್ಬರಷ್ಟೇ ಅಲ್ಲ, ಬಹಳ ಜನರ ಮೇಲೆ ಆರೋಪವಿದೆ. ಆ ಬಗ್ಗೆ ತನಿಖೆ ಆಗಬೇಕಿದೆ' ಎಂದು ಹೇಳಿದರು.

ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ

ನಾರಾಯಣ ಭಾಗ್ವತ್, ಸಪ್ನಾ ಆಯ್ಕೆ

ಪ್ರಜಾವಾಣಿ ವಾರ್ತೆ



ನಾರಾಯಣ ಭಾಗ್ವತ್



ಸಪ್ನಾ

ಶಿರಸಿ/ಮಹಾಲಿಂಗಪುರ: ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯ ಕನ್ನಡ ಶಿಕ್ಷಕ ನಾರಾಯಣ ಭಾಗ್ವತ್ ಹಾಗೂ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪೌಢಶಾಲೆಯ ವಿಜ್ಞಾನ ಶಿಕ್ಷಕಿ ಸಪ್ನಾ ಶ್ರೀಶೈಲ ಅನಿಗೋಳ ಅವರು ಕೇಂದ್ರ ಶಿಕ್ಷಣ ಸಚಿವಾಲಯದ 'ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸೆ.5ರಂದು ದೆಹಲಿಯಲ್ಲಿ ನಡೆಯಲಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶಿಕ್ಷಕರಿಗೆ ₹50 ಸಾವಿರ ನಗದು ಹಾಗೂ ಬೆಳ್ಳಿ ಫಲಕದೊಂದಿಗೆ ಪ್ರಶಸ್ತಿ ಪ್ರದಾನ ಮಾಡುವರು.

ನಾರಾಯಣ ಭಾಗ್ವತ್ ಅವರು, ಉತ್ತರ ಕನ್ನಡ ಜಿಲ್ಲೆ ಕುಮಟಾ ಹಂದಿಗೋಣದವರು. ಕನ್ನಡ ಎಂ.ಎ., ಎಂ.ಇಡಿ. ಪದವೀಧರರಾಗಿರುವ ಇವರು ರಂಗ ಶಿಕ್ಷಣದಲ್ಲಿ ಡಿಪ್ಲೊಮಾ ಮಾಡಿದ್ದಾರೆ. ಕಥೆ, ಕವನ, ನಾಟಕ ರಚನೆ, ಚಿತ್ರಕಲೆ, ಸಂಗೀತ, ನಾಟಕ ನಿರ್ದೇಶನ ಮತ್ತು ಅಭಿನಯ, ಉಪನ್ಯಾಸ, ರಜಾ ಶಿಬಿರಗಳ ಸಂಘಟನೆ, ಯಕ್ಷಗಾನ, ಕರಕುಶಲ ಕಲೆಯ ಜ್ಞಾನ ಹೊಂದಿದ್ದಾರೆ.

ಸಪ್ನಾ ಶ್ರೀಶೈಲ ಅನಿಗೋಳ ಅವರು, ಎಂಎಸ್ಸಿ. ಬಿ.ಇಡಿ ಪದವೀಧರರಾಗಿದ್ದಾರೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಕ್ಕಳಿಗೆ ಸಹಾಯ ಮಾಡಿ ಶಾಲೆಗೆ ಕರೆತಂದು ಅವರಿಗೆ ಶಿಕ್ಷಣ ಕೊಡುತ್ತಿದ್ದಾರೆ. ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ ನಂತರ ಪ್ರೌಢಶಾಲೆಗೆ ಅವಕಾಶ ವಂಚಿತ ಹೆಣ್ಣುಮಕ್ಕಳ ಪಾಲಕರ ಮನೆಗೂ ಭೇಟಿ ನೀಡಿ ಶಿಕ್ಷಣದ ಮಹತ್ವ ಹಾಗೂ ಸರ್ಕಾರದ ಸೌಲಭ್ಯಗಳನ್ನು ತಿಳಿಸಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ.

'ಕನ್ನಡ ಭಾಷೆ ನಂಬಿದರೆ ಅದು ಕೈಬಿಡುವುದಿಲ್ಲ ಎಂಬುದಕ್ಕೆ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಬಂದಿರುವುದು ಸಾಕ್ಷಿಯಾಗಿದೆ' ಎಂದು ಶಿಕ್ಷಕ ನಾರಾಯಣ ಭಾಗ್ವತ್ ತಿಳಿಸಿದರು.

'ಪ್ರಶಸ್ತಿ ಬಂದಿದ್ದು ಸಂತಸವಾಗಿದೆ. ನನ್ನ ಜವಾಬ್ದಾರಿ ಹೆಚ್ಚಿದೆ. ಮಕ್ಕಳಿಗೆ ಇನ್ನಷ್ಟು ಉತ್ತಮವಾಗಿ ಶಿಕ್ಷಣ ನೀಡಲು ಪ್ರಯತ್ನಿಸುತ್ತೇನೆ' ಎಂದು ಸಪ್ನಾ ಅನಿಗೋಳ 'ಪ್ರಜಾವಾಣಿ'ಗೆ ತಿಳಿಸಿದರು.

'ಸೇಡು ತೀರಿಸಿಕೊಳ್ಳುವ ಹುನ್ನಾರ'

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಶೇಕಡಾ 40ರಷ್ಟು ಕಮಿಷನ್ ಆರೋಪದಲ್ಲಿ ಯಾವ ನಿರ್ದಿಷ್ಟ ಪ್ರಕರಣವೂ ಇಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜಕೀಯ ಸೇಡು ತೀರಿಸಿಕೊಳ್ಳುವ ದುರುದ್ದೇಶದಿಂದ ತನಿಖೆಗೆ ಆದೇಶಿಸಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ದೂರಿದರು.

ಕೋವಿಡ್ ಅವಧಿಯ ಭ್ರಷ್ಟಾಚಾರ ಮತ್ತು ಶೇ 40ರಷ್ಟು ಕಮಿಷನ್ ಆರೋಪದ ಕುರಿತು ತನಿಖೆಗೆ ಆಯೋಗ ನೇಮಿಸಿರುವ ಕುರಿತು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಟೆಂಡರ್ ಅಕ್ರಮಗಳಿಗೆ ಸಂಬಂಧಿಸಿದ ಹಲವು ದೂರುಗಳು ಲೋಕಾಯುಕ್ತದಲ್ಲಿ ಬಾಕಿ ಇವೆ. ಇನ್ನೂ ಹೆಚ್ಚಿನ ತನಿಖೆ ನಡೆಸುತ್ತಾರಾ? ಹೊಸ ದೂರುಗಳನ್ನು ಸಲ್ಲಿಸಲು ಅವಕಾಶ ಕೊಡುತ್ತಾರಾ' ಎಂದು ಪ್ರಶ್ನಿಸಿದರು.

'ನಮ್ಮ ಅವಧಿಯ ಪ್ರಕರಣಗಳನ್ನು ತನಿಖೆ ನಡೆಸಿ ಎಂದು ನಾವೇ ಹೇಳಿದ್ದೇವೆ. ಇವರ ಕಾಲದ ಅಕ್ರಮಗಳ ಬಗ್ಗೆಯೂ ತನಿಖೆ ನಡೆಸುತ್ತಾರಾ? ಅವರ ವಿರುದ್ಧದ ಆರೋಪಗಳ ಬಗ್ಗೆ ತನಿಖೆಗೆ ಏಕೆ ಹಿಂದೇಟು ಹಾಕುತ್ತಾರೆ? ಇದು ರಾಜಕೀಯವಾಗಿ ಅಧಿಕಾರ ದುರುಪಯೋಗಪಡಿಸಿಕೊಳ್ಳುವ ಪ್ರಯತ್ನ. ಪಿಎಸ್‌ಐ ನೇಮಕಾತಿ ಅಕ್ರಮದ ಕುರಿತು ಪೊಲೀಸರು ತನಿಖೆ ನಡೆಸಿ ಆರೋಪಪಟ್ಟಿ ಸಲ್ಲಿಸಿದ್ದಾರೆ. ಈಗ ಇವರು ಆರೋಪಪಟ್ಟಿಯಲ್ಲಿ ಹೆಸರಿರುವವರನ್ನು ರಕ್ಷಣೆ ಮಾಡುತ್ತಾರಾ? ಇನ್ನೊಂದು ಆಯಾಮದಲ್ಲಿ ತನಿಖೆ ನಡೆಸುತ್ತಾರಾ' ಎಂದು ಕೇಳಿದರು.

ಅತಿರೇಕದ ವರ್ತನೆ: ವೈದ್ಯ ಅಮಾನತು

ಪ್ರಜಾವಾಣಿ ವಾರ್ತೆ



ಡಾ.ಗೌತಮ್ ಪಾಟೀಲ

ಗದಗ: ತಾಯಿ, ಮಗುವಿಗೆ ಸರಿಯಾಗಿ ಚಿಕಿತ್ಸೆ ನೀಡುವಂತೆ ಆಗ್ರಹಿಸಿದ ರೋಗಿಗಳ ಸಂಬಂಧಿಕರ ಮೇಲೆ ಜಿಲ್ಲಾ ಆಸ್ಪತ್ರೆ (ಜಿಮ್ಸ್) ವೈದ್ಯ ಗೌತಮ್ ಪಾಟೀಲ ಅತಿರೇಕದಿಂದ ವರ್ತಿಸಿ, ಬೆದರಿಕೆ ಹಾಕಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡಿದ್ದು, ವೈದ್ಯರನ್ನು ಅಮಾನತು ಮಾಡಲಾಗಿದೆ.

ಲಕ್ಷ್ಮೇಶ್ವರ ತಾಲ್ಲೂಕಿನ ಸೂರಣಗಿಯ ಮುಷ್ತಾಕ್ ಅಲಿ ಕೆಲವು ದಿನಗಳ ಹಿಂದೆ ಹೆರಿಗೆಗಾಗಿ ಹೆಂಡತಿಯನ್ನು ಜಿಲ್ಲಾ ಆಸ್ಪತ್ರೆಗೆ ಸೇರಿಸಿದ್ದರು. ಹೆರಿಗೆ ಆದ ಬಳಿಕ ಮಗು ಜಾಂಡೀಸ್‌ನಿಂದ ಬಳಲುತ್ತಿತ್ತು. 'ಜಿಮ್ಸ್ ವೈದ್ಯರು ಸರಿಯಾಗಿ ಚಿಕಿತ್ಸೆ ನೀಡುತ್ತಿಲ್ಲ' ಎಂದು ಆರೋಪಿಸಿ ಮುಷ್ತಾಕ್, 'ನವಜಾತ ಶಿಶು, ಬಾಣಂತಿ ಆರೈಕೆ ಸರಿಯಾಗಿ ಮಾಡದಿದ್ದರೆ ಆರೋಗ್ಯ ಸಚಿವರಿಗೆ ದೂರು ನೀಡಬೇಕಾಗುತ್ತದೆ' ಎಂದು ಎಚ್ಚರಿಸಿದ್ದಾರೆ.

ಮುಷ್ತಾಕ್ ಮಾತಿನಿಂದ ಕೆರಳಿದ ಡಾ.ಗೌತಮ್ ಪಾಟೀಲ, 'ಯಾರಿಗೆ ಫೋನ್ ಮಾಡುತ್ತೀಯಾ ಮಾಡು, ಮಾತಾಡ್ತೇನೆ' ಎಂದು ನಿಂದಿಸಿದ್ದಾರೆ. ಮುಷ್ತಾಕ್ ನೆರವಿಗೆ ಧಾವಿಸಿದ ಸಂಬಂಧಿಕರ ವಿರುದ್ಧವೂ ತಿರುಗಿ ಬಿದ್ದಿದ್ದಾರೆ.

'ವಿಡಿಯೊ ಮಾಡಿದರೆ ಹೊಡೆತ ಬೀಳುತ್ತವೆ' ಎಂದು ಮುಷ್ಟಿ ಬಿಗಿ ಹಿಡಿದು ಗುದ್ದುವಂತೆ ಮಾಡಿ, ಬೆದರಿಸಿರುವುದು ವಿಡಿಯೊದಲ್ಲಿದೆ. ಈ ವರ್ತನೆಗೆ ರೋಗಿಗಳು ಗಾಬರಿಯಾಗಿದ್ದಾರೆ.

> ಆಸ್ಪತ್ರೆಗೆ ಬರುವವರೊಂದಿಗೆ ವೈದ್ಯರು ಸೌಜನ್ಯದಿಂದ ವರ್ತಿಸಬೇಕು. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲಾಗುವುದು
> **ಡಾ.ಶರಣ ಪ್ರಕಾಶ ಪಾಟೀಲ**
> ವೈದ್ಯಕೀಯ ಶಿಕ್ಷಣ ಸಚಿವ

ವೈದ್ಯನಿಗೆ 'ಬೈಪೋಲಾರ್ ಡಿಸಾರ್ಡರ್'

'ಡಾ.ಗೌತಮ್ ಪಾಟೀಲ ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಚ್‌ಎಂ) ನಿಂದ ಬಂದಿದ್ದಾರೆ. ಇವರು ಜಿಮ್ಸ್ ವೈದ್ಯರಲ್ಲ. ಬುಧವಾರ (ಆ.23) ಈ ಘಟನೆ ನಡೆದಿದೆ. ಅವರನ್ನು ವಿಚಾರಿಸಿ ಕ್ರಮ ಕೈಗೊಳ್ಳಲಾಗಿದೆ. ವೈದ್ಯ 'ಬೈಪೋಲಾರ್ ಡಿಸಾರ್ಡರ್' ನಿಂದ ಬಳಲುತ್ತಿದ್ದು ಚಿಕಿತ್ಸೆ ಪಡೆಯುತ್ತಿರುವುದಾಗಿ ಹೇಳಿದ್ದಾರೆ. ಅವರು ಹೇಗೆ ವರ್ತಿಸಿದರು ಎಂಬುದು ಅವರಿಗೇ ನೆನಪಿರುವುದಿಲ್ಲ. ಅವರನ್ನು ತಕ್ಷಣ ಅಮಾನತು ಮಾಡಲಾಗಿದೆ' ಎಂದು ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕೋಟಾ: ಆತ್ಮಹತ್ಯೆ ತಡೆಗೆ ಬಲೆಯ ರಕ್ಷಣೆ

ಕೋಟಾ (ಪಿಟಿಐ): ಪ್ರವೇಶ ಪರೀಕ್ಷೆಗಳ ಕೋಚಿಂಗ್‌ತಾಣವಾಗಿರುವರಾಜಸ್ಥಾನದ ಕೋಟಾದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳನ್ನು ತಡೆಯುವ ದಿಸೆಯಲ್ಲಿ ಹಾಸ್ಟೆಲ್‌ಗಳ ಬಾಲ್ಕನಿ, ಹಜಾರಗಳಿಗೆ ಬಲೆಗಳನ್ನು ಅಳವಡಿಸಲಾಗುತ್ತಿದೆ. ಕೊಠಡಿಗಳಿಗೆ ಸ್ಪ್ರಿಂಗ್ ಫ್ಯಾನ್‌ಗಳನ್ನು ಅಳವಡಿಸುವ ಕ್ರಮ ಕೈಗೊಂಡ ಬಳಿಕ ಹಾಸ್ಟೆಲ್‌ಗಳ ಮಾಲೀಕರು ಈ ಕ್ರಮಕ್ಕೆ ಮುಂದಾಗಿದ್ದಾರೆ.

ಇದರಿಂದ ಹಾಸ್ಟೆಲ್‌ಗಳಲ್ಲಿ ಆತ್ಮಹತ್ಯೆಗಳನ್ನು ತಡೆಯಲು ಸಾಧ್ಯವಾಬಹುದು ಎಂದು ಹಾಸ್ಟೆಲ್ ಮಾಲೀಕರು ಅಭಿಪ್ರಾಯಪಟ್ಟಿದ್ದಾರೆ.

'150 ಕೆ.ಜಿ. ತೂಕವನ್ನು ಹೊರುವ ಸಾಮರ್ಥ್ಯದ ಬಲೆಗಳನ್ನು ಹಾಸ್ಟೆಲ್‌ನ ಬಾಲ್ಕನಿ ಮತ್ತು ಹಜಾರಕ್ಕೆ ಅಳವಡಿಸಿದ್ದೇವೆ. ವಿದ್ಯಾರ್ಥಿಗಳು ಎತ್ತರದ ಅಂತಸ್ತಿನಿಂದ ಹಾರಿದರೂ ಅವರ ಪ್ರಾಣಕ್ಕೆ ಅಪಾಯವಿಲ್ಲ' ಎಂದು ವಿದ್ಯಾರ್ಥಿನಿಯರ ಹಾಸ್ಟೆಲ್‌ನ ಮಾಲೀಕ ವಿನೋದ್ ಗೌತಮ್ ಅವರು ಹೇಳಿದ್ದಾರೆ.

ವಿದ್ಯಾರ್ಥಿಗಳು ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಹಾಸ್ಟೆಲ್ ಕೊಠಡಿಗಳಲ್ಲಿ ಸ್ಪ್ರಿಂಗ್ ಸೀಲಿಂಗ್ ಫ್ಯಾನ್‌ಗಳನ್ನು ಅಳವಡಿಸಲು ಜಿಲ್ಲಾಡಳಿತವು ವಾರದ ಹಿಂದೆ ಆದೇಶ ನೀಡಿತ್ತು. ಸ್ಪ್ರಿಂಗ್ ಅಳವಡಿಸಿದ ಫ್ಯಾನ್‌ಗೆ ಜೋತುಬೀಳುತ್ತಿದ್ದಂತೆ ಸ್ಪ್ರಿಂಗ್ ಕೆಳಕ್ಕೆ ಜಗ್ಗುವುದರಿಂದ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವಿಲ್ಲ.

ಮತ್ತಿಬ್ಬರು ಆತ್ಮಹತ್ಯೆ

ಕೋಟಾದಲ್ಲಿ ಭಾನುವಾರ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೀಟ್‌ಗೆ ಅಧ್ಯಯನ ನಡೆಸುತ್ತಿದ್ದ ಮಹಾರಾಷ್ಟ್ರದ ಆವಿಷ್ಕರ್ ಶುಭಾಂಗಿ ಹಾಗೂ ಬಿಹಾರದ ಆದರ್ಶ್ ಆತ್ಮಹತ್ಯೆ ಮಾಡಿಕೊಂಡವರು. ಪ್ರಸಕ್ತ ವರ್ಷ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆ 22ಕ್ಕೇರಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಒಂದು ತಿಂಗಳು ಯಾವುದೇ ಪರೀಕ್ಷೆ ನಡೆಸದಂತೆ ಕೇಂದ್ರಗಳಿಗೆ ಜಿಲ್ಲಾಡಳಿತ ಸೂಚನೆ ನೀಡಿದೆ.

'ಪೇಪರ್ ಇನ್ ಮನಿ ಔಟ್' ಕೃತಿ ಬಿಡುಗಡೆ ಕಾರ್ಯಕ್ರಮ

ಕಪ್ಪು ಹಣ ತರುವಲ್ಲಿ ವಿಫಲ: ಸುಬ್ರಮಣಿಯನ್ ಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶದಲ್ಲಿರುವ ಕಪ್ಪು ಹಣವನ್ನು ದೇಶಕ್ಕೆ ತರುವಲ್ಲಿ ಬಿಜೆಪಿ ವಿಫಲವಾಗಿದೆ. ಭಾರತೀಯರು ಇರಿಸಿರುವ ಮೂರು ಲಕ್ಷ ಕೋಟಿಯಷ್ಟು ಕಪ್ಪು ಹಣ ವಿದೇಶಿ ಬ್ಯಾಂಕ್‌ಗಳಲ್ಲಿ ಇನ್ನೂ ಉಳಿದಿದೆ' ಎಂದು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ದೂರಿದರು.


ನಗರದಲ್ಲಿ ವಿರಾಟ್ ಹಿಂದೂಸ್ತಾನ್ ಸಂಘಟನೆ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಅಯ್ಯರ್ ಮತ್ತು ಜಗದೀಶ್ ಶೆಟ್ಟಿ ಬರೆದಿರುವ 'ಪೇಪರ್ ಇನ್ ಮನಿ ಔಟ್' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಸೋನಿಯಾ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಹೆದರುತ್ತಿದ್ದಾರೆ' ಎಂದು ಟೀಕಿಸಿದರು.

'ಕಪ್ಪು ಹಣವನ್ನು ದೇಶಕ್ಕೆ ತರಲು ಬಿಗಿ ಕ್ರಮಗಳನ್ನು ಕೈಗೊಳ್ಳುವಂತೆ ನಾನು ಪ್ರಧಾನಿಯವರಿಗೆ ಮನವಿ ಮಾಡಿದ್ದೆ. ಆದರೆ, ಅವರು ಉತ್ಸಾಹ ತೋರಲಿಲ್ಲ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹಣಕಾಸು ಸಚಿವಾಲಯದ ಮೇಲೆ ಹಿಡಿತವಿಲ್ಲ. ಅವರ ಸಚಿವಾಲಯವು ಪ್ರಧಾನಿ ಕಚೇರಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

ಆದಾಯ ತೆರಿಗೆ ಪದ್ಧತಿಯಿಂದ ದೇಶದ ಮಧ್ಯಮ ವರ್ಗ ಮತ್ತು ಸಂಬಳ ಆಧರಿಸಿ ಜೀವನ ನಡೆಸುವ ಕುಟುಂಬಗಳಿಗೆ ಹೊರೆಯಾಗುತ್ತಿದೆ. ಆದಾಯ ತೆರಿಗೆ ಪದ್ಧತಿಯನ್ನು ರದ್ದುಪಡಿಸಿ, ಮಾರುಕಟ್ಟೆ ಆಧಾರಿತ ಆರ್ಥಿಕತೆಯನ್ನು ಬಲಪಡಿಸಬೇಕು ಎಂದು ಆಗ್ರಹಿಸಿದರು.

'ಗ್ಯಾರಂಟಿ'ಗಳಿಂದ ಭಿಕ್ಷುಕರು: 'ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರನ್ನು ಭಿಕ್ಷುಕರನ್ನಾಗಿ ಮಾಡಲಿವೆ. ಇವು ಮೂರ್ಖತನದ ಯೋಜನೆಗಳು' ಎಂದರು.

ರಾಜ್ಯ ಸರ್ಕಾರ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಹಿಂದಿನ ಸರ್ಕಾರವೂ ಆ ಕೆಲಸ ಮಾಡಲಿಲ್ಲ. ರಸ್ತೆಗಳ ಸುಧಾರಣೆಗೆ ಒತ್ತು ನೀಡಬೇಕು. ಆ ಮೂಲಕ ದುಡಿಯುವ ಜನರಿಗೆ ಕೆಲಸ ನೀಡಬೇಕು ಎಂದರು.




ಬೆಂಗಳೂರಿನಲ್ಲಿ ಭಾನುವಾರ ನಡೆದ 'ಪೇಪರ್ ಇನ್ ಮನಿ ಔಟ್' ಕೃತಿ ಬಿಡುಗಡೆ ಸಮಾರಂಭದಲ್ಲಿ ಎಡದದಿಂದ ಲೇಖಕ ಶ್ರೀ ಅಯ್ಯರ್ ಮತ್ತು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಪುಸ್ತಕದ ಕುರಿತು ಮಾತುಕತೆಯಲ್ಲಿ ತೊಡಗಿರುವುದು
–ಪ್ರಜಾವಾಣಿ ಚಿತ್ರ

ಸೋಮವಾರ, ಆಗಸ್ಟ್ 28, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 239 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಬಾಹ್ಯಾಕಾಶ ಕ್ಷೇತ್ರದಲ್ಲಿ ಹಲವು ರೀತಿಯ ಕೋರ್ಸ್‌ಗಳಿವೆ. ಅವುಗಳಿಗೆ ತಕ್ಕಂತೆ ಉದ್ಯೋಗಗಳೂ ಇವೆ.



ಆಳ-ಅಗಲ
ಕೈಗೆಟಕುವ ಮನೆಗಳಿಗೆ ಬಡ್ಡಿಯೇ ದುಬಾರಿ!
ಸರ್ಕಾರಕ್ಕೆ ಶತದಿನದ ಸಂಭ್ರಮ 5
‘ಚಂದ್ರಯಾನ: ನವಭಾರತ ಚೈತನ್ಯದ ಸಂಕೇತ’ 9
ದಲಿತ ವ್ಯಕ್ತಿಗೆ ಥಳಿಸಿ ಹತ್ಯೆ: 8 ಮಂದಿ ಸೆರೆ 9
ತಗ್ಗಿದ ಎಫ್‌ಡಿಐ ಒಳಹರಿವು 8



ನೀರಜ್ ವಿಶ್ವ ಚಾಂಪಿಯನ್

ಬುಡಾಪೆಸ್ಟ್: ಭಾರತದ ನೀರಜ್ ಚೋಪ್ರಾ, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಜಾವೆಲಿನ್ ಎಸೆತದಲ್ಲೂ ಚಿನ್ನದ ಪದಕ ಗೆದ್ದುಕೊಂಡರು. ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ಅವರು 88.17 ಮೀ. ದೂರ ಎಸೆದು ಮೊದಲ ಸ್ಥಾನ ಪಡೆದರು.

2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಚಿನ್ನ ಗೆದ್ದಿದ್ದ ನೀರಜ್ ಈ ಮೂಲಕ ವಿಶ್ವದ ಪ್ರಮುಖ ಕ್ರೀಡಾ ಕೂಟಗಳಲ್ಲಿ ಚಾಂಪಿಯನ್ ಆದ ಸಾಧನೆಗೆ ಪಾತ್ರರಾದರು.

10

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬಿ20 ನಾಯಕರ ಶೃಂಗ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

ಕ್ರಿಪ್ಟೊ ನಿರ್ವಹಣೆಗೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ರಿಪ್ಟೊಕರೆನ್ಸಿಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ನಿಭಾಯಿಸುವುದಕ್ಕಾಗಿ ಜಾಗತಿಕ ಚೌಕಟ್ಟೊಂದನ್ನು ರೂಪಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕರೆ ಕೊಟ್ಟಿದ್ದಾರೆ. ಭಾರತೀಯ ಕೈಗಾರಿಕಾ ಮಹಾಸಂಘವು (ಸಿಐಐ) ಆಯೋಜಿಸಿದ್ದ ಬಿ20 ಶೃಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕ್ರಿಪ್ಟೊಕರೆನ್ಸಿಗೆ ಸಂಬಂಧಿಸಿದ ವಿಚಾರಗಳನ್ನು ನಿರ್ವಹಿಸಲು ದೇಶಗಳು ಸಮಗ್ರವಾದ ಧೋರಣೆಯನ್ನು ಅಭಿವೃದ್ಧಿಪಡಿಸಬೇಕು. ಕೃತಕ ಬುದ್ಧಿಮತ್ತೆಯನ್ನು ನೈತಿಕವಾಗಿ ಬಳಸಲು ಉತ್ತೇಜನ ನೀಡಬೇಕು ಎಂದು ಅವರು ಹೇಳಿದ್ದಾರೆ. ಜಿ20 ಶೃಂಗಸಭೆಯು ದೆಹಲಿಯಲ್ಲಿ ನಡೆಯುವುದಕ್ಕೆ ಕೆಲವೇ ದಿನಗಳ ಮೊದಲು ಮೋದಿ ಅವರು ಈ ಹೇಳಿಕೆ ನೀಡಿರುವುದು ಮಹತ್ವ ಪಡೆದುಕೊಂಡಿದೆ.

ಕ್ರಿಪ್ಟೊಕರೆನ್ಸಿಗೆ ಸಂಬಂಧಿಸಿದ ವಿಚಾರಗಳನ್ನು ಜಿ20 ದೇಶಗಳ ಹಣಕಾಸು ಸಚಿವರು ಮತ್ತು ಕೇಂದ್ರೀಯ ಬ್ಯಾಂಕ್‌ಗಳ ಗವರ್ನರ್‌ಗಳ ಸಭೆಗಳಲ್ಲಿ ಈಗಾಗಲೇ ಚರ್ಚೆಗೆ ಒಳಪಡಿಸಲಾಗಿದೆ. ಭಾರತದ ಅಧ್ಯಕ್ಷತೆಯಲ್ಲಿ ಜಿ20 ಶೃಂಗಸಭೆಯು ನಡೆಯುತ್ತಿದೆ.

> **ಕ್ರಿಪ್ಟೊಕರೆನ್ಸಿಗೆ ಸಂಬಂಧಿಸಿ ದೊಡ್ಡ ಸವಾಲು ಈಗ ನಮ್ಮ ಮುಂದೆ ಇದೆ. ಈ ವಿಚಾರದಲ್ಲಿ ಎಲ್ಲ ಸಮಸ್ಯೆಗಳಿಗೂ ಪರಿಹಾರವಿರುವ ಹೆಚ್ಚು ಸಮಗ್ರವಾದ ವ್ಯವಸ್ಥೆ ರೂಪಿಸಬೇಕು**
> **ನರೇಂದ್ರ ಮೋದಿ,** ಪ್ರಧಾನಿ

ಜಾಗತಿಕ ಮಟ್ಟದಲ್ಲಿ ಸಹಭಾಗಿ ವ್ಯವಸ್ಥೆಯೊಂದನ್ನು ಅಭಿವೃದ್ಧಿ ಪಡಿಸುವ ವಿಚಾರವನ್ನು ಸೆಪ್ಟೆಂಬರ್ 9 ಮತ್ತು 10ರಂದು ನಡೆಯಲಿರುವ ಜಿ20 ನಾಯಕರ ಸಭೆಯಲ್ಲಿ ಭಾರತ ಬಲವಾಗಿ ಪ್ರತಿಪಾದಿಸಲಿದೆ ಎಂಬ ಸುಳಿವನ್ನು ಪ್ರಧಾನಿಯವರ ಹೇಳಿಕೆಯು ನೀಡಿದೆ.

ಡಿಜಿಟಲ್ ಮಾರ್ಗದಲ್ಲಿ ಹಣ ಅಕ್ರಮ ವರ್ಗಾವಣೆ ಮತ್ತು ಭಯೋತ್ಪಾದನೆಗೆ ಹಣ ನೀಡಿಕೆಯ ಅಪಾಯ ಇದೆ. ಹಾಗಾಗಿಯೇ ಜಾಗತಿಕ ಮಟ್ಟದ ಸಹಭಾಗಿತ್ವದ ಕುರಿತು ಭಾರತ ಉತ್ಸುಕವಾಗಿದೆ. ಸಹಭಾಗಿತ್ವದಿಂದಾಗಿ ಈ ಕ್ಷೇತ್ರದಲ್ಲಿ ಆವಿಷ್ಕಾರಗಳ ಸಾಧ್ಯತೆ, ಸ್ಪರ್ಧಾತ್ಮಕತೆ ಹೆಚ್ಚಲಿದೆ ಎಂದು ಹೇಳಲಾಗಿದೆ.

ಇನ್ನೊಂದು ಸುದ್ದಿ 09



ನವದೆಹಲಿಯಲ್ಲಿ ಭಾನುವಾರ ನಡೆದ ‘ಬಿ20’ ಶೃಂಗಸಭೆಯಲ್ಲಿ ಉದ್ಯಮಿಗಳ ಜೊತೆ ಪ್ರಧಾನಿ ಮೋದಿ ಅವರು, ಉಭಯ ಕುಶಲೋಪರಿ ನಡೆಸಿದರು —ಪಿಟಿಐ ಚಿತ್ರ

‘ವಿಶ್ವ ಗ್ರಾಹಕ ರಕ್ಷಣೆ ದಿನ ಆಚರಿಸಿ’

ನವದೆಹಲಿ: ಗ್ರಾಹಕರ ಹಿತಾಸಕ್ತಿಯ ಕುರಿತು ಮಾತನಾಡಲು ಜಾಗತಿಕ ವ್ಯಾಪಾರೋದ್ಯಮವು ಒಂದು ದಿನವನ್ನು ಮೀಸಲಿಡಬೇಕು ಎಂದು ಮೋದಿ ಸಲಹೆ ನೀಡಿದ್ದಾರೆ. ‘ಗ್ರಾಹಕ ಹಕ್ಕುಗಳ ಕುರಿತು ಮಾತನಾಡುವಾಗ ನಮ್ಮ ತಲೆಯಲ್ಲಿ ಗ್ರಾಹಕ ರಕ್ಷಣೆಯ ವಿಚಾರವೂ ಇರಬೇಕು. ಹಾಗೆ ಮಾಡಿದರೆ, ತನ್ನಿಂತಾನಾಗಿಯೇ ಗ್ರಾಹಕ ಹಕ್ಕುಗಳ ರಕ್ಷಣೆಯೂ ಆಗಿಬಿಡುತ್ತದೆ. ಗ್ರಾಹಕ ರಕ್ಷಣೆ ದಿನವೊಂದನ್ನು ನಿಗದಿ ಮಾಡುವುದರಿಂದ ವ್ಯಾಪಾರೋದ್ಯಮ ಮತ್ತು ಗ್ರಾಹಕರ ನಡುವೆ ವಿಶ್ವಾಸ ಬಲಗೊಳ್ಳುತ್ತದೆ’ ಎಂದು ಮೋದಿ ವಿವರಿಸಿದ್ದಾರೆ. ಗ್ರಾಹಕರು ಎಂಬ ವ್ಯಾಖ್ಯೆಯು ಚಿಲ್ಲರೆ ಗ್ರಾಹಕರಿಗೆ ಸೀಮಿತ ಅಲ್ಲ. ಜಾಗತಿಕ ವ್ಯಾಪಾರ, ಜಾಗತಿಕ ಸರಕು, ಸೇವೆಗಳ ಗ್ರಾಹಕರಾಗಿರುವ ದೇಶಗಳು ಕೂಡ ಗ್ರಾಹಕರೇ ಎಂದರು.

ಚಂದ್ರನ ತಾಪ 70 ಡಿಗ್ರಿ ಸೆ.

ಬೆಂಗಳೂರು (ಪಿಟಿಐ): ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದಿರುವ ಲ್ಯಾಂಡರ್ ‘ವಿಕ್ರಮ್’, ಚಂದ್ರನ ಮೇಲ್ಮೈ ತಾಪಮಾನ ಕುರಿತ ಮಾಹಿತಿ ರವಾನಿಸಿದೆ. ಗರಿಷ್ಠ 70 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರುವುದು ಕಂಡುಬಂದಿದೆ ಎಂದು ಇಸ್ರೊ ಹೇಳಿದೆ.

ಚಂದ್ರನ ಮೇಲ್ಮೈನ ತಾಪಮಾನದಲ್ಲಾಗುವ ಏರಿಳಿತ ಕುರಿತ ವಿವರ ಹಾಗೂ ನಕ್ಷೆಯನ್ನು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಇಸ್ರೊ ಭಾನುವಾರ ಹಂಚಿಕೊಂಡಿದೆ.


ದಕ್ಷಿಣ ಧ್ರುವದ ಅಂಗಳದ ತಾಪಮಾನದಲ್ಲಿ ಕಂಡುಬರುವ ಏರಿಳಿತವನ್ನು ದಾಖಲಿಸಿ, ರವಾನಿಸುವ ಸಲುವಾಗಿ ಲ್ಯಾಂಡರ್‌ನಲ್ಲಿ ‘ಚಂದ್ರಾಸ್ ಸರ್ಫೇಸ್ ಥರ್ಮೋಫಿಜಿಕಲ್ ಎಕ್ಸ್‌ಪರಿಮೆಂಟ್’ (ಚೇಸ್ಟ್) ಎಂಬ ಸಾಧನವನ್ನು ಅಳವಡಿಸಲಾಗಿದೆ. ಚಂದ್ರನ ನೆಲದ ಮೇಲ್ಪದರದ ತಾಪಮಾನ ಮಾತ್ರವಲ್ಲ, 10 ಸೆಂ.ಮೀ. ಆಳದಷ್ಟು ಮಣ್ಣನ್ನು ಕೊರೆದು ಅಲ್ಲಿನ ತಾಪಮಾನ ದಾಖಲಿಸುವ ಸಾಮರ್ಥ್ಯವನ್ನೂ ‘ಚೇಸ್ಟ್’ ಹೊಂದಿದೆ. 10 ‘ತಾಪಮಾನ ಸಂವೇದಕ’ಗಳನ್ನು ಅಳವಡಿಸಲಾಗಿದೆ ಎಂದು ಇಸ್ರೊ ಹೇಳಿದೆ.

‘ತಾಪಮಾನ ಕುರಿತು ಚೇಸ್ಟ್ ಕಳಿಸಿರುವ ದತ್ತಾಂಶ ನಮಗೆ ಅಚ್ಚರಿಯನ್ನುಂಟು ಮಾಡಿದೆ. ಚಂದ್ರನ ಮೇಲ್ಮೈನಲ್ಲಿ 20 ಡಿಗ್ರಿಯಿಂದ 30 ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪಮಾನ ಇರಬಹುದು ಎಂಬುದು ನಮ್ಮ ನಂಬಿಕೆಯಾಗಿತ್ತು. ಮೇಲ್ಪದರದಲ್ಲಿ 70 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಇದು ನಮ್ಮ ಅಂದಾಜಿಗಿಂತಲೂ ಹೆಚ್ಚು’ ಎಂದು ಇಸ್ರೊ ವಿಜ್ಞಾನಿ ಬಿ.ಎಚ್.ಎಂ.ದಾರುಕೇಶ ಹೇಳಿದ್ದಾರೆ.

‘ಭೂಮಿಯ ಮೇಲ್ಮೈಯಲ್ಲಿ 2ರಿಂದ 3 ಸೆಂ.ಮೀ. ಆಳಕ್ಕೆ ಹೋದರೆ, ತಾಪಮಾನದಲ್ಲಿ 2–3 ಡಿಗ್ರಿ ಸೆಲ್ಸಿಯಸ್‌ನಷ್ಟು ವ್ಯತ್ಯಾಸ ಕಂಡುಬರುತ್ತದೆ. ಅದೇ ಚಂದ್ರನ ಮೇಲ್ಮೈ ಮತ್ತು ಸ್ವಲ್ಪ ಆಳದಲ್ಲಿ ತಾಪಮಾನದಲ್ಲಿ 50 ಡಿಗ್ರಿಗಳಷ್ಟು ವ್ಯತ್ಯಾಸ ಇರುವುದು ಕಂಡುಬಂದಿದ್ದು, ಇದು ಆಸಕ್ತಿಕರ’ ಎಂದು ದಾರುಕೇಶ ಹೇಳಿದ್ದಾರೆ. ‘ಚಂದ್ರನ ಮೇಲ್ಮೈಗಿಂತ ಸ್ವಲ್ಪ ಒಳಗಿನ ತಾಪಮಾನವು ಮೈನಸ್ 10 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕೆಳಗೆ ಕುಸಿಯುತ್ತದೆ. ಹೀಗಾಗಿ, ಚಂದ್ರನಲ್ಲಿನ ತಾಪಮಾನದ ಏರಿಳಿತವು 70 ಡಿಗ್ರಿ ಸೆಲ್ಸಿಯಸ್‌ನಿಂದ ಮೈನಸ್ 10 ಡಿಗ್ರಿ ಸೆಲ್ಸಿಯಸ್ ವರೆಗೆ ಇರುವುದು ಕಂಡುಬಂದಂತಾಗಿದೆ’ ಎಂದಿದ್ದಾರೆ.

‘ಚೇಸ್ಟ್’ ಅಭಿವೃದ್ಧಿ: ಇಸ್ರೊದ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ (ವಿಎಸ್‌ಎಸ್‌ಸಿ) ಬಾಹ್ಯಾಕಾಶ ಭೌತವಿಜ್ಞಾನ ಪ್ರಯೋಗಾಲಯದ (ಎಸ್‌ಪಿಎಲ್) ವಿಜ್ಞಾನಿಗಳ ತಂಡ ‘ಚೇಸ್ಟ್’ ಅನ್ನು ಅಭಿವೃದ್ಧಿಪಡಿಸಿದೆ. ಅಹಮದಾಬಾದ್‌ನಲ್ಲಿರುವ ಭೌತವಿಜ್ಞಾನ ಸಂಶೋಧನಾ ಪ್ರಯೋಗಾಲಯದ ತಜ್ಞರು ಕೈಜೋಡಿಸಿದ್ದರು ಎಂದು ಇಸ್ರೊ ತಿಳಿಸಿದೆ.

ಚಂದಿರನ ಮೇಲ್ಮೈನಲ್ಲಿ ಆಳಕ್ಕೆ ತಕ್ಕಂತೆ ತಾಪಮಾನದಲ್ಲಿ ಕಂಡುಬಂದ ಏರಿಳಿತ



ಕೋಲಾರ: ಮರ್ಯಾದೆಗೇಡು ಹತ್ಯೆ

ಪ್ರಜಾವಾಣಿ ವಾರ್ತೆ

ಕೋಲಾರ: ಪರಿಶಿಷ್ಟ ಪಂಗಡದ (ಎಸ್‌ಟಿ) ಬಾಲಕನನ್ನು ಪ್ರೀತಿಸಿದ ತೊಟ್ಲಿ ಗ್ರಾಮದ ರಮ್ಯಾ (19) ಎಂಬ ಒಕ್ಕಲಿಗ ಯುವತಿಯನ್ನು ಆಕೆಯ ತಂದೆಯೇ ಶುಕ್ರವಾರ ಕೊಂದು, ತಮ್ಮಂದಿರ ಸಹಾಯದೊಂದಿಗೆ ತೋಟದಲ್ಲಿ ಹೂತು ಹಾಕಿದ್ದಾರೆ.

ಬಳಿಕ, ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಗ್ರಾಮದಲ್ಲಿ ಬಿಂಬಿಸಿದ್ದರು. ಅನುಮಾನಗೊಂಡ ಗ್ರಾಮಸ್ಥರು ಪೊಲೀಸರಿಗೆ ವಿಷಯ ತಲುಪಿಸಿದ್ದರು.

ಯುವತಿಯ ತಂದೆ ವೆಂಕಟೇಶಗೌಡ ಅವರನ್ನು ವಶಕ್ಕೆ ಪಡೆದು ಕೋಲಾರ ಗ್ರಾಮಾಂತರ ಪೊಲೀಸರು ವಿಚಾರಣೆ ನಡೆಸಿದಾಗ ಮರ್ಯಾದೆ ಗೇಡು ಹತ್ಯೆಯ ವಿಷಯ ಬಹಿರಂಗ ಗೊಂಡಿದೆ. ಬಳಿಕ ವೆಂಕಟೇಶಗೌಡ ಹಾಗೂ ಆತನ ತಮ್ಮಂದಿರಾದ ಮೋಹನ್ ಹಾಗೂ ಚೌಡೇಗೌಡ ಅವರನ್ನು ಪೊಲೀಸರು ಬಂಧಿಸಿದ್ದಾರೆ. ವೆಂಕಟೇಶಗೌಡ ಬಾವಮೈದ ಕೋಡಿಕಣ್ಣೂರಿನ ಆಂಜನೇಯರೆಡ್ಡಿ ವಿರುದ್ಧವೂ ಪ್ರಕರಣ ದಾಖಲಾಗಿದೆ.



ರಮ್ಯಾ

5ನೇ ಪುಟ ನೋಡಿ

ಎರಡು ತಿಂಗಳಲ್ಲಿ ಎರಡು ಪ್ರಕರಣ

ಬಂಗಾರಪೇಟೆ ತಾಲ್ಲೂಕಿನ ಬೋಡಗುರ್ಕಿಯಲ್ಲಿ ಜೂನ್ 27ರಂದು ಮರ್ಯಾದೆಗೇಡು ಹತ್ಯೆ ನಡೆದಿತ್ತು. ಪರಿಶಿಷ್ಟ ಜಾತಿಯ ಯುವಕನನ್ನು ಪ್ರೀತಿಸಿದ ಕಾರಣಕ್ಕೆ ಮಗಳನ್ನು ತಂದೆಯೇ ಹತ್ಯೆ ಮಾಡಿದ್ದ ಸಂಬಂಧ ಪ್ರಕರಣ ದಾಖಲಾಗಿತ್ತು. ಪ್ರಿಯತಮೆ ಸಾವಿನ ಸುದ್ದಿ ತಿಳಿದು ಯುವಕ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು.

ಪ್ರೌಢಶಾಲಾ ಶಿಕ್ಷಕರಿಗೆ ಇಲ್ಲ ಪರೀಕ್ಷೆ ಹೊಣೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳ ಕೊಠಡಿ ಮೇಲ್ವಿಚಾರಕರಾಗಿ ಪ್ರೌಢಶಾಲಾ ಶಿಕ್ಷಕರನ್ನು ಬಳಸಿಕೊಳ್ಳದಿರಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದೆ. ಪರೀಕ್ಷೆಗಳಲ್ಲಿ ನಕಲು ತಡೆಗೆ ಇದೇ ಮೊದಲ ಬಾರಿ ಹಲವು ಕ್ರಮಗಳನ್ನು ಜಾರಿಗೆ ತರಲು ರೂಪುರೇಷೆ ಸಿದ್ಧಪಡಿಸಿರುವ ಮಂಡಳಿ, ಪ್ರಾಥಮಿಕ ಶಾಲಾ ಶಿಕ್ಷಕರನ್ನಷ್ಟೇ ಕೊಠಡಿ ಮೇಲ್ವಿಚಾರಕರಾಗಿ ನೇಮಿಸಿಕೊಳ್ಳಲು ತೀರ್ಮಾನಿಸಿದೆ.

ಇದುವರೆಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಪ್ರೌಢಶಾಲಾ ಶಿಕ್ಷಕರು ಕೊಠಡಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದರು. ಒಂದು ಶಾಲೆಯ ಶಿಕ್ಷಕರನ್ನು ಬೇರೊಂದು ಪರೀಕ್ಷಾ ಕೇಂದ್ರಕ್ಕೆ ನಿಯೋಜಿಸಲಾಗುತ್ತಿತ್ತು. ಶಿಕ್ಷಕರ ಕೊರತೆಯಾದಾಗ ಮಾತ್ರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತಿತ್ತು.

> **ನಕಲು ಮಾಡಲು ವಿದ್ಯಾರ್ಥಿಗಳಿಗೆ ಪ್ರೌಢಶಾಲಾ ಶಿಕ್ಷಕರೇ ಸಹಕರಿಸಿರುವುದು ಪತ್ತೆಯಾಗಿದೆ. ಅವರಿಗೆ ಮೇಲ್ವಿಚಾರಣಾ ಜವಾಬ್ದಾರಿ ನೀಡದಿರಲು ನಿರ್ಧರಿಸಲಾಗಿದೆ**
> **ರಿತೇಶ್ ಕುಮಾರ್ ಸಿಂಗ್**
> ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ.

ನಕಲು ಪ್ರಕರಣಗಳ ಕುರಿತು ತನಿಖೆ ನಡೆಸಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಕಾರಿಗಳು, ಕೊಠಡಿ ಮೇಲ್ವಿಚಾರಕ ರಾಗಿ ಕೆಲಸ ಮಾಡಿದ್ದ ಪ್ರೌಢಶಾಲಾ ಶಿಕ್ಷಕರೇ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ್ದನ್ನು ಪತ್ತೆಹಚ್ಚಿದ್ದರು.

ಇಲಾಖೆಯ ಅಧಿಕಾರಿಗಳು ನೀಡಿದ ವರದಿ ಆಧಾರದಲ್ಲಿ ಮುಂದಿನ ಪರೀಕ್ಷೆಗಳಲ್ಲಿ ನಕಲು ತಡೆಯಲು ಪ್ರಾಥಮಿಕ ಶಾಲಾ ಶಿಕ್ಷಕರನ್ನು ಬಳಸಿಕೊಳ್ಳುವ ನಿರ್ಧಾರಕ್ಕೆ ಮಂಡಳಿ ಬಂದಿದೆ. ಅಲ್ಲದೇ, ಒಂದು ಪ್ರೌಢಶಾಲೆಯ ಎಸ್‌ಡಿಎ, ‘ಡಿ’ ಗ್ರೂಪ್ ಸೇರಿದಂತೆ ಇತರೆ ಬೋಧಕೇತರ ಸಿಬ್ಬಂದಿಯನ್ನೂ ಕಡ್ಡಾಯವಾಗಿ ಅದೇ ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸದಂತೆ ನಿಯಮ ರೂಪಿಸಲಾಗಿದೆ.

5ನೇ ಪುಟ ನೋಡಿ


ಅಧಿವೇಶನಕ್ಕೆ ವಿರೋಧ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಆ.29ರಂದು ನಿಗದಿಯಾಗಿರುವ ವಿಧಾನಸಭೆಯ ಒಂದು ದಿನದ ಅಧಿವೇಶನಕ್ಕೆ ಬುಡಕಟ್ಟು ಸಮುದಾಯದ ಸಂಘಟನೆಗಳು ಖಂಡಿಸಿವೆ. ಕಾನೂನು ಸುವ್ಯವಸ್ಥೆ ರಕ್ಷಣೆಯಲ್ಲಿ ಸರ್ಕಾರ ವಿಫಲವಾಗಿದೆ ಎಂದು ಸಿಒಟಿಯು, ಐಟಿಎಲ್‌ಎಫ್ ಆಕ್ರೋಶ ವ್ಯಕ್ತಪಡಿಸಿವೆ.



ಭೂಮಿಕಾ ಕ್ಲಬ್ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಸಭಿಕರು







‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ಭೂಮಿಕಾ ಕ್ಲಬ್ ಭಾನುವಾರ ಆಯೋಜಿಸಿದ್ದ 8ನೇ ಆವೃತ್ತಿಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ನಟಿ ಅರ್ಚನಾ ಜೋಯಿಸ್ ಮಾತನಾಡಿದರು (1) ಆಹಾರದ ಬಗ್ಗೆ ಜಾಗೃತಿ ಮೂಡಿಸಿದ ಅಪರ್ಣಾ ನಾಗೇಂದ್ರ (2) ಹಾಡುಗಳ ಮೂಲಕ ಗಮನ ಸೆಳೆದ ಭಾಗ್ಯಶ್ರೀ ಗೌಡ (3)

‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ‘ಭೂಮಿಕಾ ಕ್ಲಬ್’ನ 8ನೇ ಆವೃತ್ತಿ ಕಾರ್ಯಕ್ರಮ ● ಆರೋಗ್ಯ ಪ್ರಜ್ಞೆಯ ಅರಿವು

ಮನ ಸೆಳೆದ ಸಂಗೀತ, ಏಕಾಂಕ ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಪಾದ ಸಂಗೀತ, ಕಣ್ಣಿಗೆ ಕಂಪಾದ ಏಕಾಂಕ ನಾಟಕ.. ಇವುಗಳ ನಡುವೆ ನಾವು ಯಾವ ಆಹಾರ ಸೇವಿಸಬೇಕು ಎಂಬ ಅರಿವು ಮೂಡಿಸುವ ಗೋಷ್ಠಿ...

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ಭೂಮಿಕಾ ಕ್ಲಬ್ ಕಮಲಾನಗರದ ಕೆಇಎ ಪ್ರಭಾತ್ ರಂಗಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ 8ನೇ ಆವೃತ್ತಿಯ ಕಾರ್ಯಕ್ರಮದ ವಿಶೇಷಗಳಿವು.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ನಡೆದ ಕಾರ್ಯಕ್ರಮಕ್ಕೆ ನಟಿ ಅರ್ಚನಾ ಜೋಯಿಸ್ ಚಾಲನೆ ನೀಡಿದರು. ‘ಎರಡು ಜಡೆ ಸೇರಲ್ಲ ಎಂಬ ವಾಡಿಕೆ ಮಾತು ಸರಿಯಲ್ಲ. ನಾವು ಮಹಿಳೆಯರು ಉತ್ತಮ ಚಟುವಟಿಕೆಗಳನ್ನು ಮಾಡುತ್ತಿಲ್ಲವೇ’ ಎಂದೂ ಪ್ರಶ್ನಿಸಿದರು.

‘ಸಿನಿಮಾ ರಂಗಕ್ಕೆ ಬರಬೇಕು ಎಂದು ಬಂದವಳು ನಾನಲ್ಲ. ಸಿನಿಮಾಗಳ ಬಗ್ಗೆ ಕುತೂಹಲದಿಂದ ಹೋದಾಗ ಅವಕಾಶ ಸಿಕ್ಕಿತು. ಅಲ್ಲಿಯವರೆಗೆ ಭರತನಾಟ್ಯವೇ ಎಲ್ಲವೂ ಆಗಿತ್ತು. ಇಂದು, ನೃತ್ಯ, ನಟನೆ ಎರಡೂ ಒಂದೇ ರೀತಿ ತೂಗುವಂಥವುಗಳು ಎಂಬುದು ಅರಿವಾಗಿದೆ’ ಎಂದು ತಿಳಿಸಿದರು.

‘ಯಾವುದೋ ಸ್ಫೂರ್ತಿಯಿಂದ ಸಿನಿಮಾ ಮಾಡಲಾಗುತ್ತದೆ. ಅದು ಪ್ರೇಕ್ಷಕರ ಮೇಲೆ ಪ್ರಭಾವ ಬೀರಿದಾಗ ಯಶಸ್ವಿಯಾಗುತ್ತದೆ. ಹಾಗಾಗಿ ಸ್ಫೂರ್ತಿ ಮತ್ತು ಪ್ರಭಾವ ಒಂದೇ ನಾಣ್ಯದ ಎರಡು ಮುಖಗಳು’ ಎಂದು ವಿಶ್ಲೇಷಿಸಿದರು.

‘ಸಿನಿಮಾ ರಂಗದಲ್ಲಿ ನನಗೆ ನಾನೇ ಗಡಿ ಹಾಕಿಕೊಂಡಿದ್ದೇನೆ. ಆ ಗಡಿ ಮೀರುವ ಪಾತ್ರಗಳನ್ನು ಮಾಡುವುದಿಲ್ಲ. ಏಕೆಂದರೆ, ಸಿನಿಮಾ ವೀಕ್ಷಕರಲ್ಲಿ ಯಾರೋ ಒಬ್ಬರಿಗೆ ನಾನು ಮಾಡಿದ ಪಾತ್ರದಂತೆ ಆಗಬೇಕು ಎಂದು ಅನ್ನಿಸಿದರೆ, ಆ ಪಾತ್ರವು ಮಾದರಿಯಾಗಿರಬೇಕು. ದಾರಿ ತಪ್ಪಿಸುವಂತಿರಬಾರದು’ ಎಂದು ಹೇಳಿದರು. ಎನ್.ಆರ್. ಪುರದ ಭಾಗ್ಯಶ್ರೀ ಗೌಡ ಅವರು ಹಾಡಿದ ‘ತಾಯೇ ನಿನ್ನ ಪ್ರೀತಿಯ ಬಾಗಿಲು ಎಲ್ಲಕ್ಕೂ ಮಿಗಿಲು’, ‘ದೀಪವೂ ನಿನ್ನದೇ, ಗಾಳಿಯೂ ನಿನ್ನದೇ ಆರದಿರಲಿ ಬೆಳಕು’ ಎಂಬ ಭಾವಗೀತೆಗಳು, ‘ಈ ಸುಂದರ ಬೆಳದಿಂಗಳ..’ ಎಂಬ ಚಿತ್ರಗೀತೆಗಳು ಕೇಳುಗರನ್ನು ಮಂತ್ರಮುಗ್ದಗೊಳಿಸಿದವು. ‘ಸ್ನೇಹ ಅತಿ ಮಧುರ’ ಗೀತೆ ಕಾರ್ಯಕ್ರಮಕ್ಕೆ ಪೂರಕವಾಗಿತ್ತು.

ಆಹಾರದ ಬಗ್ಗೆ ವಿವರಿಸಿದ ಐಎಸ್‌ಪಿಎಎನ್ ಎಸ್‌ಆರ್ ಮಾರ್ಗದರ್ಶಕರಾದ ಅಪರ್ಣಾ ನಾಗೇಂದ್ರ ಅವರು, ‘ನಮಗೇನು ಬೇಕು ಎಂದು ತಿಳಿದು ಆಹಾರ ಸೇವಿಸುವ ಬದಲು, ಏನು ಸಿಗುತ್ತದೆಯೋ ಅದನ್ನೇ ಸೇವಿಸುವ ಪ್ರವೃತ್ತಿ ಹೆಚ್ಚು. ದೇಹದ ಆರೋಗ್ಯ ಕಾಪಾಡುವುದು ಎಂದರೆ ಆಹಾರ ಸೇವನೆ ಕಡಿಮೆ ಮಾಡುವುದು ಎಂದು ಬಹಳ ಮಂದಿ ಊಟ ಬಿಡುವವರಿದ್ದಾರೆ. ಆಹಾರ ಕಡಿಮೆ ಮಾಡುವುದಲ್ಲ, ಸರಿಯಾದ ಸಮಯಕ್ಕೆ ಸರಿಯಾದ ಆಹಾರ ಸೇವಿಸುವುದು’ ಎಂದು ಅವರು ಜಾಗೃತಿ ಮೂಡಿಸಿದರು.

ಅಕ್ಷತಾ ಪಾಂಡವಪುರ ಅವರು ಪ್ರೇಕ್ಷಕರನ್ನು ಒಳಗೊಂಡು ಆಡಿದ ಏಕಾಂಕ ನಾಟಕವು ನಕ್ಕು ನಗಿಸುವುದರ ಜೊತೆಗೆ ಉತ್ತಮ ಸಂದೇಶವನ್ನು ಸಾರಿತು.

ಸ್ವಾತಂತ್ರ್ಯದ ಸಂಭ್ರಮವು ಮೇಳೈಸಿತ್ತು. ನಿರೂಪಕಿ ನಿಖಿತಾ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು. ಗೆದ್ದವರಿಗೆ ಅಚ್ಚರಿಯ ಉಡುಗೊರೆಗಳನ್ನು ನೀಡಲಾಯಿತು.



ಏಕಾಂಕ ನಾಟಕ ಪ್ರದರ್ಶಿಸಿದ ಅಕ್ಷತಾ ಪಾಂಡವಪುರ

‘ಕನಕಪುರಕ್ಕೆ ಕಾಲೇಜು ಮಂಜೂರು ಮಾಡಿಕೊಳ್ಳಲಿ’

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜನ್ನು ಕನಕಪುರಕ್ಕೆ ತೆಗೆದುಕೊಂಡು ಹೋಗುವ ಬದಲು, ಡಿ.ಕೆ. ಸಹೋದರರು ತಮ್ಮ ಅಧಿಕಾರ ಬಳಸಿಕೊಂಡು ಪ್ರತ್ಯೇಕ ಕಾಲೇಜು ಮಂಜೂರು ಮಾಡಿಸಿಕೊಳ್ಳಲಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿ.ವಿ ಕ್ಯಾಂಪಸ್ ಮತ್ತು ವೈದ್ಯಕೀಯ ಕಾಲೇಜು ಸಂಕೀರ್ಣ ಒಂದೇ ಕಡೆ ಇರಬೇಕು ಎಂಬ ದೃಷ್ಟಿಯಿಂದ ರಾಮನಗರ ಜಿಲ್ಲಾ ಕೇಂದ್ರಕ್ಕೆ ಮಂಜೂರು ಮಾಡಲಾಗಿತ್ತು. ಇದೀಗ, ಡಿ.ಕೆ. ಸಹೋದರರು ಕಾಲೇಜನ್ನು ಕನಕಪುರಕ್ಕೆ ತೆಗೆದುಕೊಂಡು ಹೋಗಿರುವುದು ಅವೈಜ್ಞಾನಿಕವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ನಾನು ಮುಖ್ಯಮಂತ್ರಿಯಾಗಿದ್ದಾಗ ವೈದ್ಯಕೀಯ ಸಚಿವರೂ ಆಗಿದ್ದ ಡಿ.ಕೆ.ಶಿವಕುಮಾರ್ ಅವರ ಒತ್ತಡದಿಂದಾಗಿ, ಕನಕಪುರಕ್ಕೆ ಪ್ರತ್ಯೇಕ ವೈದ್ಯಕೀಯ ಕಾಲೇಜು ಮಂಜೂರು ಮಾಡಿ ₹100 ಕೋಟಿ ಒದಗಿಸಿದ್ದೆ. ಕಾಮಗಾರಿಗೆ ಟೆಂಡರ್ ಕೂಡ ಆಗಿದೆ. ಅದನ್ನು ಉಳಿಸಿಕೊಳ್ಳಲಾಗದೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಚಿಕ್ಕಬಳ್ಳಾಪುರಕ್ಕೆ ಬಿಟ್ಟು ಕೊಟ್ಟರು’ ಎಂದು ಆರೋಪಿಸಿದರು.

ಹಾಸ್ಯ ಬರಹಗಾರ ಎಂ.ಎಸ್ ನರಸಿಂಹಮೂರ್ತಿ ಅಭಿಮತ

‘ರಂಗ ಪ್ರಯೋಗ: ವಿಭಿನ್ನತೆ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಂಗ ತಂಡವೊಂದು ಎಷ್ಟು ನಾಟಕಗಳನ್ನು ಪ್ರದರ್ಶಿಸಿದೆ ಎನ್ನುವುದಕ್ಕಿಂತ ಎಷ್ಟು ಪ್ರೇಕ್ಷಕರನ್ನು ತಲುಪಿದೆ ಎನ್ನುವುದು ಮುಖ್ಯ’ ಎಂದು ಹಾಸ್ಯ ಬರಹಗಾರ ಎಂ.ಎಸ್. ನರಸಿಂಹಮೂರ್ತಿ ತಿಳಿಸಿದರು.

ಪ್ರವರ ಥಿಯೇಟರ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ದಶಕದ ಒಳನೋಟ’ ಸಮಾರೋಪ ಸಮಾರಂಭದಲ್ಲಿ ರಂಗಕರ್ಮಿಗಳಾದ ಹರ್ಷವರ್ಧನ್ ಪ್ರಸಾದ್ ಹಾಗೂ ಲಕ್ಷ್ಮಣ ಪೂಜಾರಿ ಅವರಿಗೆ ರಂಗಗೌರವ ಸಲ್ಲಿಸಿ, ಮಾತನಾಡಿದರು.

‘70–80ರ ದಶಕದಲ್ಲಿ ರಂಗ ತಂಡಗಳು ಕಡಿಮೆ ಸಂಖ್ಯೆಯಲ್ಲಿದ್ದವು. ಇದರಿಂದಾಗಿ ನಾಟಕಗಳಿಗೆ ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. ಬಳಿಕ ರಂಗ ಪ್ರದರ್ಶನಗಳು ಪ್ರೇಕ್ಷಕರ ಕೊರತೆ ಎದುರಿಸಿದವು. ಇತ್ತೀಚಿಗೆ ಹವ್ಯಾಸಿ ತಂಡಗಳೂ ವಿಭಿನ್ನ ಪ್ರಯೋಗಗಳ ಮೂಲಕ ಪ್ರೇಕ್ಷಕರನ್ನು ಸೆಳೆಯುತ್ತಿವೆ. ಜನರೂ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಉತ್ತಮ ಬೆಳವಣಿಗೆ’ ಎಂದು ಹೇಳಿದರು.

‘ರಂಗ ತಂಡಗಳು ವಿವಿಧ ಪ್ರಕಾರಗಳ ನಾಟಕಗಳನ್ನು ಆಯ್ಕೆ ಮಾಡಿಕೊಂಡು, ಪ್ರದರ್ಶನ ನೀಡಬೇಕು. ಆಗ ಹೊಸತನವನ್ನು ಕಾಣಲು ಸಾಧ್ಯ. ಪ್ರೇಕ್ಷಕರು ಹಾಗೂ ರಂಗಭೂಮಿ ನಡುವಿನ ಅಂತರವೂ ದೂರವಾಗುತ್ತದೆ. ರಂಗಭೂಮಿಯನ್ನು ಜೀವಂತವಾಗಿ ಇಡುವ ಪ್ರಯತ್ನವನ್ನು ಹಲವು ತಂಡಗಳು ಮಾಡುತ್ತಿವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಂಗಕರ್ಮಿ ಮಾಲತೇಶ್ ಬಡಿಗೇರ, ‘ಹವ್ಯಾಸಿ ಮತ್ತು ವೃತ್ತಿ ರಂಗಭೂಮಿ ತಮ್ಮದೇ ಆದ ಶೈಲಿಯನ್ನು ಹೊಂದಿವೆ. ಇವುಗಳ ನಡುವಿನ ಕಂದಕವನ್ನು ನಿರ್ಮೂಲನೆ ಮಾಡಿ, ಪ್ರೇಕ್ಷಕರ ಅಭಿರುಚಿಗೆ ಅನುಗುಣವಾದ ನಾಟಕ ಪ್ರದರ್ಶಿಸಬೇಕು’ ಎಂದು ಹೇಳಿದರು.

ಸ್ಕಿಲ್ ಫ್ಯಾಕ್ಟರಿ ಮುಖ್ಯಸ್ಥ ಜೇಕಬ್ ಸ್ವಾಮಿನಾಥನ್ ಅವರು ನಾಟಕ ಪ್ರದರ್ಶನಕ್ಕೆ ಆರ್ಥಿಕ ನೆರವು ನೀಡುವುದಾಗಿ ತಂಡಕ್ಕೆ ಭರವಸೆ ನೀಡಿದರು. ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವಿಂದ್ರ ಭಟ್ಟ ಇದ್ದರು.

ಬಳಿಕ ಪ್ರವರ ಥಿಯೇಟರ್ ಪ್ರಸ್ತುತಿಯಲ್ಲಿ ‘ಜತೆಗಿರುವನು ಚಂದಿರ’ ನಾಟಕ ಪ್ರದರ್ಶನ ಕಂಡಿತು. ಇದನ್ನು ಜಯಂತ ಕಾಯ್ಕಿಣಿ ರಚಿಸಿದ್ದು, ಹನು ರಾಮಸಂಜೀವ ಅವರ ವಿನ್ಯಾಸ ಮತ್ತು ನಿರ್ದೇಶನವಿತ್ತು.



ಕಾರ್ಯಕ್ರಮದಲ್ಲಿ ಲಕ್ಷ್ಮಣ ಪೂಜಾರಿ ಮತ್ತು ಹರ್ಷವರ್ಧನ ಪ್ರಸಾದ್ ಅವರಿಗೆ ರಂಗಗೌರವ ಸಲ್ಲಿಸಲಾಯಿತು. (ನಿಂತವರು ಎಡದಿಂದ) ಎಂ.ಎಸ್ ನರಸಿಂಹಮೂರ್ತಿ, ಪ್ರವರ ಥಿಯೇಟರ್ ಸಂಸ್ಥಾಪಕ ಹನು ರಾಮಸಂಜೀವ ಮತ್ತು ಮಾಲತೇಶ್ ಬಡಿಗೇರ ಇದ್ದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ವಚನ ಶ್ರಾವಣ-2023: ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಪ್ರಭಾ ನಟರಾಜ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ವೀರಶೈವ ಮಹಿಳಾ ವೇದಿಕೆ, ಜ್ಞಾನಜ್ಯೋತಿ ಕಾಲೇಜು, ಯಲಹಂಕ ಉಪನಗರ, ಬೆಳಿಗ್ಗೆ 11

ಚಂದ್ರಗುಪ್ತ ಮೌರ್ಯ, ಅಶೋಕ ಮೌರ್ಯ ಜನ್ಮದಿನಾಚರಣೆ, ಸಂವಿಧಾನದ ಅನುಷ್ಠಾನಕ್ಕಾಗಿ ರಾಜ್ಯಮಟ್ಟದ ವಿಚಾರಸಂಕಿರಣ: ಅತಿಥಿಗಳು: ಎಂ. ಗುರುಮೂರ್ತಿ, ಅಶ್ವಥನಾರಾಯಣ ಅಂತ್ಯಜ, ಎಂ.ಸಿ. ನಾರಾಯಣ, ಎನ್.ಎನ್. ಪರಶುರಾಮ್, ಕೋದಂಡರಾಮ್, ಶ್ರೀಧರ ಕಲಿವೀರ, ಮಂಜುನಾಥ್ ಎಚ್.ಎಂ., ವಡ್ಡಗೆರೆ ನಾಗರಾಜಯ್ಯ, ಬಿ. ಶಿವಪ್ಪನಾಯಕ, ಎಂ.ಎಸ್. ಜಗನ್ನಾಥ, ಎಚ್.ಎಲ್. ವೆಂಕಟೇಶ, ಪಿ.ಜೆ. ಗೋವಿಂದರಾಜ, ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ದಲಿತ ಹೋರಾಟಗಾರರ ಒಕ್ಕೂಟ, ಸ್ಥಳ: ಯು.ವಿ.ಸಿ. ಕಾಲೇಜು, ಅಲುಮ್ನಿ ಸಭಾಂಗಣ, ಕೆ.ಆರ್. ವೃತ್ತ, ಬೆಳಿಗ್ಗೆ 11

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಬ್ಲೇಸರ್ ವಿತರಣೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಕೆ.ವಿ. ಮಂಜುನಾಥ್, ಶಾಂತರಾಜು ಎಸ್., ಸಿದ್ಧಲಿಂಗಸ್ವಾಮಿ, ವಿನೋದಾ ನರಸಿಂಹ ಮೂರ್ತಿ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ಕನ್ನಲ್ಲಿ, ಬೆಳಿಗ್ಗೆ 11


‘ಸಂವಿಧಾನ ಮತ್ತು ಅದರ ಮೂಲ ತತ್ವಗಳು’ ವಿಶೇಷ ಉಪನ್ಯಾಸ: ಎಚ್.ಎನ್. ನಾಗಮೋಹನದಾಸ್, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಗಂಗಮ್ಮ ಹೊಂಬೇಗೌಡ ಪ್ರಥಮ ದರ್ಜೆ ಕಾಲೇಜು, ಹೊಂಬೇಗೌಡನಗರ, ಬೆಳಿಗ್ಗೆ 11

‘ಡಾ.ಜಿ.ಎಸ್.ದೀಕ್ಷಿತ್’ ನೆನಪಿನ ದತ್ತಿ ಉಪನ್ಯಾಸ: ಬೆಂ. ಶಾ. ಶ್ಯಾಮಲಾ ರತ್ನಕುಮಾರಿ, ಅತಿಥಿ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ದೇವರಕೊಂಡಾರೆಡ್ಡಿ, ಆಯೋಜನೆ: ಕರ್ನಾಟಕ ಇತಿಹಾಸ ಅಕಾಡೆಮಿ, ಸ್ಥಳ: ಎಂ.ವಿ.ಸಿ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್. ಆರ್.ಕಾಲೊನಿ, ಸಂಜೆ 6

‘ಅದ್ಭುತ ರಾಮಾಯಣ’ ಛಾಯಾಚಲನೆ ನೆರಳು ಗೊಂಬೆಯಾಟ: ಮೂಲ ನಾಟಕ ಕೃತಿ: ಕಂದಗಲ್ ಹನುಮಂತರಾಯ, ಗೊಂಬೆಯಾಟ: ಪ್ರಕಾಶ್ ಗರುಡ, ಸಂಗೀತ: ರಾಘವ ಕಮ್ಮಾರ, ಗೊಂಬೆ ವಿನ್ಯಾಸ: ಶ್ರೀನಿವಾಸಲು ನಿಮ್ಮಲಕುಂಟ, ನಿರ್ದೇಶನ: ರಜನಿ ಗರುಡ, ಆಯೋಜನೆ: ಪಪ್ಪೆಟ್ ಹೌಸ್, ಧಾರವಾಡ, ಸ್ಥಳ: ಕೆ.ವಿ. ಸುಬ್ಬಣ್ಣ ಆಪ್ತ ರಂಗಮಂದಿರ, ಟೀಚರ್ಸ್ ಕಾಲೊನಿ, ದಯಾನಂದಸಾಗರ್ ಕಾಲೇಜಿನ ಹತ್ತಿರ, ಸಂಜೆ 6.30

‘ನಾಗವಲ್ಲಿ’ ಯಕ್ಷಗಾನ ಪ್ರದರ್ಶನ: ಕಲಾವಿದರು: ರಾಘವೇಂದ್ರ ಆಚಾರ್ಯ ಜನ್ಸಾಲೆ, ಪ್ರಸನ್ನ ಭಟ್, ಶ್ರೀಪಾದ ಭಟ್ ಥಂಡಿಮನೆ, ಸುಬ್ರಹ್ಮಣ್ಯ ಹೆಗಡೆ ಯಲಗುಪ್ಪ, ಸುಧೀರ ಉಪ್ಪೂರು, ಉದಯ ಹೆಗಡೆ, ಕಾರ್ತೀಕ ಚಿಟ್ಟಾಣಿ, ವಿನಯ ಬೇರೊಳ್ಳಿ, ಆಯೋಜನೆ: ಪೆರ್ಡೂರು ಮೇಳ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10ರಿಂದ

‘ಗರುಡೋತ್ಸವ-2023’ ನರ್ತನಗಳ ಹಬ್ಬ: ಅತಿಥಿಗಳು: ನೀಲಮ್ಮ, ನಮ್ರತಾ ಎನ್., ಎಸ್.ಎ. ಹೇಮಂತ್, ಶರವಣ ಲಕ್ಷ್ಮಣ, ಸುರೇಶ್ ಎಸ್. ರಾವ್, ಶ್ರೀಧರ್ ಭಾಗವತ್, ತಾರಾ ಎಂ. ಲೋಲನಾಥ್, ವಿದ್ಯಾ ರವಿಶಂಕರ್, ಮೇದಿನಿ ಗರುಡಾಚಾರ್, ಸಿಹಿಕಹಿ ಗೀತಾ, ಭಗತರಾಮ ಡಿ.ಆರ್., ಗುರುರಾಜ ಪೊಶೆಟ್ಟಿಹಳ್ಳಿ, ಉತ್ಸವದ ನಿರ್ದೇಶಕಿ: ಶೋಭಾ ಲೋಲನಾಥ್, ಆಯೋಜನೆ: ಗರುಡ ನಾಟ್ಯ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4ರಿಂದ



ಶೋಭಾ ಲೋಲನಾಥ್, ತಪಸ್ಯಾ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in


ವಾರಾಂತ್ಯದ ಅಪರಾಧ ತಡೆಗೆ 'ನಡಿಗೆ ಗಸ್ತು'

ಆಗ್ನೇಯ ವಿಭಾಗದ ಪೊಲೀಸರ ಕ್ರಮ • ಇನ್‌ಸ್ಪೆಕ್ಟರ್, ಎಸಿಪಿ, ಡಿಸಿಪಿ ತಿರುಗಾಟ • ಮಹಿಳೆಯರ ಸುರಕ್ಷತೆಗೂ ಒತ್ತು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದ ಪ್ರಮುಖ ವಾಣಿಜ್ಯ ಪ್ರದೇಶಗಳು ವಾರಾಂತ್ಯದ ದಿನಗಳಲ್ಲಿ ಜನರಿಂದ ತುಂಬಿ ತುಳುಕುತ್ತಿವೆ. ಪಬ್, ಬಾರ್, ರೆಸ್ಟೋರೆಂಟ್, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಜನರು ಸೇರುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ದುಷ್ಕರ್ಮಿಗಳು ಅಪರಾಧ ಎಸಗಲು ಹೊಂಚು ಹಾಕುತ್ತಿದ್ದು, ಇಂಥನ್ನು ಮಟ್ಟಹಾಕಲು ಆಗ್ನೇಯ ವಿಭಾಗದ ಪೊಲೀಸರು 'ನಡಿಗೆ ಗಸ್ತು' ಜಾರಿಗೆ ತಂದಿದ್ದಾರೆ.

ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಾರಾಂತ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸುತ್ತಿದ್ದಾರೆ. ಸ್ನೇಹಿತರು, ಕುಟುಂಬಸ್ಥರು, ಸಂಬಂಧಿಕರು, ದಂಪತಿಗಳು, ಪ್ರೇಮಿಗಳು... ಹೀಗೆ ನಾನಾ ತರಹದ ಜನ, ವಾರಾಂತ್ಯದಲ್ಲಿ ಸಂಭ್ರಮದಿಂದ ಕಳೆಯುತ್ತಿದ್ದಾರೆ. ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ವಾರಾಂತ್ಯದ ಸಂಭ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.



ಆಗ್ನೇಯ ವಿಭಾಗ ವ್ಯಾಪ್ತಿಯ ರಸ್ತೆಯೊಂದರಲ್ಲಿ 'ನಡಿಗೆ ಗಸ್ತು' ತಿರುಗಿದ ಪೊಲೀಸರು

ಇವರ ಸುರಕ್ಷತೆಗೂ ನಡಿಗೆ ಗಸ್ತಿನಲ್ಲಿ ಒತ್ತು ನೀಡಲಾಗಿದೆ.

ಜನನಿಬಿಡ ಸಂದರ್ಭಗಳಲ್ಲಿಯೇ ಚಿನ್ನದ ಸರ, ಮೊಬೈಲ್ ಫೋನ್ ಕಳ್ಳತನ ಹಾಗೂ ಅಪಹರಣದಂಥ ಪ್ರಕರಣಗಳು ವರದಿಯಾಗುತ್ತಿವೆ. ಈ ಬಗ್ಗೆ ಆಯಾ ಠಾಣೆಗಳಲ್ಲಿ ದೂರುಗಳು ದಾಖಲಾಗುತ್ತಿವೆ. ಇಂಥ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಆರೋಪಿಗಳನ್ನು ಪತ್ತೆ ಮಾಡಲು ಆಗ್ನೇಯ ವಿಭಾಗದ ಪೊಲೀಸರು, 'ನಡಿಗೆ ಗಸ್ತು' ಮೊರೆ ಹೋಗಿದ್ದಾರೆ.

'ವಾರಾಂತ್ಯದ ಶುಕ್ರವಾರ, ಶನಿವಾರ, ಭಾನುವಾರ ಜನರಿಗೆ ರಕ್ಷಣೆ ನೀಡಲು ಹಾಗೂ ಅಪರಾಧಗಳನ್ನು ತಡೆಗಟ್ಟಲು ನಡಿಗೆ ಗಸ್ತು ವ್ಯವಸ್ಥೆ ರೂಪಿಸಲಾಗಿದೆ. ಇದಕ್ಕೆ ಜನರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಯಾವುದೇ ಅಪರಾಧ ನಡೆದರೂ ತ್ವರಿತವಾಗಿ ಪತ್ತೆ ಹಚ್ಚಲು ನಡಿಗೆ ಗಸ್ತು ನೆರವಾಗುತ್ತಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ 'ಪ್ರಜಾವಾಣಿ'ಗೆ ತಿಳಿಸಿದರು.

ಏನಿದು ನಡಿಗೆ ಗಸ್ತು: ದ್ವಿಚಕ್ರ ವಾಹನ, ಜೀಪುಗಳಲ್ಲಿ ಗಸ್ತು ತಿರುಗುವ ಪದ್ಧತಿ ಸದ್ಯಕ್ಕಿದೆ. ಇದರ ಜೊತೆಗೆ ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳು, ಕೆಲವೆಡೆ ನಡಿಗೆ ಮೂಲಕ ಗಸ್ತು ತಿರುಗುತ್ತಿದ್ದಾರೆ. ಹೊಸದಾಗಿ ರೂಪಿಸಿರುವ 'ನಡಿಗೆ ಗಸ್ತು (ಫುಟ್–ಪೆಟ್ರೋಲಿಂಗ್)' ವ್ಯವಸ್ಥೆಯಲ್ಲಿ ಇನ್‌ಸ್ಪೆಕ್ಟರ್‌ಗಳು, ಎಸಿಪಿಗಳು ಹಾಗೂ ಡಿಸಿಪಿ ಎಲ್ಲರೂ ನಡಿಗೆ ಮೂಲಕವೇ ಗಸ್ತು ತಿರುಗಲಿದ್ದಾರೆ.

'ಶುಕ್ರವಾರ, ಶನಿವಾರ ಹಾಗೂ ಭಾನುವಾರ ಸಂಜೆಯಿಂದ ರಾತ್ರಿಯವರೆಗೆ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ನಡಿಗೆ ಗಸ್ತು ಕರ್ತವ್ಯದಲ್ಲಿರಲಿದ್ದಾರೆ. ಮುಖ್ಯರಸ್ತೆ ಹಾಗೂ ಕೆಲ ಒಳ ರಸ್ತೆಗಳ ಪಾದಚಾರಿ ಮಾರ್ಗಗಳಲ್ಲಿ ಗಸ್ತು ಕೈಗೊಳ್ಳುವರು. ಬಹುತೇಕರು ಸಮವಸ್ತ್ರದಲ್ಲಿ, ಕೆಲವರು ಮಫ್ತಿಯಲ್ಲೂ ಸುತ್ತಾಡಿ ಅಪರಾಧ ಕೃತ್ಯಗಳನ್ನು ತಡೆಯಲಿದ್ದಾರೆ' ಎಂದು ಸಿ.ಕೆ.ಬಾಬಾ ಹೇಳಿದರು.

'ಶುಕ್ರವಾರ ಸಂಜೆಯಿಂದ ರಾತ್ರಿಯವರೆಗಿನ ಅವಧಿಯಲ್ಲಿ ಕಳ್ಳತನ ಹಾಗೂ ಅಪಹರಣ ಪ್ರಕರಣಗಳು ವರದಿಯಾಗುತ್ತಿದ್ದವು. ಹೀಗಾಗಿ, ಶುಕ್ರವಾರ ರಾತ್ರಿ ಮಾತ್ರ ನಡಿಗೆ ಗಸ್ತು ವ್ಯವಸ್ಥೆ ಜಾರಿಗೆ ತರಲಾಗಿತ್ತು. ಇದೀಗ, ಶನಿವಾರ ಹಾಗೂ ಭಾನುವಾರವೂ ಗಸ್ತು ಮುಂದುವರಿಸಲಾಗಿದೆ' ಎಂದು ಅವರು ತಿಳಿಸಿದರು.

'ಆರೋಪಿಗಳ ಬಂಧನ'

'ಇತ್ತೀಚೆಗೆ ವಾರಾಂತ್ಯದ ದಿನದಂದು ಮೊಬೈಲ್ ಫೋನ್ ಹಾಗೂ ಸರ ಕಳ್ಳತನವಾಗಿತ್ತು. ಪಾದಚಾರಿ ಮಾರ್ಗದಲ್ಲಿಯೇ ಸಂತ್ರಸ್ತರು ಅಳಲು ತೋಡಿಕೊಂಡಿದ್ದರು. ತ್ವರಿತ ಕಾರ್ಯಾಚರಣೆ ನಡೆಸಿ, ಸೂರ್ಯೋದಯಕ್ಕೆ ಮುನ್ನವೇ ಆರೋಪಿಗಳನ್ನು ಪತ್ತೆ ಮಾಡಲಾಯಿತು' ಎಂದು ಸಿ.ಕೆ. ಬಾಬಾ ಹೇಳಿದರು.

'₹ 30 ಲಕ್ಷ ಸಾಲ ಮರಳಿಸುವಂತೆ ಸತಾಯಿಸುತ್ತಿದ್ದ ಕಾರಣಕ್ಕೆ ಇಬ್ಬರನ್ನು ಅಪಹರಿಸಲಾಗಿತ್ತು. ನಡಿಗೆ ಗಸ್ತಿನಲ್ಲಿದ್ದ ಅಧಿಕಾರಿಗಳಿಗೆ ಮಾಹಿತಿ ಬಂದಿತ್ತು. ತ್ವರಿತವಾಗಿ ಸ್ಪಂದಿಸಿ 7 ಜನರ ಬಂಧಿಸಿದ್ದರು' ಎಂದರು.

ತ್ವರಿತ ಕಾರ್ಯಾಚರಣೆಗೆ ಅನುಕೂಲ

'ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಹಾಗೂ ಠಾಣೆಯ ಎಲ್ಲ ಸಿಬ್ಬಂದಿ ನಡಿಗೆ ಗಸ್ತಿನಲ್ಲಿ ಇರುತ್ತಾರೆ. ಮಹಿಳಾ ಸಿಬ್ಬಂದಿಯೂ ಗಸ್ತು ತಿರುಗುತ್ತಾರೆ. ನಾನು ಸಹ ರಸ್ತೆಯಲ್ಲಿ ಸುತ್ತಾಡುತ್ತಿದ್ದೇನೆ. ಯಾವುದೇ ಅಹಿತಕರ ಘಟನೆ ಅಥವಾ ಕಳ್ಳತನ ನಡೆದರೆ ತ್ವರಿತವಾಗಿ ಕಾರ್ಯಾಚರಣೆ ನಡೆಸಲು ಇದರಿಂದ ಸಾಧ್ಯವಾಗುತ್ತಿದೆ' ಎಂದು ಸಿ.ಕೆ.ಬಾಬಾ ಹೇಳಿದರು.

ಸುದ್ದಿ 2 ನಿಮಿಷ

ಶ್ರೀನಿವಾಸ ಮೂರ್ತಿ ಇಂದು ನ್ಯಾಯಾಲಯಕ್ಕೆ ಹಾಜರು

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರ ವಶದಲ್ಲಿರುವ ಬೆಂಗಳೂರು ಪೂರ್ವ (ಕೆ.ಆರ್. ಪುರ) ತಾಲ್ಲೂಕಿನ ಭೂಮಾಪನ ಇಲಾಖೆ ಅಧೀಕ್ಷಕ ಕೆ.ಟಿ.ಶ್ರೀನಿವಾಸ ಮೂರ್ತಿ ಅವರನ್ನು ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಶ್ರೀನಿವಾಸ ಮೂರ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಪೊಲೀಸರು, ಆರೋಪಿಗೆ ಸಂಬಂಧಿಸಿದ 14 ಸ್ಥಳಗಳ ಮೇಲೆ ಮಂಗಳವಾರ ದಾಳಿ ಮಾಡಿ, ಶೋಧ ನಡೆಸಿದ್ದರು. ಅದೇ ದಿನ ಆರೋಪಿಯನ್ನು ಬಂಧಿಸಿದ್ದರು.

ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಹೆಚ್ಚಿನ ತನಿಖೆಗಾಗಿ ಶ್ರೀನಿವಾಸ ಮೂರ್ತಿ ಅವರನ್ನು ಐದು ದಿನಗಳವರೆಗೆ ತನಿಖಾ ತಂಡದ ವಶಕ್ಕೆ ನೀಡಲಾಗಿತ್ತು.

ಸ್ಥಿರಾಸ್ತಿ, ಹೂಡಿಕೆ ಮತ್ತು ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡದೇ ಸತಾಯಿಸುತ್ತಿದ್ದ ಕಾರಣ ಆರೋಪಿಯನ್ನು ಬಂಧಿಸಲಾಗಿದೆ. ಐದು ದಿನಗಳ ಕಾಲ ವಿಚಾರಣೆ ನಡೆಸಿದ್ದು, ಕೆಲವು ದಾಖಲೆಗಳನ್ನು ಪತ್ತೆಹಚ್ಚಲಾಗಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ (ಲೋಕಾಯುಕ್ತ) ವಿಶೇಷ ನ್ಯಾಯಾಲಯಕ್ಕೆ ಶ್ರೀನಿವಾಸ ಮೂರ್ತಿ ಅವರನ್ನು ಸೋಮವಾರ ಹಾಜರುಪಡಿಸಲಾಗುವುದು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಇಸ್ರೊ ವಿಜ್ಞಾನಿಗಳಿಗೆ ಅಭಿನಂದನೆ



ಪೀಣ್ಯ ದಾಸರಹಳ್ಳಿ: 'ಚಂದ್ರಯಾನ–2 ವಿಫಲವಾದ ನಾಲ್ಕು ವರ್ಷಗಳಲ್ಲಿ ವಿಜ್ಞಾನಿಗಳು ಎದೆಗುಂದದೆ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದಾರೆ. ಯಾವುದೇ ದೇಶ ಅಲ್ಪಾವಧಿಯಲ್ಲಿ ಇಂತಹ ಸಾಧನೆ ಮಾಡಿಲ್ಲ. ಚಂದ್ರಯಾನ–3 ಇಸ್ರೊ ವಿಜ್ಞಾನಿಗಳಿಂದ ಸಾಧ್ಯವಾಗಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದರು.

ಎಂಟನೇ ಮೈಲಿ ಬಳಿಯ ಶೋಭಾ ವಸತಿ ಸಮುಚ್ಚಯದಲ್ಲಿ ವಾಸವಿರುವ ಇಸ್ರೊ ಸಂಸ್ಥೆಯ ಮೂವರು ವಿಜ್ಞಾನಿಗಳಿಗೆ ಸಮುಚ್ಚಯದ ಸಂಘದಿಂದ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಚಂದ್ರಯಾನ-3 ವಿಕ್ರಮ್ ಲ್ಯಾಂಡರ್ ಇಳಿದ ಸ್ಥಳಕ್ಕೆ 'ಶಿವಶಕ್ತಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಆಶ್ಚರ್ಯ ಎಂದರೆ ಶಿವನ ಮೇಲೆ ಚಂದ್ರ ಇರುತ್ತದೆ. ಮೋದಿ ಅವರು ವಿಜ್ಞಾನಿಗಳ ಹೃದಯ ಬಲ್ಲವರು. ಅವರ ಪ್ರೋತ್ಸಾಹ ಅಪಾರ. ಚಂದ್ರಯಾನ–3 ಯಶಸ್ಸಿಗೆ ಕಾರಣರಾದ ವಿಜ್ಞಾನಿಗಳನ್ನು ಅಭಿನಂದಿಸುವುದು ನಮ್ಮ ಕರ್ತವ್ಯ' ಎಂದರು.

ಇಸ್ರೊ ವಿಜ್ಞಾನಿಗಳಾದ ಮನೀಶ್ ಚಾವ್ಲಾ, ಕಲ್ಪನಾ ಅರವಿಂದ್, ಆಕಾಂಕ್ಷ ಅವಿನಾಶ್ ಭಾರದ್ವಾಜ್ ಅವರನ್ನು ಅಭಿನಂದಿಸಲಾಯಿತು.

ಬುರ್ಖಾ ಧರಿಸಿದ್ದ ಮಹಿಳೆ ಅಡ್ಡಗಟ್ಟಿ ಕಿರುಕುಳ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುರ್ಖಾ ಧರಿಸಿಕೊಂಡು ಹಿಂದೂ ಪುರುಷನ ಜೊತೆ ಬೈಕ್‌ನಲ್ಲಿ ಹೊರಟಿದ್ದ ಮಹಿಳೆಯನ್ನು ಅಡ್ಡಗಟ್ಟಿ ಕಿರುಕುಳ ನೀಡಿದ್ದ ಆರೋಪದಡಿ ಜಾಕೀರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಮಹಿಳೆಗೆ ಕಿರುಕುಳ ನೀಡಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದೇ ಮಾಹಿತಿ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೂರ್ವ ವಿಭಾಗದ ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯ ನಿವಾಸಿಯಾಗಿರುವ ಮಹಿಳೆ ಬುರ್ಖಾ ಧರಿಸಿಕೊಂಡು ಪರಿಚಯಸ್ಥ ಹಿಂದೂ ಪುರುಷನ ಜೊತೆ ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ಬೈಕ್ ಅಡ್ಡಗಟ್ಟಿದ್ದ ಜಾಕೀರ್ ಹಾಗೂ ಇತರರು, 'ಹಿಂದೂ ಪುರುಷನ ಜೊತೆ ಏಕೆ ಹೊರಟಿದ್ದಿಯಾ' ಎಂದು ಜಗಳ ತೆಗೆದಿದ್ದರು.

'ಬೈಕ್‌ನಿಂದ ಇಳಿದಿದ್ದ ಮಹಿಳೆ, 'ಪರಿಚಯಸ್ಥನಾಗಿದ್ದರಿಂದ ಹೊರಟಿದ್ದೇನೆ. ಈ ವಿಷಯ ಕುಟುಂಬದವರಿಗೂ ಗೊತ್ತಿದೆ' ಎಂದಿದ್ದರು. ಅಷ್ಟಕ್ಕೆ ಸುಮ್ಮನಾಗದ ಆರೋಪಿಗಳು, 'ಹಿಂದೂ ಪುರುಷನ ಜೊತೆ ಹೋಗಬಾರದು' ಎಂದು ತಾಕೀತು ಮಾಡಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಮಹಿಳೆ ಗೋಗರೆದರೂ ಬಿಟ್ಟಿರಲಿಲ್ಲ' ಎಂದು ಮೂಲಗಳು ಹೇಳಿವೆ.



ಜಾಕೀರ್

'ಮಹಿಳೆಯನ್ನು ನಡು ರಸ್ತೆಯಲ್ಲಿ ನಿಲ್ಲಿಸಿದ್ದ ಆರೋಪಿಗಳು, ಜನರ ಎದುರೇ ಬೈದಾಡಿ ಗೌರವಕ್ಕೆ ಧಕ್ಕೆ ತಂದಿದ್ದರು. ಹೆದರಿದ್ದ ಮಹಿಳೆ, ಸ್ಥಳದಿಂದ ಹೊರಟು ಹೋಗಿದ್ದರು' ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಮಾಧ್ಯಮದಲ್ಲೂ ಆಕ್ರೋಶ

ಮಹಿಳೆಗೆ ಕಿರುಕುಳ ನೀಡಿರುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಜನ, ಆರೋಪಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮಹಿಳೆಯ ಜೊತೆ ಅಗೌರವದಿಂದ ನಡೆದುಕೊಂಡ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ' ಎಂದು ಜನರು ಆಗ್ರಹಿಸಿದ್ದಾರೆ.

ವಿಡಿಯೊ ಬಗ್ಗೆ ಪ್ರತಿಕ್ರಿಯಿಸಿರುವ ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್, 'ಘಟನೆ ಗಮನಕ್ಕೆ ಬರುತ್ತಿದ್ದಂತೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. 24 ಗಂಟೆಯೊಳಗೆ ಆರೋಪಿಯನ್ನು ಬಂಧಿಸಲಾಗಿದೆ' ಎಂದಿದ್ದಾರೆ.

ಕುಕ್ಕರ್‌ನಿಂದ ಹಲ್ಲೆ: ಸಹಜೀವನ ಗೆಳತಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಯುವತಿ ದೇವಾ (24) ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿ ವೈಷ್ಣವ್‌ನನ್ನು (24) ಪೊಲೀಸರು ಬಂಧಿಸಿದ್ದಾರೆ.

'ಕೇರಳದ ದೇವಾ ಹಾಗೂ ವೈಷ್ಣವ್ ಕಾಲೇಜು ಸಹಪಾಠಿಗಳು. ವಿದ್ಯಾಭ್ಯಾಸದ ನಂತರ ಬೆಂಗಳೂರಿಗೆ ಬಂದಿದ್ದು, ಕಂಪನಿಯೊಂದರ ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಸಹಜೀವನ ನಡೆಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಶನಿವಾರ ಇಬ್ಬರ ನಡುವೆ ಜಗಳ ಆಗಿತ್ತು. ವಿಕೋಪಕ್ಕೆ ಹೋದಾಗ ವೈಷ್ಣವ್ ಕುಕ್ಕರ್‌ನಿಂದ ದೇವಾ ಅವರ ತಲೆಗೆ ಹೊಡೆದಿದ್ದ. ತೀವ್ರ ಗಾಯಗೊಂಡು ಯುವತಿ ಸ್ಥಳದಲ್ಲೇ ಸತ್ತಿದ್ದರು. ಶವದ ಪಕ್ಕವೇ ಒಂದು ಗಂಟೆ ಕುಳಿತಿದ್ದ ಆರೋಪಿ, ನಂತರ ಪರಾರಿಯಾಗಿದ್ದ.'

'ಕೊಲೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಕೆಲ ಗಂಟೆಗಳಲ್ಲಿಯೇ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಪರ ಯುವಕನ ಜೊತೆ ಮಾತು: 'ವೈಷ್ಣವ್ ಹಾಗೂ ದೇವಾ ಪರಸ್ಪರ ಪ್ರೀತಿಸುತ್ತಿದ್ದರು. ಇದೇ ಕಾರಣಕ್ಕೆ ಸಹ ಜೀವನ ನಡೆಸುತ್ತಿದ್ದರು. ಊರಿಗೆ ಹೋಗುವಾಗಲೂ ಒಟ್ಟಿಗೆ ಹೋಗಿ ಬರುತ್ತಿದ್ದರು' ಎಂದು ಪೊಲೀಸರು ಹೇಳಿದರು.



ದೇವಾ ಹಾಗೂ ವೈಷ್ಣವ್

'ಇಬ್ಬರೂ ಮನೆಯಿಂದಲೇ ಕೆಲಸ ಮಾಡುತ್ತಿದ್ದರು. ದೇವಾ ಬೇರೆ ಯುವಕರೊಬ್ಬರ ಜೊತೆ ಮಾತನಾಡಲಾರಂಭಿಸಿದ್ದರು. ಇದು ಗೊತ್ತಾಗುತ್ತಿದ್ದಂತೆ ವೈಷ್ಣವ್ ಜಗಳ ತೆಗೆದಿದ್ದ. ಯುವಕನ ಜೊತೆ ಮಾತನಾಡದಂತೆ ತಾಕೀತು ಮಾಡಿದ್ದ' ಎಂದು ತಿಳಿಸಿದರು.

'ಶನಿವಾರವು ಯುವಕನ ವಿಚಾರವಾಗಿ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಕೋಪಗೊಂಡಿದ್ದ ವೈಷ್ಣವ್, ಮನೆಯಲ್ಲಿದ್ದ ಕುಕ್ಕರ್‌ನಿಂದ ತಲೆಗೆ ಹೊಡೆದು ದೇವಾ ಅವರನ್ನು ಕೊಂದಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಅಪಹರಿಸಿ ಸುಲಿಗೆ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಅಪಹರಿಸಿ ಮೊಬೈಲ್ ಫೋನ್ ದೋಚಿದ್ದ ಏಳು ಆರೋಪಿಗಳನ್ನು ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂತ್ರಸ್ತ ತರುಣ್ ದೂರು ನೀಡಿದ್ದರು. ಆರೋಪಿಗಳಾದ ರೂಪೇಶ್, ಮೋಹನ್, ನವೀನ್, ಪುನೀತ್, ಅಭಿ ಸೇರಿದಂತೆ 7 ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರೂಪೇಶ್ ಹಾಗೂ ಸ್ನೇಹಿತರು, ಜನ್ಮದಿನದ ಪಾರ್ಟಿ ಮಾಡಲು ಒಂದೆಡೆ ಸೇರಿದ್ದರು. ಇದೇ ವೇಳೆ ರೂಪೇಶ್ ಅಂಗಡಿಗೆ ಹೋಗಿದ್ದರು. ಅದೇ ಸಂದರ್ಭದಲ್ಲಿ ತರುಣ್ ಸಹ ಅಂಗಡಿಗೆ ಹೋಗಿದ್ದ. ಅಲ್ಲಿ ಜಗಳವಾಡಿದ್ದರು.

ನಾಯಿ ಬೆನ್ನಟ್ಟಿದ್ದಕ್ಕೆ ಜಗಳ: ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಿ ಬೆನ್ನಟ್ಟಿದ್ದ ಕಾರಣಕ್ಕೆ ವೃದ್ಧರೊಬ್ಬರ ಜೊತೆ ಜಗಳ ತೆಗೆದು ಚಾಕುವಿನಿಂದ ಇರಿಯಲಾಗಿದ್ದು, ಈ ಸಂಬಂಧ ಮಲ್ಲೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಾಜಾಜಿನಗರ ನಿವಾಸಿ ಬಾಲಸುಬ್ರಹ್ಮಣ್ಯ (62) ಅವರು ಚಾಕು ಇರಿತದಿಂದ ಗಾಯಗೊಂಡಿದ್ದಾರೆ. ಕೃತ್ಯ ಎಸಗಿದ್ದ ಆರೋಪದಡಿ ಹುಲಿಯೂರು ದುರ್ಗದ ಎಚ್.ರಾಜು (57) ಎಂಬಾತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಾಲಸುಬ್ರಹ್ಮಣ್ಯ ಅವರು ಆಗಸ್ಟ್ 21ರಂದು ರಾತ್ರಿ 8 ಗಂಟೆ ಸುಮಾರಿಗೆ ಮಲ್ಲೇಶ್ವರದ 17ನೇ ಅಡ್ಡರಸ್ತೆಯಲ್ಲಿ ಹೊರಟಿದ್ದರು. ಅದೇ ಮಾರ್ಗದಲ್ಲಿ ಆರೋಪಿ ರಾಜು ತೆರಳುತ್ತಿದ್ದ. ರಸ್ತೆಯಲ್ಲಿದ್ದ ನಾಯಿ ಆತನನ್ನು ನೋಡಿ ಬೊಗಳಲಾರಂಭಿಸಿತ್ತು. ಗಾಬರಿಗೊಂಡ ರಾಜು, ಓಡಲಾರಂಭಿಸಿದ್ದ. ನಾಯಿ ಸ್ವಲ್ಪ ದೂರಕ್ಕೆ ಬೆನ್ನಟ್ಟಿತ್ತು.'

'ಮಾರ್ಗಮಧ್ಯೆಯೇ ರಾಜು ಪುನಃ ತಿರುಗಿ ನಿಂತಿದ್ದ. ನಾಯಿ ವಾಪಸು ಹೋಗಿ ಬಾಲಸುಬ್ರಹ್ಮಣ್ಯ ಸಮೀಪದಲ್ಲಿ ನಿಂತುಕೊಂಡಿತ್ತು. ಅವರೇ ನಾಯಿ ಮಾಲೀಕರಿರಬಹುದೆಂದು ತಿಳಿದಿದ್ದ ಆರೋಪಿ ಜಗಳ ತೆಗೆದಿದ್ದ. ಮಾತನಾಡಲು ಅವಕಾಶ ನೀಡದೇ ಚಾಕುವಿನಿಂದ ಕೆನ್ನೆ ಹಾಗೂ ಕೈಗೆ ಇರಿದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ರಕ್ಷಣೆಗೆ ಬಂದ ಜನ, ಪರಾರಿಯಾಗಿದ್ದ ಆರೋಪಿ: 'ಬಾಲಸುಬ್ರಹ್ಮಣ್ಯ ಅವರು ರಕ್ಷಣೆಗಾಗಿ ಕೂಗಾಡಿದ್ದರು. ಜನ ಸೇರುತ್ತಿದ್ದಂತೆ ಆರೋಪಿ ಪರಾರಿಯಾಗಿದ್ದ. ಬಾಲಸುಬ್ರಹ್ಮಣ್ಯ ಅವರಿಗೆ ಸ್ಥಳೀಯರೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಚೇತರಿಕೆ ಕಂಡುಬಂದಿದೆ' ಎಂದು ತಿಳಿಸಿವೆ.

ಸಾಹಿತಿ ಜಯಂತ ಮಹಾಪಾತ್ರ ನಿಧನ

ಭುವನೇಶ್ವರ (ಪಿಟಿಐ): ಇಂಗ್ಲಿಷ್ ಕಾವ್ಯಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಥಮ ಪ್ರಶಸ್ತಿಗೆ ಭಾಜನರಾಗಿದ್ದ ಸಾಹಿತಿ ಜಯಂತ ಮಹಾಪಾತ್ರ ಅವರು ಕಟಕ್‌ನಲ್ಲಿ ಭಾನುವಾರ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ನ್ಯುಮೋನಿಯಾ ಮತ್ತು ವಯೋಸಹಜ ಕಾಯಿಲೆಗಳಿಂದ ಅವರು ಬಳಲುತ್ತಿದ್ದರು. 1928ರ ಅಕ್ಟೋಬರ್ 22ರಂದು ಕಟಕ್‌ನಲ್ಲಿ ಜನಿಸಿದ್ದರು.

2009ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾಗಿದ್ದರು. ಅಸಹಿಷ್ಣುತೆ ವಿರುದ್ಧದ ಪ್ರತಿಭಟನಾರ್ಥವಾಗಿ 2015ರಲ್ಲಿ ಅವರು ಅದನ್ನು ವಾಪಸ್ ಮಾಡಿದ್ದರು.



ಹಿರಿಯರನ್ನು ಗೌರವಿಸುವ ಐದು ದಶಕಗಳ ಚಾರಿತ್ರಿಕ ಭಿತ್ತಿಚಿತ್ರಗಳನ್ನು ನಗರದಲ್ಲಿ ಭಾನುವಾರ ನಡೆದ ಸುಚಿತ್ರ ಫಿಲಂ ಸೊಸೈಟಿ 53ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅನಾವರಣಗೊಳಿಸಲಾಯಿತು. ಸುಚಿತ್ರ ಫಿಲಂ ಸೊಸೈಟಿಯ ಅಧ್ಯಕ್ಷ ಎಚ್.ಎನ್. ನರಹರಿರಾವ್, ಕಾರ್ಯದರ್ಶಿ ಆನಂದ ವರದರಾಜನ್, ಎಸ್.ರಾಘವೇಂದ್ರರಾವ್, ಎಂ.ಬಿ.ಎಸ್.ಪ್ರಸಾದ್, ಟ್ರಸ್ಟಿ ಪ್ರಕಾಶ್ ಬೆಳವಾಡಿ, ಬಿ.ಎಸ್. ವಿದ್ಯಾರಣ್ಯ, ಶಶಿಧರ್, ಹಿರಿಯಣ್ಣಯ್ಯ ಇದ್ದರು.

ತಾಳಿ ಕಟ್ಟುವಾಗ ಮದುವೆ ನಿರಾಕರಿಸಿದ ಯುವತಿ

ಕೊರಟಗೆರೆ (ತುಮಕೂರು): ತಾಲ್ಲೂಕಿನ ಕೋಳಾಲದಲ್ಲಿ ಭಾನುವಾರ ತಾಳಿ ಕಟ್ಟುವ ಸಮಯದಲ್ಲಿ ಮದುವೆ ನಿರಾಕರಿಸಿದ ವಧು, ಪ್ರಿಯಕರನ ಜೊತೆಯೇ ಮದುವೆಯಾಗುವುದಾಗಿ ಹೇಳಿ ಹಸೆಮಣೆಯಿಂದ ಎದ್ದು ಹೋಗಿದ್ದಾರೆ.

ದೊಡ್ಡಬಳ್ಳಾಪುರದ ತಾಲ್ಲೂಕಿನ ಮೂಡ್ಲಕಾಳೇನಹಳ್ಳಿಯ ವೆಂಕಟೇಶ್ ಮತ್ತು ನೆಲಮಂಗಲ ತಾಲ್ಲೂಕಿನ ದೊಡ್ಡಬೆಲೆ ಗ್ರಾಮದ ದಿವ್ಯಾ ಅವರ ಮದುವೆ ಭಾನುವಾರ ಗ್ರಾಮದ ಕಲ್ಯಾಣ ಮಂಟಪದಲ್ಲಿ ನಡೆಯಬೇಕಿತ್ತು.

ವಧುವಿನ ನಡೆಯಿಂದ ವಿಚಲಿತರಾದ ವರನ ಪೋಷಕರು ಮತ್ತು ಸಂಬಂಧಿಗಳು ಕಲ್ಯಾಣ ಮಂಟಪದಲ್ಲಿಯೇ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನ್ಯಾಯ ಕೊಡಿಸುವಂತೆ ಕೋಳಾಲ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿದ್ದಾರೆ. ಪೊಲೀಸರ ಸಮ್ಮುಖದಲ್ಲಿ 2 ಕುಟುಂಬಗಳ ಸಂಧಾನ ನಡೆಯಿತು. ಮದುವೆ ಖರ್ಚು ಭರಿಸುವುದಾಗಿ ವಧುವಿನ ಕುಟುಂಬಸ್ಥರು ಒಪ್ಪಿಕೊಂಡರು. ನಂತರ ಇಷ್ಟಪಟ್ಟ ಯುವಕನ ಜೊತೆಗೆ ಯುವತಿಯನ್ನು ಕಳುಹಿಸಿಕೊಟ್ಟಿದ್ದಾರೆ.

ಮಹಾಸಭಾ ಬಲವರ್ಧನೆಗೆ ನಿರ್ಣಯ

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯದಲ್ಲಿರುವ ವೀರಶೈವ ಲಿಂಗಾಯತರ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ, ಸಮುದಾಯದ ಪ್ರಾತಿನಿಧಿಕ ಸಂಘಟನೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲೆ, ತಾಲ್ಲೂಕು ಘಟಕಗಳ ಬಲವರ್ಧನೆ ಮಾಡಬೇಕು ಎಂದು ಅಖಿಲ ಭಾರತೀಯ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷರು, ಕಾರ್ಯದರ್ಶಿಗಳ ಸಭೆ ನಿರ್ಣಯ ಕೈಗೊಂಡಿದೆ.

ತಾಲ್ಲೂಕಿನ ಹರಿಸಂದ್ರದ ರೆಸಾರ್ಟ್‌ನಲ್ಲಿ ಭಾನುವಾರ ನಡೆದ ಮಹಾಸಭಾದ ಸಭೆಯಲ್ಲಿ ಎಲ್ಲ ಜಿಲ್ಲೆಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ನಿರ್ಣಯಕ್ಕೆ ಒಕ್ಕೊರಲಿನಿಂದ ಸಹಮತ ವ್ಯಕ್ತಪಡಿಸಿದರು.

ಸಭೆ ಅಧ್ಯಕ್ಷತೆ ವಹಿಸಿದ್ದ ಮಹಾಸಭಾದ ವಿಜಯಪುರ ಘಟಕದ ಅಧ್ಯಕ್ಷ ವೀರಭದ್ರಪ್ಪ ನಾಗಠಾಣ, 'ಜಿಲ್ಲಾ ಮಟ್ಟದಲ್ಲಿ ವಿದ್ಯಾರ್ಥಿನಿಲಯ ನಿರ್ಮಿಸಬೇಕು. ಸಮುದಾಯದ ದಾನಿಗಳ ನೆರವು ಪಡೆದು ಹಾಸ್ಟೆಲ್ ಮತ್ತು ಭವನ ನಿರ್ಮಾಣಕ್ಕೆ ಮುಂದಾಗಬೇಕು' ಎಂದರು.

ಬೆಂಗಳೂರು ನಗರ ಘಟಕದ ಅಧ್ಯಕ್ಷ ಗುರುಸ್ವಾಮಿ, ಹಾಸನದ ಗುರುದೇವ್, ತುಮಕೂರಿನ ಮೋಹನ್ ಕುಮಾರ್ ಪಟೇಲ್, ಚಾಮರಾಜನಗರದ ನಂದೀಶ್, ಮಂಡ್ಯದ ಸುಬ್ರಹ್ಮಣ್ಯ, ಮೈಸೂರಿನ ಎಸ್. ಶಿವಮೂರ್ತಿ, ಬೆಂಗಳೂರು ಗ್ರಾಮಾಂತರದ ಸಿ. ವಿರೂಪಾಕ್ಷಯ್ಯ, ಚಿಕ್ಕಮಗಳೂರಿನ ಎಚ್.ಎಂ. ಲೋಕೇಶ್, ಚಿಕ್ಕಬಳ್ಳಾಪುರದ ಭಾಸ್ಕರ್, ಕೊಡಗಿನ ಎಚ್.ವಿ.ಶಿವಪ್ಪ, ರಾಯಚೂರಿನ ಮಿರ್ಜಾಪುರ ಚಂದ್ರಶೇಖರ ಪಾಟೀಲ, ಬಾಗಲಕೋಟೆಯ ಜಿ.ಎನ್. ಪಾಟೀಲ ಹಾಗೂ ಇತರರು ಇದ್ದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.



ಜ್ಞಾನಭಾರತಿ ಆವರಣದ ಪಾದಚಾರಿ ಮಾರ್ಗದಲ್ಲಿರುವ ಕೇಬಲ್.

'ಪಾದಚಾರಿ ಮಾರ್ಗದಲ್ಲಿನ ಕೇಬಲ್ ತೆಗೆಯಿರಿ'

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಿರುವ ಹೊರವರ್ತುಲ ರಸ್ತೆಯ ಎಸ್.ವಿ.ಕೆ. ಕಲ್ಯಾಣ ಮಂಟಪದ ಎದುರು ಪಾದಚಾರಿ ಮಾರ್ಗದಲ್ಲಿ ಕೇಬಲ್ ವೈರು ಕಡಿದುಬಿದ್ದಿದ್ದು, ಪಾದಚಾರಿ ಓಡಾಟಕ್ಕೆ ಅಡ್ಡಿಯಾಗಿದೆ. ನಿತ್ಯ ಇಲ್ಲಿ ವಿದ್ಯಾರ್ಥಿಗಳು, ಮಹಿಳೆಯರು, ಮಕ್ಕಳು, ವೃದ್ಧರು ಓಡಾಡುತ್ತಾರೆ. ರಾತ್ರಿ ವೇಳೆ ಕತ್ತಲಲ್ಲಿ ಕೇಬಲ್‌ಗೆ ಸಿಕ್ಕಿಕೊಂಡು ಬೀಳುವ ಅಪಾಯವಿದೆ. ಸಂಬಂಧಿಸಿದ ಅಧಿಕಾರಿಗಳು ಆದಷ್ಟು ಶೀಘ್ರ ಇದನ್ನು ತೆರವುಗೊಳಿಸಲಿ.

ಎಚ್.ತುಕಾರಾಂ, ಮಲ್ಲತ್ತಹಳ್ಳಿಯ ನಿವಾಸಿ



ಶೇಷಾದ್ರಿಪುರದ ಬಿಬಿಎಂಪಿ ಕಚೇರಿ ಮುಂಭಾಗ ಹಾಕಿರುವ ಫ್ಲೆಕ್ಸ್.

'ಅನಧಿಕೃತ ಫ್ಲೆಕ್ಸ್, ತೆರವುಗೊಳಿಸಿ'

ಶೇಷಾದ್ರಿಪುರದಲ್ಲಿರುವ ಬಿಬಿಎಂಪಿಯ ಪಶ್ಚಿಮ ವಿಭಾಗದ ಜಂಟಿ ಆಯುಕ್ತರ ಕಚೇರಿಯ ಮುಂಭಾಗದಲ್ಲಿ ಅನಧಿಕೃತವಾಗಿ ಫ್ಲೆಕ್ಸ್ ಅಳವಡಿಸಲಾಗಿದೆ. ನಗರದಲ್ಲಿ ಅನಧಿಕೃತವಾಗಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಹಾಕಬಾರದು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ. ಮೂರು ತಿಂಗಳಿಂದ ಈ ಜಾಗದಲ್ಲಿ ಫ್ಲೆಕ್ಸ್ ಹಾಕಲಾಗಿದೆ. ಆದರೂ, ಬಿಬಿಎಂಪಿ ಅಧಿಕಾರಿಗಳು ಯಾವುದೇ ರೀತಿ ಕ್ರಮ ಕೈಗೊಳ್ಳುತ್ತಿಲ್ಲ. ಈ ಬಗ್ಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ.

ಎಂ.ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರದ ನಿವಾಸಿ



ಬಿನ್ನಿಪೇಟೆ ಬಾಳೆ ಮಾರುಕಟ್ಟೆಯ ರಸ್ತೆಯೊಂದರಲ್ಲಿ ಹಾಕಿರುವ ಕಟ್ಟಡ ತ್ಯಾಜ್ಯ.

'ರಸ್ತೆ ದುರಸ್ತಿಗೊಳಿಸಿ'

ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ನಂಬರ್ 7, 8, 9,10 ಮತ್ತು 11ಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಇದರಿಂದ, ಕ್ರಿಕೆಟ್ ವೀಕ್ಷಕರಿಗೆ ಅನನುಕೂಲವಾಗುತ್ತಿದೆ. ಕ್ರೀಡಾಪಟುಗಳು, ಸಿಬ್ಬಂದಿ ಕೂಡಾ ಇದೇ ಹಾದಿಯಲ್ಲಿ ಸಾಗಬೇಕಿದೆ. ಈ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಆದಷ್ಟು ಶೀಘ್ರ ಇದನ್ನು ದುರಸ್ತಿ ಪಡಿಸಲು ಅಧಿಕಾರಿಗಳು ಆದ್ಯತ ನೀಡಲಿ.

ಎಚ್.ದೊಡ್ಡ ಮಾರಯ್ಯ, ಸ್ಥಳೀಯ ನಿವಾಸಿ



ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ.

ರಸ್ತೆಯಲ್ಲಿ ಕಟ್ಟಡ ತ್ಯಾಜ್ಯ

ಬಿನ್ನಿಪೇಟೆಯ ಬಾಳೆಹಣ್ಣು ಮಾರುಕಟ್ಟೆಯ ಹತ್ತಿರ ರಸ್ತೆಯ ಮಧ್ಯದಲ್ಲಿಯೇ ಕಟ್ಟಡ ತ್ಯಾಜ್ಯವನ್ನು ಸುರಿಯಲಾಗಿದೆ. ಪಾದಚಾರಿಗಳ ಓಡಾಟಕ್ಕೂ ಸಮಸ್ಯೆ ಆಗಿದೆ. ಕೂಡಲೇ ಇದನ್ನು ತೆರವುಗೊಳಿಸಲು ಬಿಬಿಎಂಪಿ ಕ್ರಮಕೈಗೊಳ್ಳಬೇಕು.

ಅಜಯ್, ಸ್ಥಳೀಯ ನಿವಾಸಿ



ಬನಶಂಕರಿ 6ನೇ ಹಂತದ 4ನೇ ಬ್ಲಾಕ್ ರಸ್ತೆಯ ದುಃಸ್ಥಿತಿ

'ರಸ್ತೆ ಸರಿಪಡಿಸಿ'

ಬನಶಂಕರಿ 6ನೇ ಹಂತದ 4ನೇ ಟಿ ಬ್ಲಾಕ್‌ಗೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳು ಹಾಳಾಗಿವೆ. ಎರಡು ತಿಂಗಳ ಹಿಂದೆ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ರಸ್ತೆ ಅಗೆಯಲಾಗಿತ್ತು. ಪೈಪ್‌ಗಳನ್ನು ಅಳವಡಿಸಿದ ನಂತರ ರಸ್ತೆ ದುರಸ್ತಿಗೊಳಿಸದೇ ಹಾಗೆ ಬಿಟ್ಟಿದ್ದಾರೆ. ಇದರಿಂದ ಪ್ರತಿನಿತ್ಯ ವಾಹನ ಸವಾರರಿಗೆ ದೂಳಿನ ಮಜ್ಜನವಾಗುತ್ತಿದ್ದು, ಅನಾರೋಗ್ಯಕ್ಕೂ ಕಾರಣವಾಗುತ್ತಿದೆ. ಚಿಕ್ಕ ಬಡಾವಣೆ ಆಗಿರುವ ಇದರ ಇದರ ಅಭಿವೃದ್ಧಿಗೆ ಯಾರೂ ಕ್ರಮಕೈಗೊಳ್ಳುತ್ತಿಲ್ಲ. ಅಧಿಕಾರಿಗಳು ಕೂಡಲೇ ಈ ಸಮಸ್ಯೆ ಪರಿಹರಿಸಬೇಕು.

ರಾ. ಜಯಸಿಂಹ, ಸ್ಥಳೀಯ ನಿವಾಸಿ

'ವಿದ್ಯುತ್ ಪರಿವರ್ತಕದ ಕಂಬಗಳನ್ನು ತೆರವುಗೊಳಿಸಿ'

ಜ್ಞಾನಭಾರತಿ ಬಡಾವಣೆ ಸೇರಿ ನಗರದ ವಿವಿಧ ಪ್ರದೇಶಗಳಲ್ಲಿ ಬೆಸ್ಕಾಂ ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರಿಸಿದೆ. ಆದರೆ, ಇದಕ್ಕೆ ಅಳವಡಿಸಿದ್ದ ಉಕ್ಕಿನ ಕಂಬಗಳನ್ನು ಅಲ್ಲಿಯೇ ಬಿಟ್ಟಿದೆ. ಇದರಿಂದ ಸಂಚಾರಕ್ಕೆ ಸಮಸ್ಯೆಯಾಗಿದೆ. ರಸ್ತೆಯ ಅಭಿಮುಖವಾಗಿ ವಾಲಿದ್ದು, ಅಪಾಯಕ್ಕೆ ಆಹ್ವಾನಿಸುವಂತಿದೆ. ಬೆಸ್ಕಾಂ ಸಿಬ್ಬಂದಿ ಇದರ ತೆರವಿಗೆ ಕ್ರಮವಹಿಸಲಿ.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರದ ನಿವಾಸಿ



ಜ್ಞಾನಭಾರತಿ ಬಡಾವಣೆಯಲ್ಲಿ ವಿದ್ಯುತ್ ಪರಿವರ್ತಕಕ್ಕೆ ಅಳವಡಿಸಿದ್ದ ಕಂಬಗಳು ವಾಲಿರುವುದು.

ನೀರು ಸೋರಿಕೆಗೆ ತಡೆ



ಕಾವೇರಿ ನೀರು ಪೋಲು ತಡೆದಿರುವುದು

ವರದಿ ಫಲಶ್ರುತಿ

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವಿಶ್ವನಾಥ ನಾಗೇನಹಳ್ಳಿ ವಾರ್ಡ್ ನಂಬರ್ 22 ರಲ್ಲಿ ಪೋಲಾಗುತ್ತಿದ್ದ ಕಾವೇರಿ ನೀರು ತಡೆದಿದ್ದಾರೆ. 'ಪ್ರಜಾವಾಣಿ' ಕುಂದು ಕೊರತೆ ವಿಭಾಗದಲ್ಲಿ ಆಗಸ್ಟ್ 21ರಂದು 'ಪೋಲಾಗುತ್ತಿದೆ ಕಾವೇರಿ ನೀರು' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಎಚ್ಚೆತ್ತ ಜಲಮಂಡಳಿಯ ಸಿಬ್ಬಂದಿ ನೀರು ಸೋರಿಕೆ ತಡೆಗೆ ಕ್ರಮಕೈಗೊಂಡಿದ್ದಾರೆ.

ಹಲವು ಗ್ರಾಹಕರಿಗೆ ಖುಷಿ ನೀಡಿದ 'ಗೃಹಜ್ಯೋತಿ' ಗ್ಯಾರಂಟಿ ಯೋಜನೆ

ಬೆಸ್ಕಾಂ: 33 ಲಕ್ಷ ಗ್ರಾಹಕರಿಗೆ ಶೂನ್ಯ ಬಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಮನೆಗೆ ಪ್ರತಿ ತಿಂಗಳು ಗರಿಷ್ಠ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ರಾಜ್ಯ ಸರ್ಕಾರದ 'ಗೃಹ ಜ್ಯೋತಿ' ಗ್ಯಾರಂಟಿ ಯೋಜನೆ ಆರಂಭಗೊಂಡ ಮೊದಲ ತಿಂಗಳ (ಆಗಸ್ಟ್) ವಿದ್ಯುತ್ ಬಿಲ್ ಬಹುತೇಕ ಗ್ರಾಹಕರ ಮೊಗದಲ್ಲಿ ಮಂದಹಾಸ ಮೂಡಿಸಿದೆ. 'ವಿದ್ಯುತ್ ಶುಲ್ಕ ಶೂನ್ಯ' ಎಂದು ನಮೂದಾಗಿರುವುದನ್ನು ಕಂಡು ಗ್ರಾಹಕರು ಖುಷಿಪಟ್ಟಿದ್ದಾರೆ.

ಈ ಯೋಜನೆ ಆರಂಭವಾದ ಬಳಿಕ ಬೆಸ್ಕಾಂ ವ್ಯಾಪ್ತಿಯಲ್ಲಿ 33.07 ಲಕ್ಷ ಗ್ರಾಹಕರು ಶೂನ್ಯ ಬಿಲ್ ಪ್ರಯೋಜನ ಪಡೆದಿದ್ದಾರೆ. ಎಂಟು ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಬೆಸ್ಕಾಂ, ಈ ಯೋಜನೆ ಅಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಆಗಸ್ಟ್ ಮೊದಲ ವಾರದಿಂದಲೇ ಶೂನ್ಯ ಬಿಲ್ ತಲುಪಿಸುವ ಕಾರ್ಯವನ್ನು ಕೈಗೊಂಡಿದೆ.

ಇದುವರೆಗೆ ಈ ಯೋಜನೆ ಅಡಿ ಒಟ್ಟು 51.25 ಲಕ್ಷ ಗ್ರಾಹಕರಿಗೆ ಬಿಲ್ ತಲುಪಿಸಲಾಗಿದ್ದು, ಆ ಪೈಕಿ 33.07 ಲಕ್ಷ ಮಂದಿಗೆ ಶೂನ್ಯ ಬಿಲ್ ನೀಡಲಾಗಿದೆ. 18.18 ಲಕ್ಷ ಗ್ರಾಹಕರಿಗೆ ಶೂನ್ಯರಹಿತ ಬಿಲ್ ನೀಡಲಾಗಿದೆ' ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ 1.48 ಕೋಟಿಗೂ ಹೆಚ್ಚು ಗ್ರಾಹಕರು ಈ ಯೋಜನೆ ಅಡಿ ನೋಂದಾಯಿಸಿಕೊಂಡಿದ್ದರು. ಇದುವರೆಗೆ 1.2 ಕೋಟಿಗೂ ಹೆಚ್ಚು ಮಂದಿಗೆ ಬಿಲ್‌ಗಳನ್ನು ವಿತರಿಸಲಾಗಿದೆ.

74 ಲಕ್ಷ ಗ್ರಾಹಕರು ಸರ್ಕಾರ ನಿಗದಿಪಡಿಸಿರುವ ವಾರ್ಷಿಕ ಸರಾಸರಿಗಿಂತಲೂ ಕಡಿಮೆ ವಿದ್ಯುತ್ ಬಳಸಿದ್ದಾರೆ. 45.3 ಲಕ್ಷ ಗ್ರಾಹಕರು ವಾರ್ಷಿಕ ಸರಾಸರಿಗಿಂತ ಹೆಚ್ಚು ವಿದ್ಯುತ್ ಬಳಕೆ ಮಾಡಿದ್ದಾರೆ.

ಈ ಯೋಜನೆ ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿಗೆ ಮಾತ್ರ ಅನ್ವಯವಾಗುತ್ತದೆ. ವಾಣಿಜ್ಯ ಉದ್ದೇಶಗಳಿಗೆ ಅನ್ವಯವಾಗುವುದಿಲ್ಲ. ಯೋಜನೆಯ ಸೌಲಭ್ಯ ಪಡೆಯಲು ಗ್ರಾಹಕರು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕಿದೆ. ಪ್ರತಿ ಫಲಾನುಭವಿ ಗ್ರಾಹಕರ ಸಂಖ್ಯೆ ಮತ್ತು ಮೀಟರ್ ಸಂಖ್ಯೆಯನ್ನು ಆಧಾರ್‌ಗೆ ಕಡ್ಡಾಯವಾಗಿ ಜೋಡಣೆ ಮಾಡಬೇಕಿದೆ.

2022–23ನೇ ಸಾಲಿನ ಗೃಹ ಬಳಕೆಯ ವಿದ್ಯುತ್ ಯೂನಿಟ್‌ಗಳ ಸರಾಸರಿ ಲೆಕ್ಕ ಹಾಕಿ ಅದರ ಮೇಲೆ ಶೇ 10ರಷ್ಟು ಹೆಚ್ಚುವರಿ ಯೂನಿಟ್ ಉಚಿತ ಸೌಲಭ್ಯ ಸರ್ಕಾರ ನಿಗದಿಪಡಿಸಿದೆ.

ಹಲವರಿಗೆ ಹರ್ಷ, ಕೆಲವರಿಗೆ ಅಸಮಾಧಾನ: 'ನಮಗೆ ಪ್ರತಿ ತಿಂಗಳು ₹ 600ರಿಂದ ₹ 700 ವಿದ್ಯುತ್ ಬಿಲ್ ಬರುತ್ತಿತ್ತು. ಈ ತಿಂಗಳು ಶೂನ್ಯ ಬಿಲ್ ನೋಡಿ ತುಂಬಾ ಖುಷಿಯಾಯಿತು' ಎಂದು ಆರ್.ಟಿ. ನಗರದ ಮಹಿಳೆಯೊಬ್ಬರು ಸಂತಸ ವ್ಯಕ್ತಪಡಿಸಿದರು.

'ನಮಗೆ ತಿಂಗಳಿಗೆ ₹ 1,200ರಿಂದ ₹ 1,300 ವಿದ್ಯುತ್ ಬಿಲ್ ಬರುತ್ತಿತ್ತು. ಅಷ್ಟು ಹಣ ಉಳಿತಾಯವಾಗಿದೆ' ಎಂದು ಸಂಜಯನಗರದ ನಿವಾಸಿ ಸುರೇಶ್ ತಿಳಿಸಿದರು. ಸೌಲಭ್ಯದಿಂದ ವಂಚಿತರಾಗಿರುವ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'187 ಯೂನಿಟ್ ಆಗಿದ್ದರೂ 20 ಯೂನಿಟ್ ಅನ್ನು ಬೆಸ್ಕಾಂ ಸಿಬ್ಬಂದಿ ಸೇರಿಸಿ 207 ಯೂನಿಟ್ ಮಾಡಿದ್ದಾರೆ. ಈ ಬಗ್ಗೆ ಬೆಸ್ಕಾಂ ಕಚೇರಿಯಲ್ಲೂ ಕೇಳಿದರೆ ನಿಖರವಾದ ಉತ್ತರವಿಲ್ಲ' ಎಂದು ವಿಜಯನಗರದ ಸಿ.ಜಿ. ಶೆಟ್ಟರ್ ದೂರಿದ್ದಾರೆ.

ಸರಾಸರಿ ವಿದ್ಯುತ್ ಬಳಕೆ ಆಧರಿಸಿ ದರ ನಿಗದಿಪಡಿಸಲಾಗಿದೆ. ಅದನ್ನು ಮೀರಿದ ಬಳಕೆಗೆ ಬಿಲ್ ನೀಡುವುದು ಕಡ್ಡಾಯವಾಗಿದೆ ಎಂದು ಬೆಸ್ಕಾಂ ಸಿಬ್ಬಂದಿ ಪ್ರತಿಪಾದಿಸುತ್ತಾರೆ.



ಎಸ್ಕಾಂಗಳಿಗೆ ₹ 476 ಕೋಟಿ ಬಿಡುಗಡೆ

ಗೃಹಜ್ಯೋತಿ ಯೋಜನೆ ಮೊತ್ತವನ್ನು ಸರಿದೂಗಿಸಲು ಸರ್ಕಾರ ಎಲ್ಲ ಎಸ್ಕಾಂಗಳಿಗೆ ಜುಲೈ ತಿಂಗಳಿಗೆ ₹ 476 ಕೋಟಿ ಮೊತ್ತದ ಸಹಾಯಧನ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಈ ಯೋಜನೆಗೆ ಪ್ರಸಕ್ತ ವರ್ಷ ₹ 9,000 ಕೋಟಿ ನಿಗದಿಪಡಿಸಿದೆ. ಗ್ರಾಹಕರ ವಿದ್ಯುತ್ ಬಳಕೆ ಆಧಾರದ ಮೇಲೆ ಜುಲೈ ತಿಂಗಳಿಗೆ ಒಟ್ಟಾರೆ ₹ 970.51 ಕೋಟಿ ಮೊತ್ತದ ಬೇಡಿಕೆಯನ್ನು ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿದ್ದವು.

ಅಂಕಿ–ಅಂಶಗಳು

ಎಸ್ಕಾಂಗಳಿಗೆ ಬಿಡುಗಡೆಯಾದ ಮೊತ್ತ

235.07 ಕೋಟಿ ಬೆಸ್ಕಾಂ	52.73 ಕೋಟಿ ಮೆಸ್ಕಾಂ
83.48 ಕೋಟಿ ಹೆಸ್ಕಾಂ	53.46 ಕೋಟಿ ಜೆಸ್ಕಾಂ
51.26 ಕೋಟಿ ಚೆಸ್ಕಾಂ	476 ಕೋಟಿ ಒಟ್ಟು



ಗೃಹ ಜ್ಯೋತಿ ಯೋಜನೆಯಿಂದ ಜನರಿಗೆ ಸಂತೋಷವಾಗಿದೆ. ಬಹುತೇಕ ಮಂದಿಗೆ ಶೂನ್ಯ ಬಿಲ್ ಬಂದಿರುವುದರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ

ಮಹಾಂತೇಶ ಬೀಳಗಿ
ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

ಶ್ರಮಜೀವಿಗಳ ಸೋಮಾರಿಗೊಳಿಸಿದ ಗ್ಯಾರಂಟಿ ಯೋಜನೆ: ದೊಡ್ಡರಂಗೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಸರ್ಕಾರ ಶ್ರಮ ಜೀವಿಗಳನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ' ಎಂದು ಸಾಹಿತಿ ದೊಡ್ಡರಂಗೇಗೌಡ ಹೇಳಿದರು.

ಮೈಕೊ ಕನ್ನಡ ಬಳಗ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ₹ 1 ಲಕ್ಷ ಮೊತ್ತದ ಚೆಕ್ ಹಾಗೂ ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಸರ್ಕಾರ ಉಚಿತವಾಗಿ ನೀಡಿದ ಹಣ ಒಳ್ಳೆಯ ರೀತಿಯಲ್ಲಿ ಉಪಯೋಗವಾಗುತ್ತದೆಯೇ? ಇದು ನ್ಯಾಯಯುತ ಮಾರ್ಗವಲ್ಲ. ಇದು ವ್ಯಕ್ತಿತ್ವದ ನಾಶ' ಎಂದು ಅಭಿಪ್ರಾಯಪಟ್ಟರು.

'ತಮಿಳುನಾಡಿನ ಸಂಸದರು ಶಾಸ್ತ್ರೀಯ ಭಾಷೆಯ ಹೆಸರಿನಲ್ಲಿ ಕೇಂದ್ರ ಸರ್ಕಾರದಿಂದ ಕೋಟ್ಯಂತರ ರೂಪಾಯಿ ಅನುದಾನ ತೆಗೆದುಕೊಂಡು ಬರುತ್ತಿದ್ದಾರೆ. ಆದರೆ, ನಮ್ಮ ಸಂಸದರು ಕನಿಷ್ಠ ₹ 2 ಕೋಟಿ ಅನುದಾನ ತರುವ ಕೆಲಸ ಮಾಡುತ್ತಿಲ್ಲ. ಪರಸ್ಪರ ಕೆಸರೆರಚಾಟದಲ್ಲಿ ನಿರತರಾಗಿದ್ದಾರೆ' ಎಂದು ದೂರಿದರು.

ಕಾರ್ಯಕ್ರಮ ಉದ್ಘಾಟಿಸಿದ ಹೃದ್ರೋಗ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, 'ಬೆಂಗಳೂರಿನಲ್ಲಿ ಶೇ 28ರಷ್ಟು ಜನ ಮಾತ್ರ ಕನ್ನಡ ಮಾತನಾಡುತ್ತಿದ್ದಾರೆ. ನಮ್ಮಲ್ಲಿ ಅಭಿಮಾನದ ಕೊರತೆ ಇರುವುದರಿಂದಲೇ ಕನ್ನಡಕ್ಕೆ ಈ ದುಃಸ್ಥಿತಿ ಬಂದಿದೆ. ನಮ್ಮೊಂದಿಗೆ ಕೆಲಸ ಮಾಡುವವರಿಗೆ ನಮ್ಮ ಭಾಷೆಯನ್ನು ಕಲಿಸುವ ಕೆಲಸವಾಗಬೇಕು. ಗಂಡು ಹೆಣ್ಣಿನಲ್ಲಿ ಭೇದಭಾವ ಮಾಡದೇ ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು. ಅವರಲ್ಲಿ ಸಮಾಜಸೇವೆ ಮತ್ತು ದೇಶ ಸೇವೆ ಎಂಬ ಸದ್ಗುಣಗಳನ್ನು ಬೆಳೆಸಬೇಕು' ಎಂದು ಹೇಳಿದರು.

ಬಿಡದಿ ಬಾಷ್ ವಾಣಿಜ್ಯ ಘಟಕದ ಅಧಿಕಾರಿ ಎಚ್.ಬಿ.ತೊಂಟೇಶ್, ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್ ಅಧ್ಯಕ್ಷ ವಿ.ಜೆ.ಕೆ. ನಾಯರ್, ಬಾಷ್ ಬಿಡದಿ ಘಟಕದ ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಎಂ. ಗೋಪಾಲಕೃಷ್ಣ ಜೋಶಿ ಕನ್ನಡ ಸಾಹಿತಿ ಪರಿಷತ್ತಿನ ಪದ್ಮಿನಿ ನಾಗರಾಜು ಇದ್ದರು.



'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ'ಯನ್ನು ಸಾಹಿತಿ ದೊಡ್ಡರಂಗೇಗೌಡ ಅವರಿಗೆ ಭಾನುವಾರ ಪ್ರದಾನ ಮಾಡಲಾಯಿತು. ಬಿಡದಿ ಬಾಷ್ ವಾಣಿಜ್ಯ ಘಟಕದ ಅಧಿಕಾರಿ ಎಚ್.ಬಿ. ತೊಂಟೇಶ್, ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್ ಅಧ್ಯಕ್ಷ ವಿ.ಜೆ.ಕೆ.ನಾಯರ್, ಬಾಷ್ ಬಿಡದಿ ಘಟಕದ ಮಾವನ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಎಂ. ಗೋಪಾಲಕೃಷ್ಣ ಜೋಶಿ, ಬಳಗದ ಗೌರವಾಧ್ಯಕ್ಷೆ ಪದ್ಮಿನಿ ನಾಗರಾಜು, ಬಳಗದ ಅಧ್ಯಕ್ಷ ಎಸ್ ಮಂಜುನಾಥ್, ಖಜಾಂಚಿ ಕೃಷ್ಣಮೂರ್ತಿ ಇದ್ದರು

'ಕಸಾಪಕ್ಕೆ ಮಹಿಳೆಯರೂ ಅಧ್ಯಕ್ಷರಾಗಲಿ'

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಈ ಬಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಹಿಳೆಯೊಬ್ಬರು ಅಧ್ಯಕ್ಷರಾಗಬೇಕು. ಸಮಾಜದಲ್ಲಿ ಸಮಾನತೆ ಇರಬೇಕು. ಮಹಿಳೆಯರು ಯೋಗ್ಯ ಸ್ಥಾನಗಳನ್ನು ಅಲಂಕರಿಸಿದರೆ ಮಾತ್ರ ಪುರುಷ ಪ್ರಧಾನ ಸಮಾಜ ಸುಧಾರಣೆಯಾಗಬಹುದು ಎಂದು ದೊಡ್ಡರಂಗೇಗೌಡ ಅಭಿಪ್ರಾಯಪಟ್ಟರು.

'ಸಾಹಿತಿಗೆ ಸಾಮಾಜಿಕ ಜವಾಬ್ದಾರಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು. ವರ್ತಮಾನಕ್ಕೆ ಸ್ಪಂದಿಸಬೇಕು. ಬದುಕು ಗ್ರಹಿಸುವ ಒಳಗಣ್ಣು ಇರಬೇಕು ಎಂದು ಮಂಡ್ಯ ಜಿಲ್ಲಾ ಯುವ ಬರಹಗಾರರ ಬಳಗದ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಹೇಳಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ವತಿಯಿಂದ ಭಾನುವಾರ ಬಿಡುಗಡೆಗೊಂಡ ಪಿ. ಮಲ್ಲಿಕಾರ್ಜುನಪ್ಪ ಅವರ 'ಬೆಳಕಿನೆಡೆಗೆ' ಕವನ ಸಂಕಲನದ ಬಗ್ಗೆ ಅವರು ಮಾತನಾಡಿದರು.

ಕವಿಯು ಸಮಕಾಲೀನ ತಲ್ಲಣಗಳಿಗೆ, ಸಮಸ್ಯೆಗಳಿಗೆ, ಬಿಕ್ಕಟ್ಟುಗಳಿಗೆ, ಸಂಕಟಗಳಿಗೆ ಮುಖಾಮುಖಿ ಆಗಬೇಕು. ಆ ಮೂಲಕ ವ್ಯವಸ್ಥೆಯ ರೋಗಗಳಿಗೆ ಚಿಕಿತ್ಸೆ ನೀಡಲು ಸಾಧ್ಯ ಎಂದರು.

ಪತ್ರಕರ್ತ ಪದ್ಮರಾಜ ದಂಡಾವತಿ ಮಾತನಾಡಿ, 'ವಿದ್ಯಾರ್ಥಿಗಳು, ಯುವಜನರು ಮೊಬೈಲ್ ಲೋಕದಲ್ಲಿ ತೇಲುತ್ತಿದ್ದಾರೆ. ಮಹಿಳೆಯರು ರಿಮೋಟ್ ಹಿಡಿದು ಟಿ.ವಿ ಧಾರಾವಾಹಿ ಮತ್ತು ರಿಯಾಲಿಟಿ ಶೋಗಳಲ್ಲಿ ಮುಳುಗಿದ್ದಾರೆ. ಯಾರೂ ವಾಸ್ತವ ಜಗತ್ತಿನಲ್ಲಿ ಇಲ್ಲ. ಮೊಬೈಲ್ ಗೀಳಾಗಿದೆ. ಮಾನವ ಸಂಬಂಧಗಳಿಗೆ ಮೊಬೈಲ್ ಫೋನ್ ಗೋಡೆಯಾಗಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

'ಈಗಿರುವ ಪರಿಸ್ಥಿತಿಯಿಂದ ಬುದ್ಧಿ, ಮನಸ್ಸು ವಿಕಾರವಾಗಿದೆ. ಕ್ರೂರತೆ ಹೆಚ್ಚಾಗಿದೆ. ಅಪ್ರಾಪ್ತರ ಮೇಲೆ ಅತ್ಯಾಚಾರವಾಗುತ್ತಿದೆ. ವ್ಯಕ್ತಿಯನ್ನು ಕೊಂದು ತುಂಡು ತುಂಡಾಗಿ ಕತ್ತರಿಸುವಷ್ಟು ಕ್ರೌರ್ಯ ಬೆಳೆದಿದೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಪುಸ್ತಕ ಲೋಕಾರ್ಪಣೆ ಮಾಡಿದರು.



ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ವತಿಯಿಂದ 'ಬೆಳಕಿನೆಡೆಗೆ' ಕವನ ಸಂಕಲನ ಲೋಕಾರ್ಪಣೆ ಮಾಡಲಾಯಿತು. ಕೃತಿಕಾರ ಪಿ. ಮಲ್ಲಿಕಾರ್ಜುನಪ್ಪ, ಮಂಡ್ಯ ಜಿಲ್ಲಾ ಯುವ ಬರಹಗಾರರ ಬಳಗದ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಪತ್ರಕರ್ತ ಪದ್ಮರಾಜ ದಂಡಾವತಿ, ಚಿಂತಕಿ ಶಿಲ್ಪಾ ಭಾಸ್ಕರ್ ಮತ್ತು ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಜೀವನ್ಮುಖಿ ಟಿ. ಸುರೇಶ್ ಇದ್ದರು –ಪ್ರಜಾವಾಣಿ ಚಿತ್ರ

ಕೃತಿ ಪರಿಚಯ

ಪುಸ್ತಕ: 'ಬೆಳಕಿನೆಡೆಗೆ'
ಕವನ ಸಂಕಲನ
ಕೃತಿಕಾರ: ಪಿ. ಮಲ್ಲಿಕಾರ್ಜುನಪ್ಪ
ಪ್ರಕಾಶಕ: ಜೀವನ್ಮುಖಿ ಬಳಕದ ಟಿ. ಸುರೇಶ್
ಪುಟ: 88 (66 ಕವನ)
ದರ: ₹ 100

ಸಾಹಿತಿ ಜಯಂತ ಕಾಯ್ಕಿಣಿ ಬೇಸರ ● ಸಾಹಿತ್ಯಲೋಕ ಪಬ್ಲಿಕೇಷನ್ಸ್‌ನಿಂದ 4 ಪುಸ್ತಕಗಳು ಬಿಡುಗಡೆ

'ಎಲ್ಲಾ ಊರುಗಳು ಈಗ ಒಂದೇ ಆಗಿವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ನಿರ್ಮಾಣದಿಂದಾಗಿ ಕೆಲವೇ ಗಂಟೆಗಳಲ್ಲಿ ಮೈಸೂರು ತಲುಪುತ್ತೇವೆ ಎಂದು ಹೇಳುತ್ತಾರೆ. ಅಷ್ಟು ವೇಗವಾಗಿ ಹೋಗಿ ಏನು ಸಾಧನೆ ಮಾಡುತ್ತಾರೆ' ಎಂದು ಸಾಹಿತಿ ಜಯಂತ ಕಾಯ್ಕಿಣಿ ಪ್ರಶ್ನಿಸಿದರು.

ಸಾಹಿತ್ಯಲೋಕ ಪಬ್ಲಿಕೇಷನ್ಸ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಾಲ್ಕು ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಈ ಮೊದಲು ಮೈಸೂರಿಗೆ ಹೋಗುವಾಗ ಅರ್ಧ ನಿದ್ದೆಯಲ್ಲಿಯೂ ಶ್ರೀರಂಗಪಟ್ಟಣ ಬಂದಿತು ಎನ್ನುವುದು ತಿಳಿಯುತ್ತಿತ್ತು. ಒಂದು ತಿರುವು, ಒಂದು ಪಾಗಾರ, ಮರಗಳಿಂದ ಅಲ್ಲಿನ ಪ್ರದೇಶಗಳನ್ನು ಗುರುತಿಸಲಾಗುತ್ತಿತ್ತು. ಈಗ ಎಲ್ಲಾ ಊರುಗಳು ಒಂದೇ ಆಗಿವೆ. ಎಲ್ಲಾ ಕಡೆ ಬ್ರ್ಯಾಂಡೆಡ್ ವಸ್ತುಗಳ ಮಳಿಗೆಗಳು ಕಾಣಸಿಗುತ್ತವೆ. ಮೊದಲಾಗಿದ್ದರೆ ನಮ್ಮೂರ ಶಾಲೆ, ದೇವಸ್ಥಾನವೆಂದು ತೋರಿಸಲಾಗುತ್ತಿತ್ತು. ಆಧುನಿಕತೆಯಿಂದಾಗಿ ಪ್ರಾದೇಶಿಕ ವೈವಿಧ್ಯ ಮರೆಯಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸಾಹಿತ್ಯ ಎನ್ನುವುದು ಕೌದಿಯಂತೆ. ಬದುಕಿನ ಒಂದೊಂದು ತುಣುಕು ಅದರಲ್ಲಿ ಇರುತ್ತದೆ. ಸಾಹಿತ್ಯ ರಚನೆ ಮಾಡುವುದು ಬಿಡುಗಡೆಗಾಗಿ. ಹಾದಿ ಬಿಟ್ಟು ಹೋದಾಗಲೇ ಹೊಸ ಸೂರ್ಯೋದಯ ಕಾಣಿಸುತ್ತದೆ' ಎಂದು ಹೇಳಿದರು.

ಲೇಖಕಿ ಕುಸುಮಾ ಆಯರಹಳ್ಳಿ, 'ಪ್ರತಿ ವರ್ಷ ಸಾವಿರಾರು ಕೃತಿಗಳು ಪ್ರಕಟವಾಗುತ್ತಿವೆ. ಆದರೆ, ಬಹುತೇಕ ಕೃತಿಗಳ ಎರಡನೆ ಆವೃತ್ತಿ ಬರುತ್ತಿಲ್ಲ. ಕನ್ನಡ ಪುಸ್ತಕೋದ್ಯಮಕ್ಕೆ ಸಂಬಂಧಿಸಿದಂತೆ ಇದು ಬೇಸರದ ಸಂಗತಿ' ಎಂದು ವಿಷಾದಿಸಿದರು.

'ಗ್ರಂಥಾಲಯ ಇಲಾಖೆಯಿದ್ದರೂ ಓದುಗರನ್ನು ಸೃಷ್ಟಿ ಮಾಡುತ್ತಿಲ್ಲ. ಕೋಟ್ಯಂತರ ರೂಪಾಯಿಯಲ್ಲಿ ಪುಸ್ತಕಗಳನ್ನು ಖರೀದಿಸುವುದೇ ಕರ್ತವ್ಯವೆಂದು ಇಲಾಖೆ ಅಂದುಕೊಂಡಿದೆ. ಇದರಿಂದಾಗಿ ಒಳ್ಳೆಯ ಪುಸ್ತಕಗಳೂ ರದ್ದಿಗೆ ಹೋಗುತ್ತಿವೆ' ಎಂದು ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ಕೆ. ಶ್ರೀನಾಥ್ ಅವರ (ಎಡದಿಂದ ನಾಲ್ಕನೆಯವರು) 'ಕನಸು ಸೊಗಸು', ಕಂ.ಕ. ಮೂರ್ತಿ ಅವರ (ಎಡದಿಂದ ಐದನೆಯವರು) 'ಒಂದು ಗುಲಾಬಿಯ ಕಥೆ', ವಸಂತ ಕಲ್‌ಬಾಗಲ್ ಅವರ (ಎಡದಿಂದ ಎರಡನೆಯವರು) 'ಬ್ರೆಜಿಲ್ ಪಯಣ' ಹಾಗೂ ಅಂಜನಾ ಹೆಗಡೆ ಅವರ (ಎಡದಿಂದ ಮೊದಲನೆಯವರು) 'ಅಪ್ಪಗೌಡನ ಶಂಖಪುಷ್ಪ' ಪುಸ್ತಕವನ್ನು ಜಯಂತ ಕಾಯ್ಕಿಣಿ ಬಿಡುಗಡೆ ಮಾಡಿದರು. ಕುಸುಮಾ ಆಯರಹಳ್ಳಿ ಇದ್ದಾರೆ –ಪ್ರಜಾವಾಣಿ ಚಿತ್ರ

ಸಾರ್ವಜನಿಕ ಸಾರಿಗೆಯಲ್ಲಿ ಸಾಗಿದಾಗ ಸಮಾಜ ನಮ್ಮ ಜೀವನದ ಭಾಗವಾಗುತ್ತದೆ. ಯಾರ ಬಳಿಯೂ ಹೇಳಿಕೊಳ್ಳಲಾಗದ್ದನ್ನು ಪಕ್ಕದ ಸೀಟಿನಲ್ಲಿ ಕುಳಿತವರ ಬಳಿ ಹೇಳಿಕೊಳ್ಳುತ್ತೇವೆ. ಇದು ಸಂತೆಯ ಸಲಿಗೆ

ಜಯಂತ ಕಾಯ್ಕಿಣಿ, ಸಾಹಿತಿ

ಪುಸ್ತಕ ಪರಿಚಯ

ಪುಸ್ತಕ: ಕನಸು ಸೊಗಸು
ಲೇಖಕ: ಕೆ. ಶ್ರೀನಾಥ್
ಪುಟ: 394
ಬೆಲೆ: ₹ 450

ಪುಸ್ತಕ: ಒಂದು ಗುಲಾಬಿಯ ಕಥೆ
ಲೇಖಕ: ಕಂ.ಕ. ಮೂರ್ತಿ
ಪುಟ: 110
ಬೆಲೆ: ₹ 150

ಪುಸ್ತಕ: ಬ್ರೆಜಿಲ್ ಪಯಣ
ಲೇಖಕ: ವಸಂತ ಕಲ್‌ಬಾಗಲ್
ಪುಟ: 96
ಬೆಲೆ: ₹ 130

ಪುಸ್ತಕ: ಅಪ್ಪಿಗೌಡನ ಶಂಖಪುಷ್ಪ
ಲೇಖಕ: ಅಂಜನಾ ಹೆಗಡೆ
ಪುಟ: 115
ಬೆಲೆ: ₹ 150

- ನಾಲ್ಕೂ ಪುಸ್ತಕಗಳ ಪ್ರಕಟಣೆ ಸಾಹಿತ್ಯಲೋಕ ಪಬ್ಲಿಕೇಷನ್ಸ್

ಸರ್ಕಾರಕ್ಕೆ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯ

ಬರ ಘೋಷಿಸಿ, ಪರಿಹಾರ ಚುರುಕಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: 'ಮಳೆ ಕೊರತೆ ಇರುವುದರಿಂದಾಗಿ ಬರಪೀಡಿತ ಪ್ರದೇಶಗಳ ಘೋಷಣೆಯನ್ನು ತ್ವರಿತವಾಗಿ ಮಾಡಿ ಪರಿಹಾರ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, '130 ತಾಲ್ಲೂಕುಗಳಲ್ಲಿ ಬರದ ಛಾಯೆ ಇದೆ ಎಂದು ಸಚಿವರೇ ಹೇಳಿದ್ದಾರೆ. ಹೀಗಾಗಿ, ರೈತರಿಗೆ ನೆರವಾಗುವ ಕೆಲಸವನ್ನು ತ್ವರಿತವಾಗಿ ಆರಂಭಿಸಬೇಕು' ಎಂದು ಆಗ್ರಹಿಸಿದರು.

'ಅತಿವೃಷ್ಟಿ ಹಾಗೂ ಅನಾವೃಷ್ಟಿ ವಿಷಯದಲ್ಲಿ ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ) ಮಾನದಂಡವನ್ನು ಬದಲಿಸಬೇಕು. ಭಿಕ್ಷೆಯ ರೂಪದಲ್ಲಿ ಪರಿಹಾರ ಕೊಡುವುದನ್ನು ನಿಲ್ಲಿಸಬೇಕು. ವೈಜ್ಞಾನಿಕವಾಗಿ ಪರಿಹಾರ ನೀಡಬೇಕು' ಎಂದರು.

200 ದಿನ ಕೆಲಸ ಕೊಡಿ: 'ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕೈಗಳಿಗೆ ಉದ್ಯೋಗ ಖಾತ್ರಿ ಯೋಜನೆಯಡಿ ವರ್ಷಕ್ಕೆ 100 ದಿನಗಳ ಬದಲಿಗೆ 200 ದಿನಗಳವರೆಗೆ ಕೆಲಸ ನೀಡಬೇಕು. ಫಸಲು ನಷ್ಟ ಅಂದಾಜು ಮಾಡಿ ವೈಜ್ಞಾನಿಕ ಪರಿಹಾರ ಕಲ್ಪಿಸಬೇಕು. ಹೈನುಗಾರಿಕೆಗೂ ನೆರವಾಗಬೇಕು ಎಂದು ಒತ್ತಾಯಿಸಿದರು.

'ಅನಿಯಮಿತ ಲೋಡ್ ಶೆಡ್ಡಿಂಗ್ ಸಮಸ್ಯೆ ಗ್ರಾಮೀಣ ಪ್ರದೇಶಗಳಲ್ಲಿ ಜಾಸ್ತಿ ಇದೆ. ಪಂಪ್‌ಸೆಟ್‌ಗಳನ್ನೇ ಆಧರಿಸಿರುವ ತೋಟಗಾರಿಕೆ ಬೆಳೆ ನಷ್ಟವಾಗುವ ಸಾಧ್ಯತೆ ಇದೆ. ವಿದ್ಯುತ್ ವ್ಯತ್ಯಯ ನಿಲ್ಲಿಸಿ ಕೃಷಿ ಚಟುವಟಿಕೆಗೆ ಉತ್ತೇಜನ ನೀಡಬೇಕು. ಇದೆಲ್ಲ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೈಸೂರಿನಲ್ಲಿ ಆ.28ರಂದು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಹಾಗೂ ಟನ್ ಕಬ್ಬಿಗೆ ಹೆಚ್ಚುವರಿಯಾಗಿ ಘೋಷಿಸಿದ್ದ ₹ 150 ಬಾಕಿ ಕೊಡಿಸುವಂತೆ ಆಗ್ರಹಿಸಿ ಹೋರಾಟ ನಡೆಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರವು ಆ.30ರಂದು ಸಭೆ ಕರೆದಿತ್ತು. ಆದರೆ ಅಂದು 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ಕಾರ್ಯಕ್ರಮದ ಕಾರಣದಿಂದ ಸಭೆ ಮುಂದೂಡಿರುವುದಾಗಿ ತಿಳಿಸಲಾಗಿದೆ' ಎಂದು ಹೇಳಿದರು.

'ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಭೆ ಕರೆಯುವಂತೆ ಮುಖ್ಯಮಂತ್ರಿಯನ್ನು ಕೋರಿದ್ದೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು.

ಬರಗಾಲ ನಿರ್ವಹಣೆಗೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಹೆಚ್ಚಿನ ಅನುದಾನ ಒದಗಿಸಬೇಕು. ಮುಖ್ಯಮಂತ್ರಿಯು ಪ್ರಧಾನಿಗೆ ತ್ವರಿತ ಮನವಿ ಸಲ್ಲಿಸಬೇಕು

ಬಡಗಲಪುರ ನಾಗೇಂದ್ರ
ಅಧ್ಯಕ್ಷ, ರಾಜ್ಯ ರೈತ ಸಂಘ

ಮುಖ್ಯಾಂಶಗಳು

- ಮುಖ್ಯಮಂತ್ರಿಗೆ ಮನವಿ ಸಲ್ಲಿಕೆ ಇಂದು
- ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ
- ಕಬ್ಬು ಬೆಳೆಗಾರರ ಸಮಸ್ಯೆ: ಸಭೆ ಮುಂದಕ್ಕೆ



ಸೀರೆ ಓಟದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು

ಸೀರೆಯುಟ್ಟು ಹೆಜ್ಜೆ ಹಾಕಿದ ನಾರಿಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ– ಕಚೇರಿ ಕೆಲಸ, ಮಕ್ಕಳು– ಪೋಷಕರ ಆರೈಕೆ... ಹೀಗೆ ನಾನಾ ಜವಾಬ್ದಾರಿ ನಿರ್ವಹಿಸುವ ಮಹಿಳೆಯರು ಭಾನುವಾರ 'ತನೈರಾ ಸೀರೆ ಓಟ'ದಲ್ಲಿ ಉತ್ಸಾಹದಿಂದ ಪಾಲ್ಗೊಂಡು ಸಂಭ್ರಮಿಸಿದರು.

'ಜೆ.ಜೆ ಆಕ್ಟಿವ್' ಕೇಂದ್ರದ ವತಿಯಿಂದ ವಿಜಯನಗರದಲ್ಲಿ ಆಯೋಜಿಸಿದ್ದ ಓಟದಲ್ಲಿ ನಗರದ ಹಲವು ಪ್ರದೇಶಗಳ ಮಹಿಳೆಯರು ಭಾಗವಹಿಸಿದ್ದರು. ತರಹೇವಾರಿ ಬಣ್ಣಗಳ ಸೀರೆಯುಟ್ಟಿದ್ದ ಮಹಿಳೆಯರು ಓಟದಲ್ಲಿ ಹೆಜ್ಜೆ ಹಾಕಿದರು.

ಸ್ನ್ಯಾಪ್ ಲ್ಯಾಬ್ಸ್ ವ್ಯವಸ್ಥಾಪಕ ನಿರ್ದೇಶಕಿ ಸಿಂಧೂ ಗಂಗಾಧರನ್, ಸೀರೆ ಓಟಕ್ಕೆ ಚಾಲನೆ ನೀಡಿದರು.

ಸ್ನೇಹಿತರು ಹಾಗೂ ಕುಟುಂಬಸ್ಥರ ಜೊತೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಜಾಗೃತಿ ಸಂದೇಶಗಳ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಕೆಲ ಮಹಿಳೆಯರು, 'ಕಡಿಮೆ ತ್ಯಾಜ್ಯ, ಭೂಮಿ ಉಳಿವು' ಎಂಬ ಘೋಷವಾಕ್ಯದೊಂದಿಗೆ ಪರಿಸರಸ್ನೇಹಿ ಉಡುಗೆ ತೊಟ್ಟು ಗಮನ ಸೆಳೆದರು. ರಾಷ್ಟ್ರಧ್ವಜ ಹಿಡಿದು ಓಡಿದ ಕೆಲ ಮಹಿಳೆಯರು, 'ಭಾರತ ಮಾತಾ ಕೀ ಜೈ' ಘೋಷಣೆ ಕೂಗಿದರು.

ಬೈಕ್ ಏರಿದ್ದ ಕೆಲ ಮಹಿಳೆಯರು, ಓಟದ ರಸ್ತೆಯಲ್ಲಿ ಸಾಗಿಸಿ ಗಮನ ಸೆಳೆದರು.

ಮಹಿಳಾ ಸಂಘಟನೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯ ಸಂಘಗಳ ಪದಾಧಿಕಾರಿಗಳು ಓಟದಲ್ಲಿ ಭಾಗವಹಿಸಿದ್ದರು.

ಎಚ್‌ಡಿಡಿ ದಂಪತಿಗೆ ಹುಟ್ಟೂರ ಸನ್ಮಾನ ಕಾರ್ಯಕ್ರಮದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ

'ನಾಡು ಕಂಡ ಶ್ರೇಷ್ಠ ರಾಜಕಾರಣಿ ದೇವೇಗೌಡರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಣಕ್ಕೆ ಬೆಲೆ ನೀಡದೇ ತತ್ವಾದರ್ಶಗಳ ಮೂಲಕ ರಾಜಕಾರಣ ಮಾಡಿದ ಎಚ್.ಡಿ. ದೇವೇಗೌಡರು ನಾಡು ಕಂಡ ಶ್ರೇಷ್ಠ ರಾಜಕಾರಣಿ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಬಣ್ಣಿಸಿದರು.

ಯುಎಇ ಕನ್ನಡಿಗರ ಕನ್ನಡ ಕೂಟ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ದೇವೇಗೌಡ ದಂಪತಿಗೆ ಹುಟ್ಟೂರ ಸನ್ಮಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದ ಅಭಿವೃದ್ಧಿಯ ಚಿಂತನೆಯನ್ನಿಟ್ಟುಕೊಂಡು ರಾಜಕೀಯಕ್ಕೆ ಜೀವನವನ್ನು ಹಗಲಿರುಳು ಮೀಸಲಿಟ್ಟರು. ದೇವೇಗೌಡರ ಸಾಧನೆ ಎಲ್ಲರಿಗೂ ಗೊತ್ತು. ಸಾಧನೆಗೆ ಸರಿಯಾದ ಪ್ರತಿಫಲ ಅವರಿಗೆ ಸಿಗಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು. 'ಹಳ್ಳಿಯನ್ನು ನಂಬಿರುವ ದೇವೇಗೌಡರು ಮಣ್ಣಿನ ಮಗನಾಗಿಯೇ ಉಳಿದರು. ಅವರ ಜೀವನ ಚರಿತ್ರೆಯನ್ನು ಯುವಸಮೂಹ ಓದಬೇಕು' ಎಂದು ಸಲಹೆ ನೀಡಿದರು.

ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಎಚ್.ಡಿ.ದೇವೇಗೌಡ ಅವರು, 'ನಾನು ರಾಷ್ಟ್ರ ರಾಜಕಾರಣದ ಬಗ್ಗೆ ಮಾತನಾಡುವುದಿಲ್ಲ. ರಾಜ್ಯದ ಪರಿಸ್ಥಿತಿಯ ಕುರಿತು ಸೋಮವಾರ ಮಾತನಾಡುತ್ತೇನೆ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸಕ್ಕೆ ಋಣಿ' ಎಂದು ಹೇಳಿದರು.

ದುಬೈ ಕನ್ನಡಿಗರ ಕನ್ನಡ ಕೂಟದ ಅಧ್ಯಕ್ಷ ಸಾಧನ್ ದಾಸ್, ಬಿಬಿಎಂಪಿ ವಿಶೇಷ ಆಯುಕ್ತ ಜಯರಾಮ್ ರಾಯಪುರ, ಅಭಿಮಾನಿ ಸಮೂಹ ಸಂಸ್ಥೆಗಳು ವ್ಯವಸ್ಥಾಪಕ ಟಿ.ವೆಂಕಟೇಶ್, ಅನಿವಾಸಿ ಉದ್ಯಮಿ ಜಫ್ರುಲ್ಲಾ ಖಾನ್, ಅಮೆರಿಕ ಕನ್ನಡ ಕೂಟಗಳ ಅಸೋಸಿಯೇಶನ್ ಮಾಜಿ ಅಧ್ಯಕ್ಷ ಹಳೇಕೋಟೆ ವಿಶ್ವಮಿತ್ರ, ಓಮನ್ ಕನ್ನಡಿಗ ಉಪಾಧ್ಯಕ್ಷ ರಘುನಾಥ್ ಪ್ರಭು ಮಾತನಾಡಿದರು.

ಎಚ್.ಡಿ. ದೇವೇಗೌಡರ ಜೀವನ ಸಾಧನೆಯ ಸಾಕ್ಷಚಿತ್ರ ಪ್ರದರ್ಶಿಸಲಾಯಿತು.



ನಗರದ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದಲ್ಲಿ ದುಬೈ ಕನ್ನಡ ಕೂಟ ವತಿಯಿಂದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಮತ್ತು ಚನ್ನಮ್ಮ ದಂಪತಿಯನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸನ್ಮಾನಿಸಿದರು. ದುಬೈ ಕನ್ನಡಿಗರ ಕನ್ನಡ ಕೂಟದ ಅಧ್ಯಕ್ಷ ಸಾಧನ್ ದಾಸ್, ಬಿಬಿಎಂಪಿ ವಿಶೇಷ ಆಯುಕ್ತ ಜಯರಾಮ್ ರಾಯಪುರ, ಅಭಿಮಾನಿ ಸಮೂಹ ಸಂಸ್ಥೆಗಳು ವ್ಯವಸ್ಥಾಪಕ ಟಿ. ವೆಂಕಟೇಶ್, ಅನಿವಾಸಿ ಉದ್ಯಮಿ ಜಫ್ರುಲ್ಲಾ ಖಾನ್, ಅಮೆರಿಕ ಕನ್ನಡ ಕೂಟಗಳ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಹಳೇಕೋಟೆ ವಿಶ್ವಮಿತ್ರ, ಓಮನ್ ಕನ್ನಡಿಗ ಉಪಾಧ್ಯಕ್ಷ ರಘುನಾಥ್ ಪ್ರಭು, ದುಬೈ ಕನ್ನಡ ಕೂಟದ ಇಬ್ರಾಹಿಂ ಕಲೀಲ್, ಕನ್ನಡ ಸತ್ಯ ರಂಗಣ್ಣ ಇದ್ದರು –ಪ್ರಜಾವಾಣಿ ಚಿತ್ರ

ಚಿಕ್ಕಬಾಣಾವರ: ಸೌಲಭ್ಯ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಒಗ್ಗೂಡಿಸಿ, ಪುರಸಭೆಯಾಗಿ ಮೇಲ್ದರ್ಜೆಗೇರಿಸಿ ಎರಡು ವರ್ಷ ಕಳೆದರೂ ಚುನಾವಣೆ ಮಾತ್ರ ಈವರೆಗೆ ನಡೆದಿಲ್ಲ.

ಜನಪ್ರತಿನಿಧಿಗಳು ಇಲ್ಲದ ಕಾರಣ ನಾಗರಿಕರಿಗೆ ಸೌಲಭ್ಯಗಳು ಸಿಗದಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪುರಸಭೆ ವ್ಯಾಪ್ತಿಯಲ್ಲಿ ಅನೇಕ ಸಮಸ್ಯೆಗಳಿದ್ದು, ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಆದಷ್ಟು ಬೇಗ ಚುನಾವಣೆ ನಡೆಸಬೇಕು ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪುರಸಭೆ ಮುಖ್ಯ ಅಧಿಕಾರಿ ಎಚ್.ಎ.ಕುಮಾರ್ ಅವರು 'ಪುರಸಭೆಯಾದ ಬಳಿಕ 23 ವಾರ್ಡ್‌ಗಳಿವೆ. ಜನರ ಕುಂದು ಕೊರತೆಯನ್ನು ಬಗೆಹರಿಸುತ್ತಿದ್ದೇವೆ. ಯಾವುದನ್ನೂ ಬಾಕಿ ಉಳಿಸಿಲ್ಲ ಎಂದು ಹೇಳಿದರು.

ನೀರು, ರಸ್ತೆ, ಬೀದಿ ದೀಪ ಸೇರಿದಂತೆ ನಾಗರಿಕ ಸಮಸ್ಯೆಗಳಿಗೆ ದೂರು ಆಧರಿಸಿ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ ಎಂದು ಹೇಳಿದರು.



ಚಿಕ್ಕಬಾಣಾವರ ಪುರಸಭೆ



ಸೆ.4ರಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷಾ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇದೇ ಸೆ.4ರಿಂದ ಎಸ್ಸೆಸ್ಸೆಲ್ಸಿ- ದ್ವಿತೀಯ ಪಿಯುಸಿ(ವಿಜ್ಞಾನ ವಿಷಯ) ಪಠ್ಯಗಳ ಅಧ್ಯಾಯವಾರು ಪ್ರಶ್ನೋತ್ತರಗಳ 'ಪರೀಕ್ಷಾ ದಿಕ್ಸೂಚಿ' ಅಂಕಣ ಆರಂಭಿಸಲಾಗುತ್ತಿದೆ.

ಈ ಅಂಕಣದಲ್ಲಿ ಎಸ್ಸೆಸ್ಸೆಲ್ಸಿಯ ಇಂಗ್ಲಿಷ್, ಗಣಿತ, ಸಮಾಜ ಮತ್ತು ವಿಜ್ಞಾನದ ವಿಷಯಗಳು ಹಾಗೂ ದ್ವಿತೀಯ ಪಿಯುಸಿಯ (ವಿಜ್ಞಾನ ವಿಷಯ) ಭೌತವಿಜ್ಞಾನ(Physics), ರಸಾಯನ ವಿಜ್ಞಾನ (Chemistry), ಗಣಿತ (Mathematics) ಮತ್ತು ಜೀವವಿಜ್ಞಾನ(Biology) ವಿಷಯಗಳ ಅಧ್ಯಾಯವಾರು ಮಾದರಿ ಪ್ರಶ್ನೋತ್ತರಗಳನ್ನು ಪ್ರಕಟಿಸಲಾಗುತ್ತಿದೆ.

ಎಸ್ಸೆಸ್ಸೆಲ್ಸಿ ಪ್ರಶ್ನೋತ್ತರಗಳು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿರುತ್ತವೆ. ಕನ್ನಡ ಮಾಧ್ಯಮದ ಪ್ರಶ್ನೋತ್ತರ ಮುದ್ರಣ ಆವೃತ್ತಿಯಲ್ಲಿ ಪ್ರಕಟವಾದರೆ, ಇಂಗ್ಲಿಷ್ ಮಾಧ್ಯಮದ ಮಾಹಿತಿ ಆನ್‌ಲೈನ್ ಆವೃತ್ತಿಯಲ್ಲಿ ಪ್ರಕಟವಾಗಲಿದೆ. ಮುದ್ರಣ ಆವೃತ್ತಿಯಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಡುವಂತೆ ಸೂಚನೆ ನೀಡಲಾಗಿರುತ್ತದೆ. ಹಾಗೆಯೇ, ಈ ಬಾರಿ ಪಿಯುಸಿ ಪ್ರಶ್ನೋತ್ತರ ಇಂಗ್ಲಿಷ್ ಮಾಧ್ಯಮದಲ್ಲಿರುತ್ತದೆ.

ಈ ಎರಡೂ ತರಗತಿಯ ಮಾಹಿತಿಗಳು ವಾರಕ್ಕೆ ನಾಲ್ಕು ದಿನ ಪ್ರಕಟವಾಗುತ್ತವೆ. ಸೋಮವಾರದಿಂದ ಗುರುವಾರದವರೆಗೆ ಪ್ರತಿ ದಿನ ಪ್ರಕಟವಾಗುವ ಪುರವಣಿಯ ಅರ್ಧ ಪುಟದಲ್ಲಿ ಪರೀಕ್ಷಾ ದಿಕ್ಸೂಚಿಯಿರುತ್ತದೆ.

ನುರಿತ ಅಧ್ಯಾಪಕರು ಮತ್ತು ಶಿಕ್ಷಕರು ಸಿದ್ಧಪಡಿಸುವ ಈ ದಿಕ್ಸೂಚಿಯ ಮಾಹಿತಿ, ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾರ್ಗದರ್ಶಿಯಾಗಲಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ನಿಂದ ಸ್ನಾತಕೋತ್ತರ ಪದವಿವರೆಗೂ ವಿವಿಧ ಕೋರ್ಸ್‌ಗಳಿವೆ. ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಈ ಕೋರ್ಸ್‌ಗಳನ್ನು ಕಲಿಸುತ್ತವೆ. ಕೋರ್ಸ್‌ಗಳಿಗೆ ತಕ್ಕಂತೆ ಹಲವು ಉದ್ಯೋಗಗಳಿವೆ.

ಬಾಹ್ಯಾಕಾಶ ಕ್ಷೇತ್ರ

ವಿವಿಧ ಕೋರ್ಸ್ – ವಿಪುಲ ಉದ್ಯೋಗ

ಗುರುರಾಜ್ ಎಸ್. ದಾವಣಗೆರೆ

ಚಂದ್ರಯಾನ-3 ಯಶಸ್ವಿಯಾಗುತ್ತಿದ್ದಂತೆ ಅದಕ್ಕಾಗಿ ದುಡಿದ ವಿಜ್ಞಾನಿ ಮತ್ತು ತಂತ್ರಜ್ಞರು ಒಬ್ಬೊಬ್ಬರಾಗಿ ಜನಪ್ರಿಯರಾಗುತ್ತಿದ್ದಾರೆ. ಇವರು ನಮ್ಮೂರಿನವರು, ನಮ್ಮ ಶಾಲೆಯಲ್ಲಿ ಕಲಿತವರು, ಕನ್ನಡ ಮಾಧ್ಯಮದಲ್ಲಿ ಓದಿದವರು.. ನಮ್ಮ ಸಹಪಾಠಿಯಾಗಿದ್ದವರು.. ಹೀಗೆ ಅಭಿಮಾನದ ಹೊಳೆ ಹರಿಯುತ್ತಿದೆ. ಇಸ್ರೊದ ಈ ಸಾಧನೆಯಿಂದ ಬಾಹ್ಯಾಕಾಶ ಕ್ಷೇತ್ರ ಮತ್ತೆ ಮುನ್ನೆಲೆಗೆ ಬಂದಿದೆ.

ಈಗ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ಅನೇಕರು ನಾವು ಬಾಹ್ಯಾಕಾಶ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವುದು ಹೇಗೆ ಎಂದು ಯೋಚಿಸುತ್ತಿದ್ದಾರೆ. ಯಾವ ಡಿಪ್ಲೊಮಾ, ಪದವಿ ಓದಿದರೆ ನಾಸಾ, ಇಸ್ರೊಗಳಲ್ಲಿ ಕೆಲಸ ಸಿಗುತ್ತದೆ ಎಂದು ಲೆಕ್ಕ ಹಾಕುತ್ತಿದ್ದಾರೆ. ಇದರ ಜೊತೆಗೆ, ಯಾವ ಕಾಲೇಜುಗಳಲ್ಲಿ ಕೋರ್ಸ್‌ಗಳು ಲಭ್ಯವಿವೆ? ಶುಲ್ಕ ಎಷ್ಟು, ಪ್ರವೇಶ ಪರೀಕ್ಷೆ ಇರುತ್ತದೆಯೇ ? ಆನ್‌ಲೈನೋ/ ಆಫ್‌ಲೈನ್ ಕೋರ್ಸ್.. ಯಾವುದು ಸರಿ? ವೇತನವೆಷ್ಟಿರಬಹುದು ? ಹೀಗೆ ಹಲವು ಪ್ರಶ್ನೆಗಳೊಂದಿಗೆ ಚರ್ಚೆ ಶುರುವಾಗಿದೆ.

ಯಾರಿಗೆಲ್ಲ ಅವಕಾಶ?

ಹೈಸ್ಕೂಲು ಶಿಕ್ಷಣ ಮುಗಿಸಿ ಪಿಯುಸಿಯಲ್ಲಿ ಗಣಿತ, ಭೌತ ವಿಜ್ಞಾನ ಹಾಗೂ ರಸಾಯನ ವಿಜ್ಞಾನ (ಪಿಸಿಎಂ) ವಿಷಯಗಳನ್ನು ಅಧ್ಯಯನ ಮಾಡಿರುವ ವಿದ್ಯಾರ್ಥಿಗಳು, ಮುಂದೆ ಏರೋಸ್ಪೇಸ್ ಎಂಜಿನಿಯರಿಂಗ್, ಎಂಜಿನಿಯರಿಂಗ್ ಫಿಸಿಕ್ಸ್, ರೇಡಿಯೊ ಎಂಜಿನಿಯರಿಂಗ್, ಮೆಕಾನಿಕಲ್ ಕಂಪ್ಯೂಟರ್ ಸೈನ್ಸ್ , ಎಲೆಕ್ಟ್ರಾನಿಕ್ಸ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪೂರೈಸಬೇಕು. ಓದಿದ ಪದವಿಯಲ್ಲಿ ಶೇ 65ರಷ್ಟು ಅಂಕಗಳನ್ನು ಪಡೆದವರು ಇಸ್ರೊ ನಡೆಸುವ ಐಸಿಆರ್‌ಬಿ(ಇಸ್ರೊ ಸೆಂಟ್ರಲೈಸ್ಡ್ ರೆಕ್ರೂಟ್‌ಮೆಂಟ್ ಬೋರ್ಡ್) ಪರೀಕ್ಷೆ ಎದುರಿಸಬೇಕು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಇಸ್ರೊ ನಡೆಸುವ ಮತ್ತೊಂದು ಲಿಖಿತ ಪರೀಕ್ಷೆ ಹಾಗೂ ಸಂದರ್ಶನ ಎದುರಿಸಿ ಯಶಸ್ವಿಯಾಗಬೇಕು. ಎಂಜಿನಿಯರಿಂಗ್ ಅಲ್ಲದೆ ಡಿಪ್ಲೊಮಾ, ಜನರಲ್ ಫಿಸಿಕ್ಸ್, ಜಿಯೊ ಫಿಸಿಕ್ಸ್, ಜಿಯೊ ಇನ್‌ಫರ್ಮ್ಯಾಟಿಕ್ಸ್ , ಆಸ್ಟ್ರೊ ಫಿಸಿಕ್ಸ್ ಇನ್‌ಸ್ಟ್ರುಮೆಂಟೇಶನ್, ಅಪ್ಲೈಡ್ ಮ್ಯಾಥಮ್ಯಾಟಿಕ್ಸ್‌ಗಳಲ್ಲಿ ಪದವಿ , ಸ್ನಾತಕೋತ್ತರ ಪದವಿ ಇಲ್ಲವೇ ಪಿಎಚ್.ಡಿ ಗಳಿಸಿದವರು ಇಸ್ರೊ ನಡೆಸುವ ಪರೀಕ್ಷೆಗೆ ಹಾಜರಾಗಬಹುದು. ಈ ಮೂರು ಹಂತಗಳನ್ನು ಯಶಸ್ವಿಯಾಗಿ ದಾಟುವವರಿಗೆ ಇಸ್ರೊ ಉದ್ಯೋಗ ನೀಡುತ್ತದೆ .

ಎಲ್ಲೆಲ್ಲಿ ಕೋರ್ಸ್‌ಗಳು ಲಭ್ಯ?

ಇಸ್ರೊ ಮತ್ತು ಇತರ ದೇಶಗಳ ಬಾಹ್ಯಾಕಾಶ ಸಂಶೋಧನೆ- ವಿಜ್ಞಾನ- ತಂತ್ರಜ್ಞಾನ ಸಂಸ್ಥೆಗಳಲ್ಲಿ ಕೆಲಸ ಮಾಡಲು ಬೇಕಾಗುವ ಶಿಕ್ಷಣವನ್ನು ಈ ಕೆಳಗಿನ ಸಂಸ್ಥೆಗಳು ಭಾರತ ಮತ್ತು ವಿದೇಶಗಳಲ್ಲಿ ನೀಡುತ್ತವೆ.

1. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ತಿರುವನಂತಪುರಂ, ಕೇರಳ .
2. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ,ಬೆಂಗಳೂರು.
3. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೊ ಫಿಸಿಕ್ಸ್, ಬೆಂಗಳೂರು.
4. ನ್ಯಾಷನಲ್ ಸೆಂಟರ್ ಫಾರ್ ರೇಡಿಯೊ ಆಸ್ಟ್ರೊನಮಿ, ಪುಣೆ.
5. ಆರ್ಯಭಟ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಅಬ್ಸರ್ವೇಷನಲ್ ಸೈನ್ಸ್, ನೈನಿತಾಲ್.
6. ಸೆಂಟರ್ ಫಾರ್ ಅರ್ಥ ಅಂಡ್ ಸ್ಪೇಸ್ ಸೈನ್ಸ್ ಸ್ , ಹೈದ್ರಾಬಾದ್
7. ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಂಗಳೂರು
8. ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೇಸ್ರಾ
9. ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಏರೋ ಸ್ಪೇಸ್ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್ಮೆಂಟ್ ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.
10. ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಬೆಂಗಳೂರು
11. ರೇಡಿಯೊ ಅಸ್ಟ್ರೊನಮಿ ಸೆಂಟರ್, ಉದಕಮಂಡಲ(ಊಟಿ)
12. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್, ಡೆಹ್ರಾಡೂನ್
13. ಮುಂಬೈ, ಮದ್ರಾಸ್, ಖರಗ್‌ಪುರ, ಕಾನ್ಪುರ ಐಐಟಿ ಗಳು
14. ಹಿಂದುಸ್ತಾನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್.
15. ವಿದೇಶಗಳಲ್ಲಿ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಹಾರ್ವರ್ಡ್, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯಗಳು, ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಜಾರ್ಜಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮೆಸಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ವಿಟ್ಜರ್‌ಲೆಂಡ್‌ನ ಜುರಿಚ್ ಇಟಿಎಚ್‌ಗಳು ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನದ ಕೋರ್ಸ್ ಗಳನ್ನು ಕಲಿಸುತ್ತವೆ.

ಡಿಪ್ಲೊಮಾ ಕೋರ್ಸ್‌ಗಳು

ಕ್ರಮ ಸಂಖ್ಯೆ	ಕೋರ್ಸ್ ಹೆಸರು	ಕಲಿಸುವ ಸಂಸ್ಥೆ	ಶುಲ್ಕ
1	ಡಿಪ್ಲೊಮಾ ಇನ್ ಸ್ಪೇಸ್ ಟೆಕ್ನಾಲಜಿ	ಪಂಜಾಬ್ ವಿಶ್ವವಿದ್ಯಾಲಯ, www.punjabiuniversity.ac.in	₹25 ಸಾವಿರ
2	ಡಿಪ್ಲೊಮಾ ಇನ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ	ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ತಿರುವನಂತಪುರಂ, www.iist.ac.in	₹35 ಸಾವಿರ
3	ಡಿಪ್ಲೊಮಾ ಇನ್ ಆಸ್ಟ್ರೊನಮಿ ಆ್ಯಂಡ್ ಸ್ಪೇಸ್ ಟೆಕ್ನಾಲಜಿ	ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೊಫಿಸಿಕ್ಸ್, ಬೆಂಗಳೂರು, https://www.iiap.res.in/	₹60 ಸಾವಿರ
4	ಡಿಪ್ಲೊಮಾ ಇನ್ ಸ್ಯಾಟಲೈಟ್ ಕಮ್ಯುನಿಕೇಷನ್	ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪಿಲಾನಿ, ರಾಜಸ್ಥಾನ, www.iiap.re.in	₹50 ಸಾವಿರ
5	ಪೋಸ್ಟ್ ಗ್ರ್ಯಾಜುಯೇಟ್ ಡಿಪ್ಲೊಮಾ ಇನ್ ಸ್ಯಾಟಲೈಟ್ ಆ್ಯಂಡ್ ಸ್ಪೇಸ್ ಕಮ್ಯುನಿಕೇಷನ್	ಐಐಟಿ, ಬಾಂಬೆ, http://www.iitb.ac.in/	₹30 ಸಾವಿರ



ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ಯುವಿಕಾ'

ಅಭಿವೃದ್ಧಿ ಕಾರ್ಯಕ್ರಮಗಳಿಂದ ದೂರವೇ ಇರುವ ಗ್ರಾಮೀಣ ವಿದ್ಯಾರ್ಥಿಗಳನ್ನು ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಗಳ ಕಡೆ ಸೆಳೆಯಲು ಇಸ್ರೊದವರು 'ಯುವ ವಿಜ್ಞಾನಿ ಕಾರ್ಯಕ್ರಮ'- ಯುವಿಕಾ ನಡೆಸುತ್ತಿದ್ದಾರೆ. ಬಾಹ್ಯಾಕಾಶ ವಿಜ್ಞಾನದ ಪ್ರಾಥಮಿಕ ತಿಳಿವಳಿಕೆ ಮತ್ತು ಪ್ರಾಯೋಗಿಕ ಸಾಧ್ಯತೆಗಳನ್ನು ತಿಳಿ ಹೇಳುವ ಈ ಕಾರ್ಯಕ್ರಮ ಮುಂಬರುವ ದಿನಗಳಲ್ಲಿ ವಿಜ್ಞಾನ ,ತಂತ್ರಜ್ಞಾನ , ಎಂಜಿನಿಯರಿಂಗ್ ಮತ್ತು ಗಣಿತ (STEM) ವಿಷಯಗಳ ಸಂಶೋಧನೆಗಳ ಹೊಸ ಸಾಧ್ಯತೆಗಳನ್ನು ಅನಾವರಣಗೊಳಿಸುತ್ತದೆ ಎಂದು ನಂಬಲಾಗಿದೆ. ಚಂದ್ರಯಾನ-3 ಯಶಸ್ಸಿನಿಂದ ಉತ್ತೇಜಿತರಾಗಿರುವ ವಿದ್ಯಾರ್ಥಿಗಳು ಯುವಿಕಾದಲ್ಲಿ ತರಬೇತಿ ಪಡೆಯಬಹುದು.


ಹೆಚ್ಚಿನ ಸಾಧನೆಗೆ 'ಉನ್ನತಿ'

ಎಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿರುವ ವಿದೇಶಿ ವಿದ್ಯಾರ್ಥಿಗಳಿಗಾಗಿಯೇ ನ್ಯಾನೊ ಉಪಗ್ರಹಗಳ ಜೋಡಣೆ ಮತ್ತು ನಿರ್ಮಾಣ ಹೇಗೆ ಎಂಬುದನ್ನು ಕಲಿಸಲು ಇಸ್ರೊ, 2018ರಿಂದ ಉನ್ನತಿ (UNispace Nanosatellite Assembly and Training by ISRO) ಎಂಬ ತರಬೇತಿ ಕಾರ್ಯಕ್ರಮವನ್ನು ನಡೆಸುತ್ತಿದೆ.

ಬಾಹ್ಯಾಕಾಶವನ್ನು ಸಂಶೋಧನೆ ಮತ್ತು ಶಾಂತಿಯ ಕೆಲಸಗಳಿಗಾಗಿ ಮಾತ್ರ ಬಳಸಿಕೊಳ್ಳಬೇಕು ಎಂಬ ವಿಶ್ವಸಂಸ್ಥೆಯ ಸಂಘಟನೆ 'ಯೂನಿಸ್ಪೇಸ್‌ಗೆ' 50 ವರ್ಷ ತುಂಬಿದಾಗ ವಿಯೆನ್ನಾದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿತ್ತು. ಇಲ್ಲಿವರೆಗೆ 33 ದೇಶಗಳ 600 ಕ್ಕೂ ಹೆಚ್ಚು ಆಸಕ್ತ ವಿದ್ಯಾರ್ಥಿಗಳು ಎರಡು ತಿಂಗಳ ಕಾಲ ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ ವಸತಿ ಸೌಕರ್ಯಗಳೊಂದಿಗೆ ತರಬೇತಿ ಪಡೆದುಕೊಂಡಿದ್ದಾರೆ.

ಇ-ಲರ್ನಿಂಗ್ ಪ್ರೋಗ್ರಾಂ

ಡೆಹ್ರಾಡೂನ್‌ನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್ ಸಂಸ್ಥೆಯು(ಐಐಆರ್‌ಎಸ್) ವಿದ್ಯಾರ್ಥಿಗಳಿಗಾಗಿ ಬಾಹ್ಯಾಕಾಶಗಳ ವಲಯ ವಿನ್ಯಾಸ ಮತ್ತು ಅವುಗಳ ಬಳಕೆಯ ಕುರಿತು ಆನ್‌ಲೈನ್ ಮೂಲಕ ವಿಶೇಷ ತರಬೇತಿ ನೀಡುತ್ತದೆ. ಶಿಕ್ಷಣ ಸಂಸ್ಥೆಗಳ ತಜ್ಞರು ಮತ್ತು ಆಸಕ್ತ ವಿದ್ಯಾರ್ಥಿಗಳಿಗಾಗಿ ಬಾಹ್ಯಾಕಾಶ ತಂತ್ರಜ್ಞಾನದ ಕುರಿತ ನೇರ ತರಗತಿಗಳು(ಲೈವ್ ಕ್ಲಾಸಸ್) ಮತ್ತು ಮುದ್ರಿತ ಪಾಠಗಳನ್ನು ಇ - ಕ್ಲಾಸ್(ಎಲೆಕ್ಟ್ರಾನಿಕ್ ಕೊಲ್ಯಾಬರೇಟಿವ್ ಲರ್ನಿಂಗ್ ಅಂಡ್ ನಾಲೆಡ್ಜ್ ಶೇರಿಂಗ್ ಸಿಸ್ಟಮ್) ಗಳ ಮೂಲಕ ಹೆಚ್ಚಿನ ಕಲಿಕೆಗೆ ಅವಕಾಶ ಕಲ್ಪಿಸಿಕೊಟ್ಟಿದೆ. 2007 ರಿಂದ ಜಾರಿಯಲ್ಲಿರುವ ಈ ಕಾರ್ಯಕ್ರಮಗಳು ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಇಸ್ರೊದ ಸಹಯೋಗದೊಂದಿಗೆ ಯಶಸ್ವಿಯಾಗಿ ನಡೆಯುತ್ತಿವೆ. ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಾವಿರಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ಮೂಲಕ ಈಗಾಗಲೇ ಅಧ್ಯಯನ ಪೂರೈಸಿದ್ದಾರೆ.



ಸಾಂದರ್ಭಿಕ ಚಿತ್ರ

ಸ್ಟೂಡೆಂಟ್ ಸ್ಯಾಟಲೈಟ್ ಪ್ರೋಗ್ರಾಮ್ (SSP)

ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಕೃತಕ ಉಪಗ್ರಹ ರಚನೆ, ಜೋಡಣೆ ಮತ್ತು ಉಡಾವಣೆ ಕುರಿತು ತಿಳುವಳಿಕೆ ನೀಡಲು ಮತ್ತು ಮುಂದಿನ ದಿನಗಳಲ್ಲಿ ಬಾಹ್ಯಾಕಾಶ ವಿಜ್ಞಾನ ಅಧ್ಯಯನಕ್ಕೆ ಬೇಕಾದ ವಿದ್ಯಾರ್ಥಿ ಸಮೂಹವನ್ನು ಸಜ್ಜುಗೊಳಿಸಲು ಇಸ್ರೊ 'ಸ್ಟೂಡೆಂಟ್ ಸ್ಯಾಟಲೈಟ್ ಪ್ರೋಗ್ರಾಮ್ (ಎಸ್ ಎಸ್ ಪಿ)' ಎಂಬ ವಿನೂತನ ಕಾರ್ಯಕ್ರಮ ನಡೆಸುತ್ತಿದೆ. ಬಾಹ್ಯಾಕಾಶ ತಂತ್ರಜ್ಞಾನ ಕಲಿಯುವ ಜೊತೆಗೆ, ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ವ್ಯವಸ್ಥೆಯಲ್ಲೂ ಉದ್ಯೋಗಾವಕಾಶಗಳಿವೆ ಎಂಬುದನ್ನು ಮನದಟ್ಟು ಮಾಡಿಕೊಡುವ ಈ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ. ಉಪಗ್ರಹಗಳಷ್ಟೇ ಅಲ್ಲ, ಅವುಗಳಲ್ಲಿ ಅಡಕಗೊಳ್ಳುವ ಪೇ ಲೋಡ್ (ವಿವಿಧ ಬಗೆಯ ಪ್ರಯೋಗ ಕೈಗೊಳ್ಳಬಲ್ಲ ಸಲಕರಣೆ) ತಯಾರಿಸುವುದು ಹೇಗೆ ಎಂಬುದನ್ನೂ ಕಲಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಬಾಹ್ಯಾಕಾಶಕ್ಕೆ ಏರಲಿರುವ ದಿವಂಗತ ಪುನೀತ್ ರಾಜಕುಮಾರ್ ನೆನಪಿನ 'ಅಪ್ಪು ಉಪಗ್ರಹ' ವನ್ನು ತಜ್ಞರ ಮಾರ್ಗದರ್ಶನದಲ್ಲಿ ನಮ್ಮ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿಗಳೇ ನಿರ್ಮಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

'ಸ್ಟಾರ್ಟ್'(START) ತರಬೇತಿ

ಮೂಲ ವಿಜ್ಞಾನ ವಿಷಯಗಳಲ್ಲಿಉನ್ನತ ಅಧ್ಯಯನ ಕೈಗೊಳ್ಳುತ್ತಿರುವ ವಿದ್ಯಾರ್ಥಿಗಳನ್ನು ಬಾಹ್ಯಾಕಾಶ ವಿಜ್ಞಾನ ತಂತ್ರಜ್ಞಾನದ ಕಡೆಗೆ ಆಕರ್ಷಿಸಲು ಇಸ್ರೊ, ಸ್ಟಾರ್ಟ್ (ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿ ಅವೇರ್ನೆಸ್ ಟ್ರೈನಿಂಗ್) ಎಂಬ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಅಂತಿಮ ವರ್ಷದ ಪದವಿಯ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಿದೆ. ತರಬೇತಿಯು ಖಭೌತ ವಿಜ್ಞಾನ(ಆಸ್ಟ್ರೊ ಫಿಸಿಕ್ಸ್) ಸೂರ್ಯಭೌತ ವಿಜ್ಞಾನ (ಹೆಲಿಯೋ ಫಿಸಿಕ್ಸ್), ಭೂಮಿ- ಸೂರ್ಯರ ಪರಸ್ಪರ ವರ್ತನೆ, ಖಗೋಳ ವಿಜ್ಞಾನ, ಮೇಲಾಕಾಶದ ಅಧ್ಯಯನವನ್ನು ಒಳಗೊಂಡಿರುತ್ತದೆ.

(ಮುಂದಿನ ವಾರ: ಸ್ಪೇಸ್ ಟೆಕ್ನಾಲಜಿಗೆ ಸಂಬಂಧಿಸಿದ ಪದವಿ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು ಹಾಗೂ ಉದ್ಯೋಗಾವಕಾಶಗಳು)

(ಲೇಖಕರು: ಪ್ರಾಚಾರ್ಯರು, ವಿದ್ಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು)



ಎಸ್‌ಕ್ಯುಎಲ್: ಸರಳ, ಬಹುಪಯೋಗಿ ಪ್ರೋಗ್ರಾಮಿಂಗ್ ಭಾಷೆ

ಪ್ರದೀಪ್ ವೆಂಕಟರಾಮ್

ಎಸ್‌ಕ್ಯುಎಲ್ (SQL) - ಇದು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವೇ? ಬಿಬಿಎ, ಬಿ.ಕಾಂ ವಿದ್ಯಾರ್ಥಿಗಳು ಕಲಿಯಬಹುದೇ? ಎಲ್ಲಿ ಕಲಿಯಬಹುದು? ಉದ್ಯೋಗಾವಕಾಶಗಳೇನು?- ಇದು ಹಲವು ವಿದ್ಯಾರ್ಥಿಗಳ ಪ್ರಶ್ನೆಯಾಗಿದೆ. ಅನೇಕರು, ಇದನ್ನು ಕಲಿಯಲು ಇಂಥದ್ದೇ ಡಿಗ್ರಿ ಮಾಡಬೇಕು ಅಂತ ಅಂದುಕೊಂಡಿದ್ದಾರೆ.

ಖಂಡಿತಾ ಹಾಗಿಲ್ಲ. ಇದನ್ನು ಯಾರು ಬೇಕಾದರೂ ಕಲಿಯಬಹುದು. ಇದಕ್ಕೆ ಇಂಥದ್ದೇ ಡಿಗ್ರಿ ಆಗಿರಬೇಕೆಂಬ ನಿಯಮವಿಲ್ಲ. ಅಂದ ಹಾಗೆ, ಈ ಎಸ್‌ಕ್ಯುಎಲ್ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್ ಅನ್ನು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ(ಸಿಬಿಎಸ್‌ಇ) ಪಠ್ಯಕ್ರಮಗಳಿರುವ ಶಾಲೆಗಳಲ್ಲಿ ಎಂಟನೇ ತರಗತಿಯಿಂದ ಪ್ರಾಥಮಿಕವಾಗಿ ಕಲಿಸುವ ಪರಿಪಾಠವಿದೆ.

ಏನಿದು ಎಸ್‌ಕ್ಯುಎಲ್ ?

ಎಸ್‌ಕ್ಯುಎಲ್ –ಇದರ ವಿಸ್ತೃತ ರೂಪ Structured Query Language(SQL). ಇದನ್ನು ಕನ್ನಡದಲ್ಲಿ 'ಸಂರಚಿಸಿದ ಭಾಷಾ ಪ್ರಶ್ನಾವಳಿ' ಎನ್ನಬಹುದು. ಇದೊಂದು ಕಂಪ್ಯೂಟರ್ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್. ಇದನ್ನು ಕೋರ್ಸ್ ರೂಪದಲ್ಲಿ ಕಲಿಸುತ್ತಾರೆ. ಒಂದು ತಿಂಗಳೊಳಗೆ ಕಲಿಯಬಹುದು; ಆದರೆ, ಈ ಕೋರ್ಸ್ ಮೂಲಕ ಪಡೆದ ಜ್ಞಾನ ಮತ್ತು ಕೌಶಲವನ್ನು ಪರಿಣಾಮಕಾರಿಯಾಗಿ ಬಳಸಲು ಹೆಚ್ಚಿನ ಸಮಯ ಬೇಕಾಗುತ್ತದೆ. ಹಾಗೂ, ಅದು ಯಾವ ರೀತಿ, ಯಾವ ಕಾರ್ಯ ಮತ್ತು ಸಂದರ್ಭದಲ್ಲಿ ಬಳಸುತ್ತೀರಾ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ.

ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ ಕುರಿತಾದ ವೃತ್ತಿಗಳಲ್ಲಿ ಈ ಪ್ರೋಗ್ರಾಮಿಂಗ್ ಭಾಷೆಯ ಉಪಯೋಗವಾಗುತ್ತದೆ. ಹಾಗಾಗಿ, ಬಿಬಿಎ, ಬಿಕಾಂ ಸೇರಿದಂತೆ ಆಸಕ್ತಿಯಿರುವ ಎಲ್ಲಾ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನದ ಅಗತ್ಯಕ್ಕೆ ತಕ್ಕಂತೆ ರೆಗ್ಯುಲರ್/ಆನ್‌ಲೈನ್ ಮಾಧ್ಯಮದ ಮೂಲಕ ಎಸ್‌ಕ್ಯುಎಲ್ ಕಲಿಯಬಹುದು. ಎಸ್‌ಕ್ಯುಎಲ್ ವ್ಯಾಪಕವಾಗಿ ಬಳಸುವ ಪ್ರೋಗ್ರಾಮಿಂಗ್ ಭಾಷೆಯಾಗಿದ್ದು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಆಕರ್ಷಕ ಉದ್ಯೋಗಾವಕಾಶಗಳಿವೆ.

ಇಂದಿನ ಉದ್ಯಮ ಜಗತ್ತಿನಲ್ಲಿ ದತ್ತಾಂಶ (ಡೇಟಾ) ಅತ್ಯಂತ ಮಹತ್ವದ್ದಾಗಿದೆ. ಉದಾಹರಣೆಗೆ, ಕೃತಕ ಬುದ್ಧಿಮತ್ತೆಯ ವ್ಯಾಪಕವಾದ ಬಳಕೆಯ ಹಿಂದಿರುವ ಪ್ರಮುಖ ಸಂಪನ್ಮೂಲವೇ ದತ್ತಾಂಶ. ಈ ದತ್ತಾಂಶದ ಸಂಗ್ರಹಣೆ, ಸಂಘಟನೆ, ಗಣೆಗಾರಿಕೆ ಮತ್ತು ನಿರ್ವಹಣೆಗೆ ಎಸ್‌ಕ್ಯುಎಲ್ ಪ್ರಮುಖ ಪ್ರೋಗ್ರಾಮಿಂಗ್ ಭಾಷೆಯಾಗಿದೆ. ದತ್ತಾಂಶದ ಮಾಹಿತಿಯನ್ನು ಎಸ್‌ಕ್ಯುಎಲ್ ಡೇಟಾಬೇಸ್‌ನಲ್ಲಿ ಸಾಲುಗಳು ಮತ್ತು ಕಾಲಂಗಳ ಕೋಷ್ಟಕದಲ್ಲಿ (ಟೇಬಲ್ಸ್) ಸಂಗ್ರಹಿಸಲಾಗುತ್ತದೆ. ಉದ್ಯಮದ ಅಗತ್ಯಕ್ಕೆ ತಕ್ಕಂತೆ ದತ್ತಾಂಶ ಕುರಿತ ಪ್ರಶ್ನೆಗಳಿಗೆ ಎಸ್‌ಕ್ಯುಎಲ್ ಮೂಲಕ ಉತ್ತರಗಳನ್ನು ಪಡೆಯಬಹುದು.

ಕಲಿಯುವುದೆಲ್ಲಿ? ಹೇಗೆ?

ಎಸ್‌ಕ್ಯುಎಲ್ ಕಲಿಯಲು ಯಾವುದೇ ಪೂರ್ವಾಪೇಕ್ಷಿತ ಅರ್ಹತೆಗಳಿಲ್ಲ; ವಿಶೇಷವಾದ ಸಾಫ್ಟ್‌ವೇರ್ ಅಥವಾ ದುಬಾರಿ ಪುಸ್ತಕಗಳ ಅಗತ್ಯವಿಲ್ಲ. ಕಲಿಯುವ ಆಸಕ್ತಿ, ಇಂಟರ್‌ನೆಟ್ ಮತ್ತು ಕಂಪ್ಯೂಟರ್ ಇದ್ದರೆ ಸಾಕು. ರೆಗ್ಯುಲರ್/ಆನ್‌ಲೈನ್ ಮಾಧ್ಯಮದ ಮೂಲಕ ಸುಮಾರು 1 ರಿಂದ 3 ತಿಂಗಳುಗಳಲ್ಲಿ, ತಜ್ಞತೆಯ ಅಗತ್ಯಕ್ಕೆ ತಕ್ಕಂತೆ ಎಸ್‌ಕ್ಯುಎಲ್ ಕಲಿಯಬಹುದು. ಯುಡೆಮಿ, ಕೋರ್ಸೆರ, ಕೋಡ್‌ಅಕಾಡೆಮಿ, ಡೇಟಾಕ್ಯಾಂಪ್ ಮುಂತಾದ ಇನ್‌ಸ್ಟಿಟ್ಯೂಟ್‌ಗಳಲ್ಲಿ ಈ ಕೋರ್ಸ್ ಮಾಡಬಹುದು.

ಯಾವ ಕೌಶಲಗಳ ಅಗತ್ಯವಿರುತ್ತದೆ?

ಬಿಟೆಕ್, ಬಿ.ಎಸ್ಸಿ, ಬಿಸಿಎ, ಬಿಬಿಎ, ಬಿಕಾಂ, ಡಿಪ್ಲೊಮಾ, ಪಿಯುಸಿ ಸೇರಿದಂತೆ ಆಸಕ್ತಿಯಿರುವ ಎಲ್ಲಾ ಪದವೀಧರರು/ಪದವೀಧರರಲ್ಲದವರೂ ಸಹ ತಮ್ಮ ವೃತ್ತಿಜೀವನದ ಅಗತ್ಯಕ್ಕೆ ತಕ್ಕಂತೆ ಎಸ್‌ಕ್ಯುಎಲ್ ಕಲಿಯಬಹುದು. ಇಂಗ್ಲಿಷ್ ಭಾಷೆಯ ಪರಿಣತಿ ಸಾಧಾರಣ ಮಟ್ಟಕ್ಕಿದ್ದರೆ ಸಾಕು. ಆದರೆ, ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ಸಂವಹನ, ಸಂಖ್ಯಾಶಾಸ್ತ್ರದ ಅರಿವು, ಕ್ರಮಾವಳಿ ಮುಂತಾದ ಕೌಶಲಗಳಿರಬೇಕು ಅಥವಾ ಈ ಕೌಶಲಗಳನ್ನು ಬೆಳೆಸಿಕೊಳ್ಳಬೇಕು.

ಉದ್ಯೋಗಾವಕಾಶಗಳು ಹೇಗಿವೆ ?

ಎಸ್‌ಕ್ಯುಎಲ್ ವ್ಯಾಪಕವಾಗಿ ಬಳಸುವ ಪ್ರೋಗ್ರಾಮಿಂಗ್ ಭಾಷೆಯಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಗಳಾದ ಟಿಸಿಎಸ್(ಟಾಟಾ ಕನ್ಸಲ್ಟೆನ್ಸಿ), ಇನ್ಫೋಸಿಸ್, ಒರಾಕಲ್, ಎಚ್‌ಸಿಎಲ್, ವಿಪ್ರೊ, ಅಕ್ಸೆಂಚರ್ ಸೇರಿದಂತೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬಹುತೇಕ ಸಂಸ್ಥೆಗಳಲ್ಲಿ ಆಕರ್ಷಕ ಉದ್ಯೋಗಾವಕಾಶಗಳಿವೆ.

ಎಸ್‌ಕ್ಯುಎಲ್ ಜೊತೆಗೆ, ಪೈಥಾನ್, ಆರ್, ಜಾವ, ಸಿ + + ಮುಂತಾದ ಭಾಷೆಗಳನ್ನು ಕಲಿತರೆ ವೃತ್ತಿಪರ ಕೌಶಲಗಳ ವೃದ್ಧಿಯಾಗಿ ಉದ್ಯೋಗಾವಕಾಶಗಳು ಇನ್ನಷ್ಟು ಹೆಚ್ಚಾಗುತ್ತವೆ. ಆದರೆ, ಈ ಕೋರ್ಸ್ ಮೂಲಕ ಪಡೆದ ಜ್ಞಾನ ಮತ್ತು ಕೌಶಲಗಳನ್ನು ಪರಿಣಾಮಕಾರಿಯಾಗಿ ಬಳಸಲು ಹೆಚ್ಚಿನ ಸಮಯ ಬೇಕಾಗುತ್ತದೆ. ಜೊತೆಗೆ ಅದು ಯಾವ ರೀತಿ, ಯಾವ ಕಾರ್ಯ ಮತ್ತು ಸಂದರ್ಭದಲ್ಲಿ ಬಳಸುತ್ತೀರಾ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ.

ಈ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಪಡೆಯಬಹುದಾದ ಹುದ್ದೆಗಳೆಂದರೆ ಎಸ್‌ಕ್ಯುಎಲ್ ಡೆವಲಪರ್, ಡೇಟಾ ಸೈಂಟಿಸ್ಟ್, ಡೇಟಾ ಅನಲಿಸ್ಟ್, ಡೇಟಾ ಅಡ್ಮಿನಿಸ್ಟ್ರೇಟರ್, ಡೇಟಾ ಎಂಜಿನಿಯರ್, ಡೇಟಾಬೇಸ್ ಮ್ಯಾನೇಜರ್ ಇತ್ಯಾದಿ.

ವಿದ್ಯಾರ್ಥಿ ವೇತನ ಕೈಪಿಡಿ

ಎಲ್‌ಐಸಿ ವಿದ್ಯಾಧನ್ ಸ್ಕಾಲರ್‌ಷಿಪ್ 2023

- **ವಿವರ:** 11ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಅಧ್ಯಯನ ಮಾಡುತ್ತಿರುವ ಆರ್ಥಿಕ ದುರ್ಬಲ ಕುಟುಂಬಗಳ ವಿದ್ಯಾರ್ಥಿಗಳ ಬಲವರ್ಧನೆಗಾಗಿ ಎಲ್‌ಐಸಿ ಫೈನಾನ್ಸ್ ಲಿಮಿಟೆಡ್ ರೂಪಿಸಿರುವ ಯೋಜನೆ ಎಲ್‌ಐಸಿ ಎಚ್‌ಎಫ್‌ಎಲ್ ವಿದ್ಯಾಧನ್ ಸ್ಕಾಲರ್‌ಷಿಪ್.
- **ಅರ್ಹತೆ:** 2023–24 ಶೈಕ್ಷಣಿಕ ವರ್ಷದಲ್ಲಿ 11ನೇ ತರಗತಿ ಮತ್ತು ಮೊದಲ ಪದವಿ ಮತ್ತು ಮೊದಲ ವರ್ಷದ ಸ್ನಾತಕೋತ್ತರ ಪದವಿ ಪ್ರವೇಶಿಸಿರುವ ಭಾರತೀಯ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್ ಯೋಜನೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ತಮ್ಮ ಹಿಂದಿನ ವರ್ಷದ ತರಗತಿಯಲ್ಲಿ ಶೇ 60ಕ್ಕಿಂತ ಹೆಚ್ಚಿನ ಅಂಕಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲ ಮೂಲಗಳಿಂದ ₹3.60 ಲಕ್ಷ ಮೀರಬಾರದು.
- **ಆರ್ಥಿಕ ನೆರವು:** ವಾರ್ಷಿಕ ₹25 ಸಾವಿರವರೆಗೆ
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-09-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** www.b4s.in/praja/LHVC11

ರಮಣಕಾಂತ್ ಮುಂಜಲ್ ಸ್ಕಾಲರ್‌ಷಿಪ್ 2023

ಹೀರೊ ಫಿನ್‌ಕಾರ್ಪ್ ಬೆಂಬಲಿತ, ರಮಣಕಾಂತ್ ಮುಂಜಲ್ ಫೌಂಡೇಶನ್ ರೂಪಿಸಿರುವ ಕಾರ್ಯಕ್ರಮ ರಮಣಕಾಂತ್ ಮುಂಜಲ್ ಸ್ಕಾಲರ್‌ಶಿಪ್ 2023.

ಹಣಕಾಸು ಸಂಬಂಧಿತ ಕೋರ್ಸ್‌ಗಳನ್ನು ಕಲಿಯುವ ವಿದ್ಯಾರ್ಥಿಗಳಿಗೆ ಕಾಲೇಜು ಪ್ರವೇಶ ಮತ್ತು ಭವಿಷ್ಯದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳುವುದಕ್ಕಾಗಿ ಆರ್ಥಿಕ ನೆರವು ನೀಡುವುದಕ್ಕಾಗಿ ರೂಪಿಸಿರುವ ಸ್ಕಾಲರ್‌ಷಿಪ್ ಕಾರ್ಯಕ್ರಮವಿದು.


- **ಅರ್ಹತೆ:** ಬಿಬಿಎ, ಬಿಎಫ್‌ಐಎ, ಬಿ.ಕಾಂ(ಎಚ್,ಇ), ಬಿಎಂಎಸ್, ಐಪಿಎಂ, ಬಿಎ(ಎಕನಾಮಿಕ್ಸ್), ಬಿಬಿಎಸ್, ಬಿಬಿಐ, ಬಿಎಎಫ್ ಮತ್ತು ಬಿಎಸ್.ಸಿ (ಸ್ಟಾಟಿಸ್ಟಿಕ್ಸ್) ಅಥವಾ ಯಾವುದೇ ಇತರ ಹಣಕಾಸು ಸಂಬಂಧಿತ ಪದವಿ ಕೋರ್ಸ್‌ನ ಮೊದಲನೇ ವರ್ಷಕ್ಕೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು, ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಅರ್ಜಿದಾರರು 10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ ಕನಿಷ್ಠ ಶೇ 80 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 4 ಲಕ್ಷಕ್ಕಿಂತ ಕಡಿಮೆಯಿರಬೇಕು.

- **ಆರ್ಥಿಕ ನೆರವು:** 3 ವರ್ಷಗಳವರೆಗೆ ವರ್ಷಕ್ಕೆ ₹ 5ಲಕ್ಷದವರೆಗೆ ವಿದ್ಯಾರ್ಥಿವೇತನ
- **ಅರ್ಜಿ ಸಲ್ಲಿಕೆಗೆ ಕೊನೆ ದಿನ: 15-09-2023**
- **ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ.**
- **ಹೆಚ್ಚಿನ ಮಾಹಿತಿಗೆ:** www.b4s.in/praja/RMKSP1

ಕೃಪೆ: **buddy4study.com**

ಎಂಬಿಎ: ಯಾವ ವಿಷಯಕ್ಕೆ ಬೇಡಿಕೆ ಹೆಚ್ಚು?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಬಿಕಾಂ ಪದವಿ ಮುಗಿಸಿದ್ದು, ಮುಂದೆ ಎಂಬಿಎ ಮಾಡಬೇಕೆಂದುಕೊಂಡಿದ್ದೇನೆ. ಎಂಬಿಎ ಕೋರ್ಸ್‌ನಲ್ಲಿ ಯಾವ ವಿಷಯಗಳನ್ನು ಆಯ್ಕೆ ಮಾಡಬೇಕು? ಆ ವಿಷಯಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಕೊಡಿ.

ಹೆಸರು, ಊರು ತಿಳಿಸಿಲ್ಲ.

ಉದ್ಯಮಗಳ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್ ಸಿದ್ಧಾಂತದ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮಗ್ರವಾದ ಜ್ಞಾನ ಮತ್ತು ಕೌಶಲಗಳನ್ನು ಎಂಬಿಎ ಕೋರ್ಸ್‌ನಲ್ಲಿ ನೀಡಲಾಗುತ್ತದೆ. ಹಾಗಾಗಿ, ಈ ಕೋರ್ಸ್‌ನಲ್ಲಿ ಮಾರ್ಕೆಟಿಂಗ್, ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು, ಲಾಜಿಸ್ಟಿಕ್ಸ್, ಬಿಸಿನೆಸ್ ಅನಾಲಿಟಿಕ್ಸ್, ಉತ್ಪಾದನೆ, ಇಂಟರ್‌ನ್ಯಾಷನಲ್ ಬಿಸಿನೆಸ್ ಮುಂತಾದ ಸ್ಪೆಷಲೈಸೇಷನ್‌ಗಳಿದ್ದು ನಿಮ್ಮ ವೃತ್ತಿಯೋಜನೆಯಂತೆ ಆಯ್ಕೆ ಮಾಡಿಕೊಳ್ಳಬಹುದು.

ಮ್ಯಾನೇಜ್‌ಮೆಂಟ್ ತತ್ವ ಮತ್ತು ಸಿದ್ಧಾಂತಗಳು, ಕಾನೂನು, ಸಂಖ್ಯಾಶಾಸ್ತ್ರ, ಮಾನವ ಸಂಪನ್ಮೂಲ, ಅರ್ಥಶಾಸ್ತ್ರ, ಮಾರ್ಕೆಟಿಂಗ್ ನಿರ್ವಹಣೆ, ಬಿಸಿನೆಸ್ ಸಂವಹನ ಇತ್ಯಾದಿ ವಿಷಯಗಳು ಎಲ್ಲಾ ಸ್ಪೆಷಲೈಸೇಷನ್ ವಿದ್ಯಾರ್ಥಿಗಳಿಗೂ ಇರುತ್ತದೆ. ಎಂಬಿಎ. ಕೋರ್ಸ್‌ನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲಭೂತ ತತ್ವಗಳ, ಮೌಲ್ಯಗಳ ಮನದಟ್ಟಾಗುತ್ತದೆ. ಇವುಗಳ ಆಧಾರದ ಮೇಲೆ, ನೀವು ವೃತ್ತಿ ಮತ್ತು ಖಾಸಗೀ ಜೀವನಗಳೆರಡರಲ್ಲೂ ಯಶಸ್ಸು ಸಾಧಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ, ಈ ವಿಡಿಯೊ ವೀಕ್ಷಿಸಿ: https://www.youtube.com/watch?v=WHZTFCmu3zg

2. ನಾನು ಡಿಪ್ಲೊಮಾ (ಮೆಕ್ಯಾನಿಕಲ್) ಮಾಡಿದ್ದೇನೆ. ನನಗೆ ಪೊಲೀಸ್ ಕಾನ್‌ಸ್ಟೆಬಲ್ ಆಗುವ ಆಸೆಯಿದೆ. ಖಾಸಗಿ ಕಾಲೇಜಿನಲ್ಲಿ ಓದಿರುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದು ಕಷ್ಟವಾಗುತ್ತದೆ. ಆದರೆ, ಮನೆಯವರು ಬಿ.ಟೆಕ್ ಮಾಡು ಎನ್ನುತ್ತಿದ್ದಾರೆ. ದಯವಿಟ್ಟು ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.


ವೃತ್ತಿ ನಿರ್ಧರಿಸುವುದು ಸುಲಭವಲ್ಲ; ಆಸಕ್ತಿ, ಅಭಿರುಚಿ ಮತ್ತು ಸಾಮರ್ಥ್ಯ ಅರಿತು, ವ್ಯವಸ್ಥಿತವಾಗಿ ನಡೆಯಬೇಕಾದ ವಿಶ್ಲೇಷಣಾತ್ಮಕ ಪ್ರಕ್ರಿಯೆ. ಪೊಲೀಸ್ ಇಲಾಖೆಯಲ್ಲಿ ವೃತ್ತಿಯನ್ನು ರೂಪಿಸಿಕೊಳ್ಳುವ ಧ್ಯೇಯದ ಹಿಂದೆ ಬಲವಾದ ಕಾರಣಗಳಿರಬೇಕು; ಈ ವೃತ್ತಿ ಸಂತೃಪ್ತಿಯನ್ನು ನೀಡಬಹುದು ಎಂದು ಖಾತ್ರಿಯಾಗಬೇಕು. ಯೋಜನಾ ಶಕ್ತಿ, ಏಕಾಗ್ರತೆ, ಪರಿಶ್ರಮ, ಸಮಯದ ನಿರ್ವಹಣೆ ಮತ್ತು ನಿರಂತರ ಅಭ್ಯಾಸವಿದ್ದರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸನ್ನು ಸಾಧಿಸಬಹುದು. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಕೆಡಿಪಿ, ಆಶ್ರಯ ಸಮಿತಿಗೆ ಯತೀಂದ್ರ ನೇಮಕ

ಪ್ರಜಾವಾಣಿ ವಾರ್ತೆ



ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ, ಕಾಂಗ್ರೆಸ್ ಮುಖಂಡ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಜಿಲ್ಲಾ ಸಮಿತಿ ಸದಸ್ಯ ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ.

ಈ ವಿಷಯವನ್ನು ಭಾನುವಾರ ಯತೀಂದ್ರ ಅವರೇ ಪತ್ರಕರ್ತರಿಗೆ ತಿಳಿಸಿದ್ದಾರೆ. 'ವರುಣ ಕ್ಷೇತ್ರದ ಜನರ ಸಮಸ್ಯೆ ಆಲಿಸುತ್ತೇನೆ. ನೇಮಕದ ಬಗ್ಗೆ ಕೆಲವು ದಿನಗಳ ಹಿಂದೆಯೇ ಆದೇಶವಾಗಿದೆ' ಎಂದು ಹೇಳಿದ್ದಾರೆ.

ದಾರ್ಶನಿಕರ ಹಾದಿಯಲ್ಲಿ ನಾಡನ್ನು ಮುನ್ನಡೆಸಿಕೊಂಡು ಹೋಗುವುದಾಗಿ ಸಿ.ಎಂ ಭರವಸೆ

ಸರ್ಕಾರಕ್ಕೆ ಶತದಿನದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸರ್ಕಾರದ ಅಧಿಕಾರಕ್ಕೆ 100 ದಿನಗಳು ಪೂರೈಸಿವೆ. ಜನರು ನೀಡಿರುವ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು, ಅವರ ನಿರೀಕ್ಷೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ತಮ್ಮ ಫೇಸ್‌ಬುಕ್ ಖಾತೆಯಲ್ಲಿ 'ಶತಕ ಸಂಭ್ರಮ' ಹ್ಯಾಶ್ ಟ್ಯಾಗ್‌ನಡಿ ಭಾನುವಾರ ಬರೆದುಕೊಂಡಿರುವ ಮುಖ್ಯಮಂತ್ರಿ, 'ಗ್ಯಾರಂಟಿ ಮತ್ತು ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಜೊತೆ ಜೊತೆಗೆ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು, ಕನಕದಾಸರು, ನಾರಾಯಣ ಗುರು ಮುಂತಾದ ದಾರ್ಶನಿಕರು ತೋರಿದ ಸಮಾನತೆಯ ಹಾದಿಯಲ್ಲಿ ನಾಡನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದೇವೆ. ಸರ್ಕಾರದ ಕಾರ್ಯಕ್ರಮಗಳ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪಬೇಕೆಂಬ ಆಶಯದೊಂದಿಗೆ ಆರಂಭಿಸಿರುವ ನಮ್ಮ ಪಯಣಕ್ಕೀಗ ಶತಕ ಸಂಭ್ರಮ' ಎಂದಿದ್ದಾರೆ.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾಡಿನ ಮತದಾರರು ನಮ್ಮ ಮೇಲೆ ನಂಬಿಕೆ ಮತ್ತು ಭರವಸೆಯನ್ನು ಇಟ್ಟು 135 ಸ್ಥಾನಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಪೂರ್ಣ ಬಹುಮತದ ಸುಭದ್ರ ಸರ್ಕಾರ ರಚನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ' ಎಂದೂ ಹೇಳಿಕೊಂಡಿದ್ದಾರೆ.



ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ

ನಮ್ಮ ಕೆಲಸ ಕಣ್ಣಿಗೆ ಕಾಣುತ್ತಿದೆ– ಡಿಕೆಶಿ

'ಸರ್ಕಾರದ ನೂರು ದಿನಗಳ ಕೆಲಸ ರಾಜ್ಯದ ಜನರ ಕಣ್ಣಿಗೆ ಕಾಣುತ್ತಿದೆ. ನಮ್ಮ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ, ಶತಕ ಬಾರಿಸಿ ಮುನ್ನುಗ್ಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂತಸ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರಕ್ಕೆ ನೂರು ದಿನ ಪೂರ್ಣಗೊಂಡಿರುವ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಈ ನೂರು ದಿನಗಳ ಅವಧಿಯಲ್ಲಿ 1.36 ಕೋಟಿ ಜನರಿಗೆ ಉಚಿತ ಅಕ್ಕಿ ತಲುಪುತ್ತಿದೆ. 'ಶಕ್ತಿ' ಯೋಜನೆಯಡಿ ಮಹಿಳೆಯರು ಉಚಿತ ಬಸ್ ಪ್ರಯಾಣ ಮಾಡುತ್ತಿದ್ದಾರೆ. 1.41 ಕೋಟಿ ಗ್ರಾಹಕರಿಗೆ 200 ಯೂನಿಟ್‌ವರೆಗೂ ಉಚಿತ ವಿದ್ಯುತ್ ಸಿಗುತ್ತಿದೆ. ಇದೇ 30ರಂದು ಗೃಹಲಕ್ಷ್ಮಿ ಯೋಜನೆಯಡಿ 1.10 ಕೋಟಿ ಮನೆ ಯಜಮಾನಿಯರಿಗೆ ಪ್ರತಿ ತಿಂಗಳು ₹ 2 ಸಾವಿರ ತಲುಪಲಿದೆ. ಡಿಸೆಂಬರ್ ವೇಳೆಗೆ ಯುವನಿಧಿ ಜಾರಿ ಮಾಡುತ್ತೇವೆ' ಎಂದು ಹೇಳಿದರು.

ಮಳೆ: ಹದಿನಾಲ್ಕು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಸೋಮವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಬೆಂಗಳೂರು ನಗರ ಸೇರಿ 14 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಕೊಡಗು, ಮೈಸೂರು, ಚಾಮರಾಜನಗರ, ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಮುಂದಿನ 3 ದಿನ ದಕ್ಷಿಣ ಒಳನಾಡಿನಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ ಇದೆ. ಕರಾವಳಿಯ ಜಿಲ್ಲೆಗಳಲ್ಲಿ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನಲ್ಲಿ ಒಣಹವೆ ಇರಲಿದೆ. ಭಾನುವಾರ ಬೆಳಿಗ್ಗೆ 8.30ಕ್ಕೆ ಅಂತ್ಯಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದ ಕೆಲವೆಡೆ ಮಳೆಯಾಗಿದೆ. ರಾಯಚೂರಿನ ಸಿಂಧನೂರಿನಲ್ಲಿ ಗರಿಷ್ಠ (5 ಸೆಂ.ಮೀ) ಮಳೆಯಾಗಿದೆ ಎಂದು ಇಲಾಖೆ ತಿಳಿಸಿದೆ.

ಪ್ರೌಢಶಾಲಾ ಶಿಕ್ಷಕರಿಗೆ ಇಲ್ಲ ಪರೀಕ್ಷೆ ಹೊಣೆ

ಒಂದನೇ ಪುಟದಿಂದ...

ಫಲಿತಾಂಶ ಹೆಚ್ಚಳದ ಒತ್ತಡವೇ ನಕಲಿಗೆ ಕಾರಣ: ಪ್ರತಿ ಜಿಲ್ಲೆಗಳು ಅಧಿಕ ಫಲಿತಾಂಶ ಪಡೆಯಬೇಕು. ಜಿಲ್ಲಾವಾರು ಫಲಿತಾಂಶದ ಪಟ್ಟಿಯಲ್ಲಿ ಮೇಲ್ಪಂಕ್ತಿಯಲ್ಲಿ ಇರಬೇಕು ಎಂದು ಪ್ರತಿ ಬಾರಿಯೂ ಗುರಿ ನಿಗದಿ ಮಾಡಲಾಗುತ್ತಿದೆ. ಕಡಿಮೆ ಫಲಿತಾಂಶ ಬಂದ ಶಾಲೆಗಳ ಶಿಕ್ಷಕರು, ಮುಖ್ಯ ಶಿಕ್ಷಕರ ವಿರುದ್ಧ ತೆಗೆದುಕೊಳ್ಳುತ್ತಿದ್ದ ಕ್ರಮಗಳು ನಕಲು ಹೆಚ್ಚಲು ಕಾರಣ ಎನ್ನುವುದು ವರದಿಯಲ್ಲಿ ಬಹಿರಂಗವಾಗಿದೆ. ಹಾಗಾಗಿ, ಫಲಿತಾಂಶ ವೃದ್ಧಿಗೆ ಒತ್ತಡ ಹಾಕದೇ ಉತ್ತಮ ಫಲಿತಾಂಶ ಪಡೆಯಲು ಅನುಕೂಲವಾದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯ, ಪೋಷಕರು, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವತ್ತ ಗಮನ ಹರಿಸಲು ಸೂಚಿಸಲಾಗಿದೆ.

ಪರೀಕ್ಷಾ ಕೇಂದ್ರದ ಮೇಲೆ ಡ್ರೋನ್ ಕಣ್ಗಾವಲು: ನಕಲು ತಡೆಯಲು ಇದುವರೆಗೂ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುತ್ತಿತ್ತು. ಬಹುತೇಕ ಶಾಲೆಗಳಲ್ಲಿ ವಿದ್ಯುತ್ ವ್ಯತ್ಯಯ, ತಾಂತ್ರಿಕ ಸಮಸ್ಯೆಗಳಿಂದ ಅವುಗಳ ಕಾರ್ಯನಿರ್ವಹಣೆ ಸುಸ್ಥಿತಿಯಲ್ಲಿಲ್ಲ ಎಂಬ ಸಬೂಬು ನೀಡಲಾಗುತ್ತಿತ್ತು. ಇದು ನಕಲು ಕಾರ್ಯಕ್ಕೆ ದಾರಿ ಮಾಡಿಕೊಟ್ಟಿತ್ತು. ಸಿಸಿಟಿವಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿಡುವ ಹೊಣೆಗಾರಿಕೆಯನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು (ಡಿಡಿಪಿಐ), ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ನಿರ್ವಹಿಸಬೇಕು. ಪ್ರತಿ ಪರೀಕ್ಷಾ ಕೇಂದ್ರಗಳ ಮೇಲೆ ಡ್ರೋನ್ ಕಣ್ಗಾವಲು ಇಡಬೇಕು. ಪರೀಕ್ಷೆ ಆರಂಭವಾದ ದಿನದಿಂದ ಮುಗಿಯುವವರೆಗೆ ಸ್ಥಳೀಯವಾಗಿ ಬಾಡಿಗೆಗೆ ಪಡೆಯಬೇಕು ಎಂದು ನಿಯಮ ರೂಪಿಸಲಾಗಿದೆ.

ವಿಚಕ್ಷಣ ದಳದಲ್ಲಿ ಗ್ರಾಮಲೆಕ್ಕಿಗರು, ಪಿಡಿಒ

ಪರೀಕ್ಷಾ ಸಮಯದಲ್ಲಿ ವಿವಿಧ ಕೇಂದ್ರಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲಿಸಲು ರಚಿಸಲಾಗುವ ವಿಚಕ್ಷಣ ದಳದಲ್ಲಿ ಪ್ರಾಥಮಿಕ, ಪ್ರೌಢಶಾಲಾ ವಿಭಾಗದ ಶಿಕ್ಷಕರನ್ನು ಬಳಸಿಕೊಳ್ಳದಿರಲು ಪರೀಕ್ಷಾ ಮಂಡಳಿ ನಿರ್ಧರಿಸಿದೆ.

ಗ್ರಾಮಲೆಕ್ಕಿಗ, ಪಿಡಿಒ ಹಾಗೂ ಇತರೆ ಅಧಿಕಾರಿಗಳನ್ನು ಒಳಗೊಂಡ ಜಾಗೃತ ದಳ ರಚಿಸಲಾಗುವುದು. ಇದರಿಂದ ಪಕ್ಷಪಾತವಿಲ್ಲದ, ಆತ್ಮಸಾಕ್ಷಿಗೆ ಅನುಸಾರವಾಗಿ ಪರೀಕ್ಷೆಗಳನ್ನು ನಡೆಸಲು ಸಹಕಾರಿಯಾಗಲಿದೆ ಎನ್ನುವುದು ಮಂಡಳಿಯ ವಿವರಣೆ.

ಆಧುನಿಕ ತಂತ್ರಜ್ಞಾನ ಬಳಸಿಕೊಂಡು ವಿದ್ಯಾರ್ಥಿಗಳು ನಕಲು ಮಾಡುವುದನ್ನು ತಡೆಯಲು 'ಸೈಬರ್ ಕ್ರೈಂ' ಪೊಲೀಸ್ ತಂಡದ ನೆರವು ಪಡೆಯಲು ಸಹ ನಿರ್ಧರಿಸಲಾಗಿದೆ.

ವಿಧಾನ ಪರಿಷತ್ ಚುನಾವಣೆ: ಬಿಜೆಪಿ ಉಸ್ತುವಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಪದವೀಧರರ ಮತ್ತು ಶಿಕ್ಷಕರ ಐದು ಕ್ಷೇತ್ರಗಳಿಗೆ 2024ರ ಜೂನ್‌ನಲ್ಲಿ ನಡೆಯುವ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ಬಿಜೆಪಿ, ಪ್ರತಿ ಕ್ಷೇತ್ರಕ್ಕೂ ಒಬ್ಬ ಉಸ್ತುವಾರಿಯನ್ನು ನೇಮಿಸಿದೆ.

ನೈರುತ್ಯ ಪದವೀಧರ ಮತ್ತು ನೈರುತ್ಯ ಶಿಕ್ಷಕರ ಎರಡೂ ಕ್ಷೇತ್ರಗಳಿಗೆ ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರನ್ನು ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ.

ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಮಾಜಿ ಸಚಿವ ಬಿ. ಶ್ರೀರಾಮುಲು, ಬೆಂಗಳೂರು ಪದವೀಧರ ಕ್ಷೇತ್ರಕ್ಕೆ ಮಾಜಿ ಸಚಿವ ಆರ್. ಅಶೋಕ, ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಸಂಸದ ಡಿ.ವಿ. ಸದಾನಂದ ಗೌಡ, ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಮತ್ತು ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರನ್ನು ಉಸ್ತುವಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಸುದ್ದಿ ಹರಡುವವರನ್ನು ನಿಯಂತ್ರಿಸಲು ಗೃಹ ಇಲಾಖೆ, ಐಟಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿ ಮಾಡಿ ಚರ್ಚಿಸಿದ ಬಳಿಕ ಮಾತನಾಡಿದ ಶಿವಕುಮಾರ್, 'ಸುಳ್ಳು ಸುದ್ದಿಯಿಂದ ಕೋಮು ಗಲಭೆ, ಗದ್ದಲ, ಗೌರವಕ್ಕೆ ಧಕ್ಕೆ ತರುವ ಪ್ರಯತ್ನ ನಡೆಯುತ್ತಿದೆ. ಹೀಗಾಗಿ ಅವುಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಎನ್‌ಆರ್‌ಐ ವಿಚಾರ, ಬೆಂಗಳೂರಿನಲ್ಲಿ ಉಚಿತ ವೈ-ಫೈ ವಲಯ ನಿರ್ಮಾಣ ಸಂಬಂಧ ಸಭೆ ನಡೆಸಲು ಉದ್ದೇಶಿಸಿದ್ದು, ದಿನಾಂಕ ಸದ್ಯದಲ್ಲೇ ಪ್ರಕಟಿಸುತ್ತೇವೆ' ಎಂದೂ ತಿಳಿಸಿದರು.

ಸಿ.ಎಂ ಅನುಮೋದನೆಗೂ ಮೊದಲೇ ಪಿಡಿಒ ವರ್ಗಾವಣೆ ಪಟ್ಟಿ ಸೋರಿಕೆ

ಕಡತ ಬಹಿರಂಗಪಡಿಸಿದವರ ಪತ್ತೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆ ಪಟ್ಟಿಯನ್ನು ಮುಖ್ಯಮಂತ್ರಿಯವರ ಅನುಮೋದನೆಗೂ ಮೊದಲೇ ಸೋರಿಕೆ ಮಾಡಿರುವವರು ಯಾರು? ಎಂಬ ಅನುಮಾನ ಹುಟ್ಟಿಕೊಂಡಿದೆ. ಈಗಲೂ 'ಇ-ಆಫೀಸ್'ನಲ್ಲೇ ಬಾಕಿ ಇರುವ ಕಡತವನ್ನು ಬಹಿರಂಗಪಡಿಸಿದವರ ಪತ್ತೆಗೆ ಪ್ರಯತ್ನ ಆರಂಭವಾಗಿದೆ.

ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ಬಳಿಕ ಶಾಸಕರ ಕೋರಿಕೆಯೂ ಸೇರಿದಂತೆ ವಿವಿಧ ಕಾರಣಗಳಿಗಾಗಿ 800ಕ್ಕೂ ಹೆಚ್ಚು ಪಿಡಿಒಗಳ ವರ್ಗಾವಣೆಗೆ ಅನುಮೋದನೆ ಕೋರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವ ಸಲ್ಲಿಸಿದ್ದಾರೆ. ಈ ರೀತಿ ಸಲ್ಲಿಕೆಯಾಗಿರುವ ಬಹುತೇಕ ವರ್ಗಾವಣೆ ಪಟ್ಟಿಗಳು ಸೋರಿಕೆಯಾಗಿವೆ.

ಪಂಚಾಯತ್ ರಾಜ್ ಆಯುಕ್ತಾಲಯದ ಆಡಳಿತ ವಿಭಾಗದ ಉಪ ನಿರ್ದೇಶಕಿ ಭಾಗ್ಯಶ್ರೀ ಎಚ್.ಎಸ್. ಅವರು ಇ-ಆಫೀಸ್ ತಂತ್ರಾಂಶದಲ್ಲಿ ಪಿಡಿಒಗಳ ವರ್ಗಾವಣೆ ಪಟ್ಟಿಯ ಕಡತಗಳನ್ನು ತೆರೆದಿದ್ದರು. ಈ ಕಡತಗಳು ಆಡಳಿತ ವಿಭಾಗದ ಇಬ್ಬರು ನಿರ್ದೇಶಕರು, ಪಂಚಾಯತ್ ರಾಜ್ ಆಯುಕ್ತರು, ಪ್ರಧಾನ ಕಾರ್ಯದರ್ಶಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಕಚೇರಿಗಳನ್ನು ಹಾದು ಮುಖ್ಯಮಂತ್ರಿಯವರ ಕಚೇರಿಗೆ ತಲುಪಿವೆ. ಮುಖ್ಯಮಂತ್ರಿಯವರ ಕಾರ್ಯದರ್ಶಿ ಎಸ್. ಜಯರಾಂ ಅವರ ಬಳಿ ಈ ಕಡತಗಳು ಬಾಕಿ ಇವೆ.

ಪಿಡಿಒಗಳ ವಿಚಾರಣೆಗೆ ಸಿದ್ಧತೆ

ಕಂಪ್ಯೂಟರ್ ಹ್ಯಾಕ್ ಮಾಡಿ ಸೋರಿಕೆ ಮಾಡಿದ ವರ್ಗಾವಣೆ ಪಟ್ಟಿಗಳನ್ನು '2013ರ ಬ್ಯಾಚ್‌ನ ಪಿಡಿಒ ಸ್ಟೇಟ್ ಯೂನಿಯನ್' ಎಂಬ ಗುಂಪಿನಲ್ಲಿ ನಿವಿತ್ ನಿಹಾಲ್ ಮತ್ತು ಎಸ್.ಎ. ಮಂಕಾನಿ ಎಂಬುವವರು ಹಂಚಿಕೊಂಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಇಬ್ಬರೂ ಪಿಡಿಒಗಳ ವಿಚಾರಣೆಗೆ ಕೇಂದ್ರ ವಿಭಾಗದ ಸೈಬರ್ ಅಪರಾಧ ಠಾಣೆ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ವಿಚಾರಣೆಗೆ ಹಾಜರಾಗುವಂತೆ ಆರೋಪಿತ ಪಿಡಿಒಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಸೋಮವಾರ ಇಬ್ಬರೂ ಹಾಜರಾಗುವ ಸಾಧ್ಯತೆ ಇದೆ. ಯಾವ ಮೂಲದಿಂದ ವರ್ಗಾವಣೆ ಪಟ್ಟಿಗಳು ಲಭ್ಯವಾದವು ಎಂಬ ಪ್ರಶ್ನೆಗೆ ಅವರಿಂದ ಉತ್ತರ ಪಡೆದ ಬಳಿಕ ತನಿಖೆಯ ಮುಂದಿನ ಹಂತ ನಿರ್ಧಾರವಾಗಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಡಿಒಗಳ ವರ್ಗಾವಣೆ ಪಟ್ಟಿಗಳು ಸೋರಿಕೆಯಾಗಿ ಅಧಿಕಾರಿಗಳ ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಹಲವು ದಿನಗಳಿಂದ ಹರಿದಾಡುತ್ತಿವೆ. ಈ ಪಟ್ಟಿಗಳನ್ನೇ ಬಳಸಿಕೊಂಡು 'ವರ್ಗಾವಣೆ ವ್ಯವಹಾರ' ಕುದುರಿಸುವ ಪ್ರಯತ್ನಗಳು ನಡೆದಿರುವ ಆರೋಪವೂ ಇದೆ. ಕಡತ ಆರಂಭಿಸಿರುವ ಭಾಗ್ಯಶ್ರೀ ಸಲ್ಲಿಸಿರುವ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಿರುವ, ಬೆಂಗಳೂರು ಕೇಂದ್ರ ವಿಭಾಗದ ಸೈಬರ್ ಅಪರಾಧ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸಿ.ಎಂ ಕಚೇರಿಯಿಂದಲೂ ಪರಿಶೀಲನೆ: 'ಪಂಚಾಯತ್ ರಾಜ್ ಆಯುಕ್ತಾಲಯದ ಕಂಪ್ಯೂಟರ್‌ಗಳನ್ನು ಹ್ಯಾಕ್ ಮಾಡಿರುವ ದುಷ್ಕರ್ಮಿಗಳು ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಿರುವ ಕಡತಗಳನ್ನು ಸೋರಿಕೆ ಮಾಡಿದ್ದಾರೆ' ಎಂಬ ಆರೋಪ ದೂರಿನಲ್ಲಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿಯವರ ಸಚಿವಾಲಯ, 'ಇ-ಆಫೀಸ್' ತಂತ್ರಾಂಶದಲ್ಲಿರುವ ಕಡತ ಸೋರಿಕೆಯಾಗಿರುವ ಕುರಿತು ಉನ್ನತಮಟ್ಟದ ಪರಿಶೀಲನೆಗೆ ಮುಂದಾಗಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಹ್ಯಾಕರ್‌ಗಳು ಪಂಚಾಯತ್ ರಾಜ್ ಆಯುಕ್ತಾಲಯದ ಕಂಪ್ಯೂಟರ್‌ಗಳನ್ನು ಹ್ಯಾಕ್ ಮಾಡಿದ್ದರೆ ವರ್ಗಾವಣೆ ಪಟ್ಟಿಗಳನ್ನು ಮಾತ್ರ ಏಕೆ ಸೋರಿಕೆ ಮಾಡುತ್ತಿದ್ದರು ಎಂಬ ಪ್ರಶ್ನೆ ಉದ್ಭವಿಸಿದೆ. ಇತರ ಕಡತಗಳ ಕುರಿತು ದೂರಿನಲ್ಲಿ ಪ್ರಸ್ತಾಪವಿಲ್ಲ. ಈ ಕಡತಗಳನ್ನು ನಿರ್ವಹಿಸಿದವರ ಲಾಗ್‌ಇನ್‌ನಿಂದ 'ಇ-ಆಫೀಸ್' ಪ್ರವೇಶಿಸಿದವರು ಮಾತ್ರ ಅವುಗಳನ್ನು ಪಡೆಯಲು ಸಾಧ್ಯ. ಕಂಪ್ಯೂಟರ್‌ಗಳ ಹ್ಯಾಕಿಂಗ್ ನಡೆದಿದೆಯೆ ಎಂಬುದು ತನಿಖೆಯ ಬಳಿಕವಷ್ಟೇ ಸ್ಪಷ್ಟವಾಗಲಿದೆ' ಎಂದು ಮೂಲಗಳು ಹೇಳಿವೆ.

ಫ್ಯಾಕ್ಟ್ ಚೆಕ್: ರಾಜ್ಯ ಸರ್ಕಾರದ ಕ್ರಮಕ್ಕೆ ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವ ಸುಳ್ಳು ಸುದ್ದಿಗಳ ಮೇಲೆ ನಿಗಾ ಇಡಲು 'ಫ್ಯಾಕ್ಟ್ ಚೆಕಿಂಗ್ ಘಟಕ' ಸ್ಥಾಪಿಸುವ ಕರ್ನಾಟಕ ಸರ್ಕಾರದ ನಡೆಗೆ ಭಾರತೀಯ ಸಂಪಾದಕರ ಒಕ್ಕೂಟ (ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ) ಭಾನುವಾರ ಕಳವಳ ವ್ಯಕ್ತಪಡಿಸಿದೆ.

'ಕರ್ನಾಟಕ ಸರ್ಕಾರದ ಇಂಥ ಕ್ರಮವು ಭಿನ್ನ ಧ್ವನಿಗಳನ್ನು ಹತ್ತಿಕ್ಕುವುದಕ್ಕೆ ಕಾರಣವಾಗಲಿದೆ' ಎಂದು ಒಕ್ಕೂಟದ ಅಧ್ಯಕ್ಷೆ ಸೀಮಾ ಮುಸ್ತಫಾ, ಪ್ರಧಾನ ಕಾರ್ಯದರ್ಶಿ ಅನಂತನಾಥ್ ಹಾಗೂ ಖಜಾಂಚಿ ಶ್ರೀರಾಮ್ ಪವಾರ್ ಹೇಳಿದ್ದಾರೆ.

'ಈ ಉದ್ದೇಶಿತ ಫ್ಯಾಕ್ಟ್ ಚೆಕಿಂಗ್ ಘಟಕದ ವ್ಯಾಪ್ತಿ ಮತ್ತು ಅಧಿಕಾರಗಳು ಹಾಗೂ ಈ ಘಟಕ ಯಾವ ವಿಧಾನದಡಿ ಕಾರ್ಯ ನಿರ್ವಹಿಸಲಿದೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಅವರು ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗಳನ್ನು ಉಲ್ಲೇಖಿಸಿರುವ ಅವರು, 'ಈ ಘಟಕಕ್ಕೆ ಸಂಬಂಧಿಸಿದ ಚೌಕಟ್ಟು ರಚನೆಗೂ ಮುನ್ನ ಪತ್ರಿಕಾ ಸಂಘಟನೆಗಳೊಂದಿಗೆ ವ್ಯಾಪಕ ಸಮಾಲೋಚನೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.



ಭಾನುವಾರ ಯುವತಿ ಶವ ಹೊರ ತೆಗೆದು ಪೊಲೀಸರ ಬಂದೋಬಸ್ತಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು

ಕೋಲಾರ: ಮರ್ಯಾದೆಗೇಡು ಹತ್ಯೆ

ಒಂದನೇ ಪುಟದಿಂದ...

ನಡೆದದ್ದು ಏನು?: ಕೋಲಾರ ಬಳಿಯ ನರಸಾಪುರ ಕೈಗಾರಿಕಾ ಪ್ರದೇಶದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ರಮ್ಯಾ, ವಯಸ್ಸಿನಲ್ಲಿ ತನಗಿಂತ ಕಿರಿಯನಾದ ಪಕ್ಕದ ಗ್ರಾಮದ ನಾಯಕ ಸಮುದಾಯದ ಬಾಲಕನನ್ನು ಪ್ರೀತಿಸುತ್ತಿದ್ದಳು. ಇವರಿಬ್ಬರ ಪ್ರೀತಿ ವಿಷಯ ಎರಡೂ ಕುಟುಂಬಗಳಿಗೆ ಗೊತ್ತಿತ್ತು. ಎರಡೂ ಕುಟುಂಬಗಳ ನಡುವೆ ರಾಜಿ ಪಂಚಾಯಿತಿಗಳೂ ನಡೆದಿದ್ದವು. ಈ ಬಗ್ಗೆ ತಂದೆ ಹಾಗೂ ಮಗಳ ನಡುವೆ ಅನೇಕ ಬಾರಿ ಜಗಳ ನಡೆದಿದ್ದವು.

'ಬುದ್ಧಿವಾದಕ್ಕೆ ಕಿವಿಗೊಡದ ಮಗಳನ್ನು ವೆಂಕಟೇಶಗೌಡ ಆಗಸ್ಟ್ 25ರಂದು ರಾತ್ರಿ ಉಸಿರುಗಟ್ಟಿಸಿ ಸಾಯಿಸಿದ್ದಾರೆ. ನಂತರ ತನ್ನ ತಮ್ಮಂದಿರಾದ ಮೋಹನ್ ಹಾಗೂ ಚೌಡೇಗೌಡರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾನೆ. ಅಣ್ಣ, ತಮ್ಮಂದಿರೆಲ್ಲ ಸೇರಿ ತೋಟದಲ್ಲಿ ಅಂತ್ಯಕ್ರಿಯೆ ಮುಗಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ವರಮಹಾಲಕ್ಷ್ಮಿ ಹಬ್ಬದ ದಿನ ಮುಂಜಾನೆ ಹೊತ್ತಿಗೆ ಮಗಳು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ವೆಂಕಟೇಶಗೌಡ ಬಿಂಬಿಸಿದ್ದ. ಆದರೆ, ಇದು ಆತ್ಮಹತ್ಯೆ ಅಲ್ಲ, ಕೊಲೆ ಎಂಬ ವಿಚಾರ ಊರಿನಲ್ಲಿ ಹಬ್ಬಿತ್ತು. ಈ ವಿಷಯ ಪೊಲೀಸರನ್ನೂ ತಲುಪಿತ್ತು. ಪೊಲೀಸರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಭಾನುವಾರ ಬೆಳಿಗ್ಗೆ ಪೊಲೀಸ್ ಬಂದೋಬಸ್ತಿನಲ್ಲಿ ಯುವತಿಯ ಶವ ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಕೋಲಾರ ತಹಶೀಲ್ದಾರ್ ಹರ್ಷವರ್ಧನ್ ಮತ್ತು ಗ್ರಾಮಾಂತರ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ಲೋಕೇಶ್ ಸ್ಥಳದಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ರೈಲು ದುರಂತ ತನಿಖೆ ಶುರು: ತಿಂಗಳಲ್ಲಿ ವರದಿ ಸಲ್ಲಿಕೆ

ಚೆನ್ನೈ (ಪಿಟಿಐ): ಮದುರೈ ರೈಲು ನಿಲ್ದಾಣದಲ್ಲಿ ಪ್ರವಾಸಿಗರ ರೈಲು ಬೋಗಿಯಲ್ಲಿ ಸಂಭವಿಸಿದ ಅಗ್ನಿ ದುರಂತದ ಬಗ್ಗೆ ದಕ್ಷಿಣ ವೃತ್ತದ ರೈಲ್ವೆ ಸುರಕ್ಷತಾ ಕಮಿಷನರ್ ಎ.ಎಂ. ಚೌಧರಿ ಅವರು ಭಾನುವಾರ ತನಿಖೆ ಆರಂಭಿಸಿದ್ದಾರೆ.

ಚೌಧರಿ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಬೆಂಕಿಗೆ ಆಹುತಿಯಾದ ರೈಲು ಬೋಗಿ ಪರಿಶೀಲಿಸಿದರು. ಅವರೊಂದಿಗೆ ದಕ್ಷಿಣ ರೈಲ್ವೆಯ ಅಧಿಕಾರಿ ಹಾಗೂ ರೈಲ್ವೆ ಮಂಡಳಿ ಸದಸ್ಯರೊಬ್ಬರು ಸಹ ಹಾಜರಿದ್ದರು. ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಕನಿಷ್ಠ ತಿಂಗಳು ಬೇಕಾಗುತ್ತದೆ ಎಂದರು.

ಕುಬೇರ್ ಗ್ರೂಪ್ ನಿರ್ದೇಶಕರಿಗೆ ನೋಟಿಸ್

ನೂಹ್ (ಹರಿಯಾಣ) (ಪಿಟಿಐ): ರೋಲ್ಸ್ ರಾಯ್ಸ್ ಮತ್ತು ತೈಲ ಟ್ಯಾಂಕರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡಿರುವ ಕುಬೇರ್ ಗ್ರೂಪ್ ನಿರ್ದೇಶಕ ವಿಕಾಸ್ ಮಾಲು ಅವರಿಗೆ ಅಪಘಾತದ ತನಿಖೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ಕಳುಹಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಹರಿಯಾಣದ ಉಮ್ರಿ ಗ್ರಾಮದ ಬಳಿ ದೆಹಲಿ-ಮುಂಬೈ-ಬರೋಡಾ ಎಕ್ಸ್‌ಪ್ರೆಸ್ ವೇನಲ್ಲಿ ಈಚೆಗೆ ಸಂಭವಿಸಿದ ಅಪಘಾತದಲ್ಲಿ ತೈಲ ಟ್ಯಾಂಕರ್ ಚಾಲಕ ಮತ್ತು ಅವರ ಸಹಾಯಕ ಮೃತಪಟ್ಟರೆ, ಮಾಲು ಸೇರಿದಂತೆ ಕಾರಿನಲ್ಲಿದ್ದ ಮೂವರು ಗಾಯಗೊಂಡಿದ್ದರು.

ಪ್ರಾಥಮಿಕ ವರದಿ ಪ್ರಕಾರ, ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಚಲಿಸುತ್ತಿದ್ದ ತೈಲ ಟ್ಯಾಂಕರ್ ಉಮ್ರಿ ಗ್ರಾಮದ ಬಳಿ ಕಾರಿಗೆ ಡಿಕ್ಕಿ ಹೊಡೆದಿದೆ.

ಎಫ್‌ಐಆರ್ ಪ್ರಕಾರ, ಹಿಂದಿನಿಂದ ಬಂದ ಕಾರು ತೈಲ ಟ್ಯಾಂಕರ್‌ನ ಮುಂಭಾಗದ ಟೈರ್‌ಗೆ ಡಿಕ್ಕಿ ಹೊಡೆದಿದೆ. ಈ ಕಾರಣದಿಂದಾಗಿ, ಟ್ಯಾಂಕರ್ ಪಲ್ಟಿಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ಪಟಾಕಿ ಕಾರ್ಖಾನೆ ಸ್ಫೋಟ: 8 ಸಾವು

ಬರಾಸತ್(ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಸುತ್ತಿದ್ದ ಪಟಾಕಿ ಕಾರ್ಖಾನೆಯಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ 8 ಮಂದಿ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೋಲ್ಕತ್ತದಿಂದ ಉತ್ತರಕ್ಕೆ 30 ಕಿ.ಮೀ ದೂರದಲ್ಲಿರುವ ದತ್ತಪುಕುರ್ ಪೊಲೀಸ್ ಠಾಣೆ ಪ್ರದೇಶದ ನಿಲ್ಗುಂಜ್‌ನ ಮೊಶ್ಪೋಲ್‌ನಲ್ಲಿರುವ ಕಾರ್ಖಾನೆಯಲ್ಲಿ ಕಾರ್ಮಿಕರು ಕೆಲಸ ಮಾಡುವ ವೇಳೆ ಸ್ಫೋಟ ಸಂಭವಿಸಿದೆ.

ಗಾಯಗೊಂಡವರಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ. ಹಲವು ಜನರು ಅವಶೇಷಗಳ ಅಡಿ ಸಿಲುಕಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ.

ಸ್ಫೋಟದ ಪರಿಣಾಮ ಅಕ್ಕಪಕ್ಕದ ಕೆಲ ಮನೆಗಳಿಗೂ ಹಾನಿಗೊಳಗಾಗಿವೆ. ಪೊಲೀಸರು ಕಾನೂನುಬಾಹಿರ ಚಟುವಟಿಕೆಗಳ ಮೇಲೆ ಮೇಲ್ವಿಚಾರಣೆ ನಡೆಸುತ್ತಿಲ್ಲ. ಅಕ್ರಮ ಪಟಾಕಿ ಘಟಕಗಳನ್ನು ಸ್ಥಳೀಯ ಟಿಎಂಸಿ ನಾಯಕರು ಪೋಷಿಸುತ್ತಿದ್ದಾರೆ ಎಂದು ಬಿಜೆಪಿಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಆರೋಪಿಸಿದ್ದಾರೆ.

ಕೃಷ್ಣ ಜನ್ಮಭೂಮಿ ಬಳಿ ಕಟ್ಟಡಗಳ ತೆರವು: ವಿಚಾರಣೆ ಇಂದು

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಮಥುರಾದಲ್ಲಿ ಕೃಷ್ಣ ಜನ್ಮಭೂಮಿ ಸಮೀಪ ಅಕ್ರಮವಾಗಿ ನಿರ್ಮಿಸಿದ್ದು ಎನ್ನಲಾದ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಾಚರಣೆಗೆ ಸಂಬಂಧಿಸಿದ ಅರ್ಜಿ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆಯಲಿದೆ.

ಗುಡಿಸಲುಗಳು, ಮನೆಗಳನ್ನು ತೆರವುಗೊಳಿಸಲು ರೈಲ್ವೆಯು ಆರಂಭಿಸಿರುವ ಕಾರ್ಯಾಚರಣೆ ಪ್ರಶ್ನಿಸಿದ ಅರ್ಜಿ ಇದಾಗಿದೆ.



ಸುಭಾಷಿತ
ಇನ್ನೊಬ್ಬರ ಮೇಲೆ ದ್ವೇಷ ಸಾಧಿಸುವುದು, ನಾವು ವಿಷ ಕುಡಿದು ಅವರು ಸಾಯಲಿ ಎಂದು ಕಾಯುತ್ತಾ ಕುಳಿತಂತೆ.
–ಗೌತಮ ಬುದ್ಧ

ಕುಸ್ತಿ ಕಣದಲ್ಲಿ ಕೆಸರೆರಚಾಟ ದೇಶದ ಗೌರವಕ್ಕೆ ಕುಂದು

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಆರಂಭವಾಗಲು ಇನ್ನು ಇಪ್ಪತ್ತು ದಿನಗಳಷ್ಟೇ ಉಳಿದಿವೆ. ಆದರೆ ಭಾರತದ ಕುಸ್ತಿ ಕ್ರೀಡಾಕ್ಷೇತ್ರವು ಗೊಂದಲದ ಗೂಡಾಗಿದೆ. ನಿಗದಿತ ಅವಧಿಯೊಳಗೆ ಚುನಾವಣೆ ನಡೆಸದ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮೇಲೆ ಯುಡಬ್ಲ್ಯುಡಬ್ಲ್ಯು (ಸಂಯುಕ್ತ ವಿಶ್ವ ಕುಸ್ತಿ) ಅಸಮಾಧಾನಗೊಂಡಿದ್ದು ಇತ್ತೀಚೆಗೆ ಒಕ್ಕೂಟವನ್ನು ಅಮಾನತುಗೊಳಿಸಿದೆ. ಇದರಿಂದಾಗಿ ಭಾರತದ ಕುಸ್ತಿಪಟುಗಳು ದೇಶದ ತ್ರಿವರ್ಣ ಧ್ವಜದಡಿ ಯಾವುದೇ ಅಂತರರಾಷ್ಟ್ರೀಯ ಕ್ರೀಡಾಕೂಟ ಮತ್ತು ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸುವಂತಿಲ್ಲ. ಅವರು ತಟಸ್ಥ ಅಥ್ಲೀಟ್‌ಗಳಾಗಿ ಕಣಕ್ಕಿಳಿಯಬೇಕಿದೆ. ಒಂದೊಮ್ಮೆ ಕ್ರೀಡಾಕೂಟಗಳಲ್ಲಿ ಭಾರತದ ಕುಸ್ತಿಪಟುಗಳು ಪದಕ ಗೆದ್ದರೂ ರಾಷ್ಟ್ರಗೀತೆ ಮೊಳಗುವುದಿಲ್ಲ. ಒಲಿಂಪಿಕ್ ಕೂಟಗಳ ಇತಿಹಾಸದಲ್ಲಿ ವೈಯಕ್ತಿಕ ವಿಭಾಗದಲ್ಲಿ ಭಾರತಕ್ಕೆ ಅತಿ ಹೆಚ್ಚು ಪದಕಗಳು ಒಲಿದಿರುವ ಕುಸ್ತಿಗೆ ಈ ದುಸ್ಥಿತಿ ಬಂದಿರುವುದು ಶೋಚನೀಯ. ಅಲ್ಲದೆ ದೇಶದ ಗೌರವಕ್ಕೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಂದುಂಟಾಗಿದೆ. ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂದು ಆರೋಪಿಸಿ ಡಬ್ಲ್ಯುಎಫ್‌ಐ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಖ್ಯಾತನಾಮ ಕುಸ್ತಿಪಟುಗಳು ನವದೆಹಲಿಯಲ್ಲಿ ಬೀದಿಗಿಳಿದು ಹೋರಾಟ ನಡೆಸಿದ್ದರು. ಉತ್ತರ ಪ್ರದೇಶದ ಕೈಸರ್‌ಗಂಜ್‌ನ ಬಿಜೆಪಿಯ ಪ್ರಭಾವಿ ಸಂಸದರೂ ಆಗಿರುವ ಬ್ರಿಜ್‌ಭೂಷಣ್ ಅವರನ್ನು ಬಂಧಿಸಬೇಕು ಎಂಬ ಕುಸ್ತಿಪಟುಗಳ ಆಗ್ರಹಕ್ಕೆ ಸೂಕ್ತ ಸ್ಪಂದನ ದೊರೆತಿಲ್ಲ. ಬ್ರಿಜ್‌ಭೂಷಣ್ ಬಂಧನ ಇದುವರೆಗೂ ಆಗಿಲ್ಲ. ಆದರೆ, ಭಾರತ ಒಲಿಂಪಿಕ್ ಸಂಸ್ಥೆಯು ಡಬ್ಲ್ಯುಎಫ್‌ಐಗೆ ಏಪ್ರಿಲ್ 17ರಂದು ಅಡ್‌ಹಾಕ್ ಸಮಿತಿಯನ್ನು ನೇಮಿಸಿತ್ತು. 45 ದಿನಗಳೊಳಗೆ ಚುನಾವಣೆ ನಡೆಸಿ ನೂತನ ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿಯನ್ನು ರಚಿಸಬೇಕು ಎಂದು ಯುಡಬ್ಲ್ಯುಡಬ್ಲ್ಯು ಸೂಚಿಸಿತ್ತು. ಮೇ 7ರಂದು ಚುನಾವಣೆ ನಡೆಸಲೂ ನಿರ್ಧರಿಸಲಾಗಿತ್ತು. ಆದರೆ ಅಸ್ಸಾಂ ಸೇರಿ ಕೆಲವು ರಾಜ್ಯ ಸಂಸ್ಥೆಗಳ ಮತದಾರರ ಪಟ್ಟಿಯಲ್ಲಿ ಲೋಪಗಳಿವೆ ಎಂದು ತಕರಾರು ಎತ್ತಿ ನ್ಯಾಯಾಲಯದ ಮೊರೆ ಹೋಗಿದ್ದವು. ಅದರಿಂದಾಗಿ ಚುನಾವಣೆ ಮುಂದೂಡಲಾಗಿತ್ತು. ಕೊನೆಗೂ ಆಗಸ್ಟ್ 12ಕ್ಕೆ ಚುನಾವಣೆ ದಿನಾಂಕ ನಿಗದಿಯಾಗಿತ್ತು. ಆದರೆ ಹರಿಯಾಣ ಕುಸ್ತಿ ಸಂಸ್ಥೆಯು ಹೈಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದರಿಂದ ಚುನಾವಣೆಗೆ ತಡೆಯಾಜ್ಞೆ ನೀಡಲಾಯಿತು. ಇದರಿಂದಾಗಿ ಇದುವರೆಗೂ ಚುನಾವಣೆ ನಡೆದಿಲ್ಲ. ಭೂಪಿಂದರ್ ಸಿಂಗ್ ಬಜ್ವಾ ನೇತೃತ್ವದ ಡಬ್ಲ್ಯುಎಫ್‌ಐ ಅಡ್‌ಹಾಕ್ ಸಮಿತಿಯು ನಿಯಮಾವಳಿಗೆ ಬದ್ಧವಾಗಿ ಮತ್ತು ಕುಸ್ತಿಯ ಹಿತಾಸಕ್ತಿಯಿಂದ ಕಾರ್ಯನಿರ್ವಹಿಸಿದ್ದರೆ ಈ ಪರಿಸ್ಥಿತಿ ತಪ್ಪಿಸಬಹುದಿತ್ತು ಎಂದು ಅವರ ಸಹೋದ್ಯೋಗಿ ಜಿಯಾನ್ ಸಿಂಗ್ ಅವರೇ ಹೇಳಿದ್ದಾರೆ. ಚುನಾವಣೆ ವಿಳಂಬಕ್ಕೆ ಕಾರಣಗಳನ್ನು ವಿವರಿಸಿ ಯುಡಬ್ಲ್ಯುಡಬ್ಲ್ಯು ಮನವೊಲಿಸುವಲ್ಲಿ ಸಮಿತಿ ವಿಫಲವಾಗಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಆದರೆ ಚುನಾವಣೆ ನಡೆಯುವುದನ್ನು ತಡೆದು ತಮ್ಮ ಅಧಿಕಾರ ಸ್ಥಾಪಿಸುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವನ್ನೂ ಅಲ್ಲಗಳೆಯಲಾಗದು. ಸರ್ಕಾರದ ಮಟ್ಟದಲ್ಲಿ ಪ್ರಭಾವಿಯಾಗಿರುವ ಬ್ರಿಜ್‌ಭೂಷಣ್ ಮತ್ತು ಬೆಂಬಲಿಗರು ಈ ದುಸ್ಥಿತಿಗೆ ಕಾರಣ ಎಂದು ಒಲಿಂಪಿಯನ್ ಕುಸ್ತಿಪಟು ವಿನೇಶಾ ಫೋಗಟ್ ಟೀಕಿಸಿದ್ದಾರೆ. ಆದರೆ ವಿನೇಶಾ ಅವರನ್ನು 'ಧರಣಾಜೀವಿ' ಎಂದು ಹೀಗಳೆಯುವ ಮೂಲಕ ಬ್ರಿಜ್‌ಭೂಷಣ್ ಕೂಡ ಪ್ರತಿಟೀಕೆ ಮಾಡಿದ್ದಾರೆ. ಈಗಲೂ ಕಾಲ ಮಿಂಚಿಲ್ಲ. ತುರ್ತಾಗಿ ಚುನಾವಣೆ ನಡೆಸಿ ನೂತನ ಸಮಿತಿಯನ್ನು ನೇಮಕ ಮಾಡಬೇಕು. ಅದು ಸಾಧ್ಯವಾದರೆ, ಅಮಾನತು ಆದೇಶವನ್ನು ಯುಡಬ್ಲ್ಯುಡಬ್ಲ್ಯು ಹಿಂಪಡೆಯುತ್ತದೆ. ದೇಶದ ಕುಸ್ತಿಪಟುಗಳು ರಾಷ್ಟ್ರಧ್ವಜದಡಿ ಸ್ಪರ್ಧಿಸಲು ಸಾಧ್ಯವಾಗುತ್ತದೆ. ಆಯ್ದ ಕೆಲವರ ಹಿತಾಸಕ್ತಿ ರಕ್ಷಿಸುವ ಸಲುವಾಗಿ ರಾಷ್ಟ್ರ ಗೌರವ ಹಾಗೂ ಕುಸ್ತಿಪಟುಗಳ ಭವಿಷ್ಯವನ್ನು ಬಲಿ ಕೊಡಬಾರದು.



ಆಯ್ದ ಕೆಲವರ ಹಿತಾಸಕ್ತಿ ರಕ್ಷಿಸುವ ಸಲುವಾಗಿ ರಾಷ್ಟ್ರಗೌರವ ಹಾಗೂ ಕುಸ್ತಿಪಟುಗಳ ಭವಿಷ್ಯವನ್ನು ಬಲಿ ಕೊಡಬಾರದು

ದಿನದ ಟ್ವೀಟ್

ಕಠಿಣ ಶಿಕ್ಷೆಯಾಗಲಿ


ಜಮ್ಮು ಮತ್ತು ಕಾಶ್ಮೀರದಲ್ಲಿ ಬೋರ್ಡ್ ಮೇಲೆ 'ಜೈ ಶ್ರೀರಾಮ್' ಎಂದು ಬರೆದ ಹಿಂದೂ ಮಗುವನ್ನು ಥಳಿಸಿರುವ ಮುಸ್ಲಿಂ ಶಿಕ್ಷಕಿ ಹಾಗೂ ಮುಜಫರ್‌ನಗರದಲ್ಲಿ (ಉತ್ತರಪ್ರದೇಶ) ಹಿಂದೂ ವಿದ್ಯಾರ್ಥಿಗಳನ್ನು ಮುಸ್ಲಿಂ ಬಾಲಕನ ಕೆನ್ನೆಗೆ ಬಾರಿಸುವಂತೆ ಮಾಡಿದ ಶಿಕ್ಷಕಿ ಇಬ್ಬರನ್ನೂ ಜೈಲಿಗೆ ಅಟ್ಟಬೇಕು ಮತ್ತು ಅವರಿಬ್ಬರೂ ಮಕ್ಕಳ ಹತ್ತಿರ ಸುಳಿಯದಂತೆ ನೋಡಿಕೊಳ್ಳಬೇಕು.



ರತುಪರ್ಣ ಚಟರ್ಜಿ, ಪತ್ರಕರ್ತೆ

ಕಿಡಿನುಡಿ

ಸಾಹಿತ್ಯದ ಪ್ರಾಥಮಿಕ ಕಾಳಜಿ ಮನುಷ್ಯತ್ವದ ವಿಕಾಸ. ಆದರೆ, ಇತ್ತೀಚೆಗೆ ಸಾಹಿತಿಗಳು ಅದನ್ನು ಮರೆತು ಪ್ರಶಸ್ತಿ, ಬಹುಮಾನಗಳ ಹಿಂದೆ ಹೋಗುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಶಸ್ತಿ ಫಲಕ, ಹಣ್ಣುಹಂಪಲು, ಚೆಕ್ ಕವರ್‌ಗಳ ಛಾಯಾಚಿತ್ರವನ್ನು ಸ್ವತಃ 'ಸ್ಟೇಟಸ್'ಗೆ ಹಾಕಿಕೊಳ್ಳುವ ಸ್ಥಿತಿ ಬಂದಿದೆ. ಇದು ಮುಜುಗರದ ಸಂಗತಿ.



ಜಯಂತ ಕಾಯ್ಕಿಣಿ, ಸಾಹಿತಿ

25 ವರ್ಷಗಳ ಹಿಂದೆ

ಶುಕ್ರವಾರ, 28-8-1998

● **ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ 'ಪ್ರಗತಿ ಮೈದಾನ' ಸ್ಥಾಪನೆ**

ಬೆಂಗಳೂರು, ಆಗಸ್ಟ್ 27– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಬೆಂಗಳೂರಿನ ವೈಟ್‌ಫೀಲ್ಡ್ ಹತ್ತಿರದ ಸಿಂಗಪುರ ಟೆಕ್ನಾಲಜಿ ಪಾರ್ಕ್ ಸಮೀಪ ದೆಹಲಿಯ ಪ್ರಗತಿ ಮೈದಾನದ ಮಾದರಿಯಲ್ಲಿ ಅಂತರರಾಷ್ಟ್ರೀಯ ಮಟ್ಟದ 'ವಾಣಿಜ್ಯ ಮತ್ತು ವಸ್ತುಪ್ರದರ್ಶನ ಸಮುಚ್ಚಯ' ಅಸ್ತಿತ್ವಕ್ಕೆ ಬರಲಿದೆ.

ಈ ವಿಷಯವನ್ನು ಕೇಂದ್ರದ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಹಾಗೂ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ವಿಧಾನಸೌಧದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಇದಕ್ಕೆ ಬೇಕಾಗಬಹುದಾದ ಇನ್ನೂ 50 ಎಕರೆ ಜಾಗವನ್ನು ರಾಜ್ಯ ಸರ್ಕಾರ ಒದಗಿಸಲು ಒಪ್ಪಿದೆ ಎಂದು ಅವರು ವಿವರಿಸಿದರು.

● **ರಾಜ್ಯ ವಿದ್ಯುತ್ ವ್ಯವಸ್ಥೆ ನಿಯಂತ್ರಣಕ್ಕೆ ಶೀಘ್ರವೇ ಆಯೋಗ ರಚನೆ**

ಬೆಂಗಳೂರು, ಆಗಸ್ಟ್ 27– ರಾಜ್ಯದಲ್ಲಿ ವಿದ್ಯುತ್ ವ್ಯವಸ್ಥೆ ಸುಧಾರಿಸಲು ಇನ್ನು ನಾಲ್ಕು ತಿಂಗಳಲ್ಲಿ ವಿದ್ಯುತ್ ವ್ಯವಸ್ಥೆ ನಿಯಂತ್ರಣ ಆಯೋಗವನ್ನು ರಚಿಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ವಿದ್ಯುತ್ ಮಂಡಲಿಯ ಅಧ್ಯಕ್ಷ ಕೆ.ಪಿ.ಸಿಂಗ್ ಇಂದು ಇಲ್ಲಿ ತಿಳಿಸಿದರು.

ದೆಹಲಿಯ ವಿದ್ಯುತ್ ಮತ್ತು ನೀರಾವರಿಯ ಕೇಂದ್ರ ಮಂಡಲಿಯು 'ಕೃಷಿ ಪಂಪ್‌ಸೆಟ್ಟು-ಗಳಿಂದ ವಿದ್ಯುತ್ ವ್ಯವಸ್ಥೆಯ ಮೇಲಾಗುವ ಪರಿಣಾಮ' ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ವಿದ್ಯುತ್ ಉತ್ಪಾದನೆ ಮತ್ತು ವಿತರಣಾ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲು ಈ ಹೊಸ ಆಯೋಗದಿಂದ ಅನುಕೂಲವಾಗುವುದು ಎಂದು ಅಭಿಪ್ರಾಯಪಟ್ಟರು.

50 ವರ್ಷಗಳ ಹಿಂದೆ

ಮಂಗಳವಾರ, 28-8-1973

● **ಭಾರತ– ಪಾಕ್ ಮಾತುಕತೆ: ಅನೇಕ ಅಂಶಗಳಲ್ಲಿ ಬಹುಮಟ್ಟಿನ ಒಪ್ಪಂದ**

ನವದೆಹಲಿ, ಆಗಸ್ಟ್ 27– ಹತ್ತು ದಿನಗಳ ಜಟಿಲ ಸಂಧಾನಗಳ ನಂತರ ಭಾರತ ಮತ್ತು ಪಾಕಿಸ್ತಾನ ನಿಯೋಗಗಳು 1971ರ ಯುದ್ಧದಿಂದ ಉದ್ಭವಿಸಿದ ಮಾನವೀಯ ಸಮಸ್ಯೆಗಳ ಸಂಬಂಧದಲ್ಲಿ ಅನೇಕ ಅಂಶಗಳ ಬಗೆಗೆ ಬಹುಮಟ್ಟಿಗೆ ಒಪ್ಪಂದಕ್ಕೆ ಬಂದಿವೆ.

ಇಂದು ಸಂಜೆ 315 ನಿಮಿಷಗಳಷ್ಟು ದೀರ್ಘಕಾಲ ಮಾತುಕತೆ ನಡೆದ ನಂತರ ಭಾರತ ನಿಯೋಗದ ನಾಯಕ ಪಿ.ಎನ್. ಹಕ್ಸರ್ ಅವರು, 'ಬಗೆಹರಿಯಬೇಕಾದ ಇನ್ನೂ ಕೆಲವು ಅಂಶಗಳಿದ್ದು' ಅವುಗಳಿಗಾಗಿ ನಾಳೆ ಮತ್ತೆ ಸಭೆ ಸೇರುವುದಾಗಿ ಪತ್ರಕರ್ತರಿಗೆ ತಿಳಿಸಿದರು.

'ನಾವು ಪರಿಹರಿಸಲು ಸೇರಿರುವ ಸಮಸ್ಯೆಗಳ ಬಗೆಗೆ ಇತ್ಯರ್ಥಕ್ಕೆ ಬರುವವರೆಗೆ ಸಭೆ ಸೇರುತ್ತಲೇ ಇರಲು' ಉಭಯ ನಿಯೋಗಗಳೂ ಒಪ್ಪಿಕೊಂಡಿರುವುದಾಗಿ ಹಕ್ಸರ್ ಅವರು ಇಂದು ಬೆಳಿಗ್ಗೆ ಒಂದು ಗಂಟೆ ಕಾಲ ಮಾತುಕತೆ ನಡೆಸಿದ ನಂತರ ತಿಳಿಸಿದ್ದರು.

● **ದೇವಸ್ಥಾನಗಳ 10 ಕೋಟಿ ರೂ. ಒಡವೆ, 4,000 ಎಕರೆ ಜಮೀನು: ಏಕರೂಪ ಆಡಳಿತಕ್ಕೆ ಶಾಸನ**

ಬೆಂಗಳೂರು, ಆಗಸ್ಟ್ 27– ರಾಜ್ಯದ ಮುಜರಾಯಿ ದೇವಸ್ಥಾನಗಳ ಆಸ್ತಿಯನ್ನು ಏಕರೂಪ ಆಡಳಿತಕ್ಕೆ ತರುವ ಸಂಬಂಧದಲ್ಲಿ ಒಂದು ವಿಧೇಯಕವನ್ನು ಈ ಅಧಿವೇಶನದ-ಲ್ಲಿಯೇ ಮಂಡಿಸಲು ಸರ್ಕಾರ ಯೋಚಿಸಿದೆ ಎಂದು ಕಂದಾಯ ಸಚಿವ ಎನ್. ಹುಚ್ಚಮಾಸ್ತಿಗೌಡ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಮುಜರಾಯಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳಲ್ಲಿ ಸುಮಾರು 10 ಕೋಟಿ ರೂ. ಬೆಲೆಬಾಳುವ ಚಿನ್ನ, ಬೆಳ್ಳಿಯ ಆಭರಣಗಳಿರುವುದಲ್ಲದೆ, 4.12 ಸಾವಿರ ಎಕರೆ ಕೃಷಿ ಜಮೀನುಗಳು ಸೇರಿವೆ ಎಂದು ಕೃಷಿ ಸಚಿವರು ಹೇಳಿದರು.

ಕೆ.ಆರ್. ಶ್ರೀನಿವಾಸಲು ನಾಯ್ಡು ಅವರ ಪ್ರಶ್ನೆಗೆ ಉತ್ತರ ಇತ್ತ ಸಚಿವರು, ಮುಜರಾಯಿ ದೇವಸ್ಥಾನಗಳ ಆಸ್ತಿಗಳನ್ನು ಶೈಕ್ಷಣಿಕ ಹಾಗೂ ಇತರ ದೇಶಾಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವ ಯೋಚನೆ ಇಲ್ಲ ಎಂದರು.

ಬಹು ಆಯಾಮದ ಬಡತನ ಸೂಚ್ಯಂಕ ಬಡತನದ ಒಂದು ಮುಖವನ್ನಷ್ಟೇ ತೋರಿಸುತ್ತದೆ

ಬಡತನ ಅರಿಯುವ ದಾರಿ ಯಾವುದು?



ವಿಶ್ಲೇಷಣೆ
ಟಿ.ಎಸ್.ವೇಣುಗೋಪಾಲ್

'ನನ್ನ 13.5 ಕೋಟಿ ಬಡ ಸೋದರ– ಸೋದರಿಯರು ಬಡತನದ ಬಂಧನದಿಂದ ಮುಕ್ತರಾಗಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಹೆಮ್ಮೆಯಿಂದ ಹೇಳಿದರು. ಇದು ಹೆಮ್ಮೆಪಡಬೇಕಾದ ವಿಷಯವೇ. ನೀತಿ ಆಯೋಗವು ಬಹು ಆಯಾಮದ ಬಡತನ (ಎಂಪಿಐ) ಸೂಚ್ಯಂಕದ ವರದಿಯನ್ನು ಹಿಂದಿನ ತಿಂಗಳಷ್ಟೇ ಪ್ರಕಟಿಸಿದೆ. ಭಾರತವು ಬಡತನವನ್ನು ಅಳೆಯುವುದಕ್ಕೆ ಇತ್ತೀಚೆಗಷ್ಟೇ ಎಂಪಿಐಯನ್ನು ಬಳಸಲು ಪ್ರಾರಂಭಿಸಿದೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) 2010ರಿಂದಲೇ ಎಂಪಿಐಯನ್ನು ಪ್ರಕಟಿಸುತ್ತಿದೆ.

ಭಾರತದಲ್ಲಿ ಈವರೆಗೂ ಆದಾಯ ಆಧರಿಸಿ ಬಡತನವನ್ನು ಅಳೆಯುವ ಪದ್ಧತಿ ಇತ್ತು. ಆದಾಯ ಕುರಿತಂತೆ ಮಾಹಿತಿ ಸಿಗುವುದು ಕಷ್ಟವಾಗಿದ್ದರಿಂದ, ಸರಕು–ಸೇವೆಗಳನ್ನು ಕೊಳ್ಳಲು ಜನ ಖರ್ಚು ಮಾಡುತ್ತಿದ್ದ ಹಣವನ್ನು (ಕನ್ಸಮ್‌ಷನ್ ಎಕ್ಸ್‌ಪೆಂಡಿಚರ್) ಆಧರಿಸಿ ಬಡತನವನ್ನು ಅಂದಾಜಿಸಲಾಗುತ್ತಿತ್ತು. ಬಡತನದ ರೇಖೆ ನಿರ್ಧರಿಸಲು ಕಾಲಕಾಲಕ್ಕೆ ಸಮಿತಿಗಳು ರಚನೆ ಆಗುತ್ತಿದ್ದವು. ಬಡವರ ಸಂಖ್ಯೆ ಅಂದಾಜಿಸಲು ಬೇಕಾದ ಅಂಕಿಅಂಶಗಳನ್ನು ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆಯಿಂದ (ಎನ್‌ಎಸ್‌ಎಸ್) ತೆಗೆದುಕೊಳ್ಳಲಾಗುತ್ತಿತ್ತು.

ಎನ್‌ಎಸ್‌ಎಸ್, ಐದು ವರ್ಷಕ್ಕೊಮ್ಮೆ ಬಳಕೆದಾರರು ವಿವಿಧ ಸರಕುಗಳನ್ನು ಕೊಳ್ಳಲು ಮಾಡುವ ಖರ್ಚಿನ ಕುರಿತಂತೆ ಸಮೀಕ್ಷೆ ನಡೆಸಿ ಮಾಹಿತಿಯನ್ನು ಸಂಗ್ರಹಿಸುತ್ತದೆ. ಆದರೆ ಸರ್ಕಾರ 2017– 18ರ ಬಳಕೆದಾರರ ವೆಚ್ಚದ ಸಮೀಕ್ಷೆಯ ವರದಿಯನ್ನು ತಡೆಹಿಡಿದಿದೆ. ಹಾಗಾಗಿ 2011ರಲ್ಲಿ ಪ್ರಕಟವಾದ ಮಾಹಿತಿಯೇ ಭಾರತದ ಬಡತನವನ್ನು ಕುರಿತ ಅಂತಿಮ, ಅಧಿಕೃತ ಮಾಹಿತಿಯಾಗಿದೆ. ದತ್ತಾಂಶದ ಕೊರತೆಯಿಂದಾಗಿ ಅರ್ಥಶಾಸ್ತ್ರಜ್ಞರು ಅನಿವಾರ್ಯವಾಗಿ ವಿವಿಧ ಮೂಲಗಳಿಂದ ಅಂಕಿಅಂಶಗಳನ್ನು ಹೆಕ್ಕಿಕೊಂಡು ಬಡತನದ ಅಂದಾಜು ಮಾಡುತ್ತಿದ್ದಾರೆ. ಸ್ವಾಭಾವಿಕವಾಗಿಯೇ ಆ ಬಗ್ಗೆ ಗೊಂದಲಗಳೂ ವಿವಾದಗಳೂ ಇವೆ.

ಈಗ ಯುಎನ್‌ಡಿಪಿ ರೂಪಿಸಿರುವ ಬಹು ಆಯಾಮದ ಬಡತನ ಸೂಚ್ಯಂಕ ಸಂಪೂರ್ಣ ಬೇರೆಯೇ ಆದ ವಿಧಾನವನ್ನು ಆಧರಿಸಿದೆ. ಜನರ ಹಣಕಾಸಿನ ಸ್ಥಿತಿಯನ್ನು ಆಧಾರವಾಗಿಸದೆ ಮಾನವಾಭಿವೃದ್ಧಿ ಆಧರಿಸಿ ಬಡತನವನ್ನು ಲೆಕ್ಕಹಾಕಲು ಪ್ರಯತ್ನಿಸಿದೆ. ಮಾನವ ಸಂಪನ್ಮೂಲದ ಮೂರು ಆಯಾಮಗಳಾದ ಆರೋಗ್ಯ, ಶಿಕ್ಷಣ, ಜೀವನಮಟ್ಟವನ್ನು ಪರಿಶೀಲಿಸಲಾಗುತ್ತದೆ. ಅವುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಪೌಷ್ಟಿಕತೆ, ಮಕ್ಕಳ ಮರಣಪ್ರಮಾಣ, ಶಿಕ್ಷಣದ ಅವಧಿ ಮತ್ತು ಹಾಜರಾತಿ, ಶುದ್ಧನೀರು, ನೈರ್ಮಲ್ಯ, ವಿದ್ಯುತ್, ಅಡುಗೆ ಇಂಧನದಂಥ ಹತ್ತು ಸೂಚಕಗಳನ್ನು ಆರಿಸಿಕೊಳ್ಳಲಾಗಿದೆ.

ಈ ಸೌಲಭ್ಯಗಳ ಲಭ್ಯತೆಯ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ. ಸೌಲಭ್ಯವಿದ್ದರೆ ಸೊನ್ನೆ ಅಂಕವನ್ನು, ಸೌಲಭ್ಯ ವಂಚಿತರಾಗಿದ್ದರೆ ಒಂದು ಅಂಕವನ್ನು ನೀಡಲಾಗುತ್ತದೆ. ಪ್ರತಿಯೊಂದು ಸೂಚಕಕ್ಕೂ ಅದರ ಪ್ರಾಮುಖ್ಯವನ್ನು ಆಧರಿಸಿ ಪ್ರಾಧಾನ್ಯ ನೀಡಲಾಗಿದೆ. ಸೂಚಕಗಳ ಅಂಕದೊಂದಿಗೆ ಅವುಗಳ ಪ್ರಾಧಾನ್ಯವನ್ನು ಗುಣಿಸಿ ಸೂಚ್ಯಂಕವನ್ನು ಲೆಕ್ಕ ಹಾಕಲಾಗುತ್ತದೆ. ಸೂಚ್ಯಂಕದ ಒಟ್ಟು ಮೌಲ್ಯ 0.33ಕ್ಕಿಂತ ಕಡಿಮೆಯಿದ್ದರೆ ಬಡ ಕುಟುಂಬವೆಂದು ಪರಿಗಣಿಸಲಾಗುತ್ತದೆ. ಈ ಅಂಕಗಳನ್ನು ಕ್ರೋಡೀಕರಿಸಿ ದೇಶದ ಎಂಪಿಐ ಲೆಕ್ಕ ಹಾಕಲಾಗುತ್ತದೆ. ಆದರೆ ಕೆಲವು ದೇಶಗಳು ಸಂಪೂರ್ಣವಾಗಿ ಇದೇ ಕ್ರಮ ಅನುಸರಿಸದೆ ಅನುಕೂಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡಿವೆ. ಉದಾಹರಣೆಗೆ, ಭಾರತವು ಬ್ಯಾಂಕ್ ಖಾತೆ, ತಾಯಿಯ ಆರೋಗ್ಯವನ್ನು ಹೆಚ್ಚುವರಿ ಸೂಚಕಗಳಾಗಿ ಸೇರಿಸಿಕೊಂಡಿದೆ. ಹೀಗಾಗಿ, ಅಂದಾಜಿನಲ್ಲೂ ವ್ಯತ್ಯಾಸವಾಗುತ್ತದೆ.

ನೀತಿ ಆಯೋಗವು ಎಂಪಿಐ ತಯಾರಿಸಲು ಬೇಕಾದ ಮಾಹಿತಿಯನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಿಂದ (ಎನ್‌ಎಫ್‌ಎಚ್‌ಎಸ್) ತೆಗೆದುಕೊಂಡಿದೆ. ಕೇಂದ್ರ ಸರ್ಕಾರವು ಎನ್‌ಎಫ್‌ಎಚ್‌ಎಸ್ ವರದಿಯ ಬಗ್ಗೆ ವಿರೋಧ ವ್ಯಕ್ತಪಡಿಸಿತ್ತು. ಹಾಗಿದ್ದಾಗ್ಯೂ ನೀತಿ ಆಯೋಗ ಅಲ್ಲಿಂದ ಮಾಹಿತಿ ತೆಗೆದುಕೊಳ್ಳುತ್ತಿರುವುದು ಸಮಾಧಾನದ ಸಂಗತಿ.

ನೀತಿ ಆಯೋಗದ ವರದಿಯ ಪ್ರಕಾರ, ಭಾರತದಲ್ಲಿ ಬಹು ಆಯಾಮದ ಬಡತನದಿಂದ 2005–06ರಿಂದ 2020–21ರ ಅವಧಿಯಲ್ಲಿ 41.5 ಕೋಟಿ ಜನ ಹೊರಬಂದಿದ್ದಾರೆ. ಅವರಲ್ಲಿ 13.5 ಕೋಟಿ (ಯುಎನ್‌ಡಿಪಿ ಅಂದಾಜಿನ ಪ್ರಕಾರ 13.9 ಕೋಟಿ) ಜನ 2015–16 ಹಾಗೂ 2020–21ರ ನಡುವೆ ಹೊರಗೆ ಬಂದವರು. ಉಳಿದವರು 2005 ಹಾಗೂ 2015ರ ನಡುವೆ ಹೊರಗೆ ಬಂದವರು. ಶೇಕಡಾವಾರು ನೋಡಿದರೆ, 2005–06ರಲ್ಲಿ ಬಡವರ ಸಂಖ್ಯೆ ಶೇ 55.1ರಷ್ಟು ಇದ್ದುದು 2015–16ರಲ್ಲಿ ಶೇ 27.7 ಆಯಿತು. 2020–21ರಲ್ಲಿ ಶೇ 16.4ಕ್ಕೆ ಇಳಿದಿದೆ. ಇದು ಸಂತಸದ ವಿಷಯ. ಆದರೆ ಎಂಪಿಐ ಬಡತನದ ಪರಿಪೂರ್ಣ ಮಾಪನವಲ್ಲ. ನಿಜ, ಯಾವುದೇ ಮಾಪನವೂ ಪರಿಪೂರ್ಣವಾಗಿರುವುದಕ್ಕೆ ಸಾಧ್ಯವಿಲ್ಲ. ಆದಾಯವನ್ನು ಆಧರಿಸಿದ ಬಡತನದ ಸೂಚ್ಯಂಕದ ಬಗ್ಗೆಯೂ ಟೀಕೆಗಳಿವೆ. ಅವು ಆರೋಗ್ಯ, ಶಿಕ್ಷಣದಂತಹ ಮಾನವಾಭಿವೃದ್ಧಿಯ ಅಂಶಗಳನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಬಹು ಆಯಾಮದ ಬಡತನದ ಸೂಚ್ಯಂಕ ಅನುಸರಿಸುತ್ತಿರುವ ಕ್ರಮ, ಬಳಸುತ್ತಿರುವ ಸೂಚಕಗಳಂತಹವುಗಳ ಬಗ್ಗೆ ಸಮಸ್ಯೆಗಳಿವೆ. ಕೆಲವು ಸೂಚಿಗಳು ಹಲವು ಕುಟುಂಬಗಳಿಗೆ ಅನ್ವಯವಾಗುವುದಿಲ್ಲ. ಉದಾಹರಣೆಗೆ, ಕುಟುಂಬದಲ್ಲಿ ಮಕ್ಕಳಿಲ್ಲದೇ ಹೋದರೆ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿ ಸಿಗುವುದಿಲ್ಲ. ವಲಸೆ ಕಾರ್ಮಿಕರಿಗೆ ಇಂಧನ ಮೂಲದ ಸೂಚಿಗಳು ಅನ್ವಯಿಸುವುದಿಲ್ಲ. ಮಾಹಿತಿ ಇಲ್ಲದಿದ್ದಾಗ ಸೌಲಭ್ಯಗಳು ಇದ್ದವು ಎಂದು ಭಾವಿಸಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ?



ಜೀವನಮಟ್ಟ ನಿರ್ಧರಿಸುವ ಸೂಚಿಗಳಲ್ಲಿ ಬ್ಯಾಂಕ್ ಖಾತೆಯನ್ನು ಸೇರಿಸಲಾಗಿದೆ. ಆದರೆ ಅದನ್ನು ಶುಚಿಯಾದ ನೀರು ಅಥವಾ ಪೌಷ್ಟಿಕತೆಯ ಸಮಕ್ಕಿಟ್ಟು ನೋಡುವುದು ಸರಿಯಲ್ಲ. ಜೊತೆಗೆ ಈಗಾಗಲೇ ಇರುವ ಕುಡಿಯುವ ನೀರು, ಅಡುಗೆ ಅನಿಲ, ಬ್ಯಾಂಕ್ ಖಾತೆ, ವಿದ್ಯುತ್‌ನಂತಹ ಬಹುತೇಕ ಸೌಲಭ್ಯಗಳು ಮುಂದೆ ತಪ್ಪಿಹೋಗುವ ಸಾಧ್ಯತೆ ಕಡಿಮೆ. ಬರೀ ಪೌಷ್ಟಿಕತೆ ಹಾಗೂ ಶಿಶುಮರಣ ಪ್ರಮಾಣದಲ್ಲಿ ಹೆಚ್ಚುಕಮ್ಮಿಯಾಗಬಹುದು. ಹಾಗಾಗಿ ಈ ಕ್ರಮದಲ್ಲಿ ಜನ ಬಡತನದಿಂದ ಹೊರಬರಬಹುದೇ ವಿನಾ ಹೊಸದಾಗಿ ಬಡವರಾಗುವ ಸಾಧ್ಯತೆ ಕಡಿಮೆ.

ಅರ್ಥಶಾಸ್ತ್ರಜ್ಞ ಪ್ರಭಾತ್ ಪಟ್ನಾಯಕ್ ಅವರು ಹೇಳುವಂತೆ, ಸಮಾಜ ಆಧುನೀಕರಣಗೊಂಡಂತೆ ಇದರಲ್ಲಿ ಸೂಚಿಸಿರುವ ಬಹುತೇಕ ಸೌಲಭ್ಯಗಳು ಹೆಚ್ಚುತ್ತವೆ. ಮಕ್ಕಳ ಮರಣ ಪ್ರಮಾಣ ಕಡಿಮೆ ಆಗುತ್ತದೆ, ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚುತ್ತದೆ... ಹಾಗಾಗಿ ಎಂಪಿಐ ಇಳಿತ ಸಮಾಜದ ಆಧುನೀಕರಣವನ್ನು, ಸೌಲಭ್ಯಗಳಲ್ಲಿನ ಸುಧಾರಣೆಯನ್ನು ಸೂಚಿಸುತ್ತದೆಯೇ ವಿನಾ ಆದಾಯ ಅಥವಾ ಕೊಳ್ಳುವ ಶಕ್ತಿಯ ಹೆಚ್ಚಳವನ್ನಲ್ಲ. ಅದರಿಂದಾಗಿಯೇ 41.5 ಕೋಟಿ ಜನ ಬಹು ಆಯಾಮದ ಬಡತನದಿಂದ ಹೊರಬಂದಿದ್ದರೂ ಉಳಿದ ಎಷ್ಟೋ ವಿಷಯಗಳಲ್ಲಿ ಅವರ ಸ್ಥಿತಿ ಸುಧಾರಿಸಿಲ್ಲ. ಉದಾಹರಣೆಗೆ, ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದರಿಂದ, 2011–12, 2017–18ರ ನಡುವೆ ಅವರು ಮಾಡುತ್ತಿದ್ದ ಖರ್ಚಿನಲ್ಲಿ ಶೇ 9ರಷ್ಟು ಕಡಿಮೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಕ್ಯಾಲೊರಿಯನ್ನೂ ಬಳಸಲಾಗದವರ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ ಕುಸಿದಿದೆ.

ಹಾಗಾಗಿ, ಬಹು ಆಯಾಮದ ಬಡತನ ಸೂಚ್ಯಂಕವು ಬಡತನದ ಒಂದು ಮುಖವನ್ನಷ್ಟೇ ತೋರಿಸುತ್ತದೆ. ಅದೊಂದನ್ನೇ ಬಳಸಿ ಒಂದು ದೇಶದ ನಿಜವಾದ ಬಡತನದ ಸ್ಥಿತಿಯನ್ನು ತಿಳಿಯಲಾಗದು. ವಿಭಿನ್ನ ಸೂಚ್ಯಂಕಗಳು ವಿಭಿನ್ನ ಆಯಾಮಗಳನ್ನು ಹೇಳುತ್ತಿರುತ್ತವೆ. ಒಂದು ಸೂಚ್ಯಂಕ ನೋಡಿ ಬಡತನ ಕಮ್ಮಿಯಾಗಿದೆ ಅಂದುಕೊಂಡರೆ, ಇನ್ನೊಂದು, ಬಡತನ ಹೆಚ್ಚುತ್ತಿದೆ ಅನ್ನುತ್ತಿರುತ್ತದೆ. ಅವುಗಳನ್ನು ಪರಸ್ಪರ ಪೂರಕವಾಗಿ ಬಳಸುವುದು ಒಳ್ಳೆಯದು. ಖರ್ಚು, ಆದಾಯ ಆಧಾರಿತ ಬಡತನದ ಅಂದಾಜು ಹಾಗೂ ಎಂಪಿಐ ಎರಡನ್ನೂ ಬಳಸುವುದು ಸೂಕ್ತ. ಎಂಪಿಐನ ಮಿತಿಗಳನ್ನು ಮೀರಲು ಪ್ರಯತ್ನಿಸುತ್ತಲೇ ಆದಾಯ ಆಧರಿಸಿದ ಬಡತನದ ಸೂಚ್ಯಂಕಕ್ಕೆ ಬೇಕಾದ ಮಾಹಿತಿಯನ್ನು ವಸ್ತುನಿಷ್ಠವಾಗಿ ಸಂಗ್ರಹಿಸುವುದೂ ಮುಂದುವರಿಯಬೇಕು. ಆಗಷ್ಟೇ ಬಡತನದ ಬಾಹುಳ್ಯ, ಕಾರಣ, ಪರಿಹಾರ ಕುರಿತಂತೆ ಸಮಚಿತ್ತದ ನಿರ್ಧಾರ ಸಾಧ್ಯ.

ಚುರುಮುರಿ



ಯಾನಕ್ಕಾಗಿ ತ್ಯಾಗ!

● ಸುಮಂಗಲಾ

ವಿಕ್ರಮ್ ಲ್ಯಾಂಡ್ ಆಗಿದ್ದನ್ನು, ಪ್ರಜ್ಞಾನ್ ರೋವರ್ ಹಗೂರಕ್ಕೆ ಕೆಳಗಿಳಿದು ಓಡಾಡಿದ್ದನ್ನು ಕಿವಿಗೆ ಇಯರ್ ಫೋನ್ ಹಾಕಿಕೊಂಡು ಬೆಕ್ಕಣ್ಣ ನೋಡಿಯೇ ನೋಡಿತು.

'ಏನು ಕೇಳಾಕೆ ಹತ್ತೀಯಲೇ' ಎಂದು ನಾನು ಕುತೂಹಲದಿಂದ ಕೇಳಿದೆ.

'ಅಲ್ಲಿಲ್ಲಾದರೂ ಚಂದ್ರಬೆಕ್ಕುಗಳ ಮ್ಯಾಂವ್ ಗೀಂವ್ ಸದ್ದು ಬರತೈತೇನು ಅಂತ ಕೇಳಾಕೆ ಹತ್ತಿನಿ' ಎಂದು ಘನಗಂಭೀರವಾಗಿ ಉಲಿಯಿತು.

'ಮಂಗ್ಯಾನಂಥವ್ನೇ... ಇಲ್ಲೀವರೆಗೆ ಚಂದ್ರನ ಮ್ಯಾಗೆ ಮಾಡಿದ ಯಾವ ಸಂಶೋಧನೆಯಲ್ಲೂ ಜೀವಿಗಳು ಇದ್ದ ಕುರುಹು ಸಿಕ್ಕಿಲ್ಲ, ಅಂತಾದ್ರಾಗೆ ಚಂದ್ರಬೆಕ್ಕುಗಳು ಎಲ್ಲಿರತಾವು?'

'ನೀರೈತಿ ಅಂತ ಅಲ್ಲಿ ನಮ್ ಚಂದ್ರಯಾನ– 1 ಹೇಳೈತಿ. ನೀರೈತಿ ಅಂದ್ರ ಜೀವಿಗಳಿದ್ದೇ ಇರತಾವು. ಸೇಫ್ ಲ್ಯಾಂಡಿಂಗ್ ಮಾಡೋ ರಹಸ್ಯ ನಮ್ ಇಸ್ರೊ ವಿಜ್ಞಾನಿಗಳಿಗೆ ಈಗ ಕರಗತ ಆಗೈತಿ. ಯಾವುದಕ್ಕೂ ನಾವು ಸ್ವಲ್ಪ ರೊಕ್ಕ ರೆಡಿ ಇಟ್ಕಂಡಿರೂಣು'.

ನನಗೆ ತಲೆಬುಡ ತಿಳಿಯಲಿಲ್ಲ.

'ತಿಂಗಳ ಖರ್ಚಿಗೆ ರೊಕ್ಕ ಹೊಂದಿಸೂದೆ ರಗಡ್ ಆಗೈತಿ ನನಗ. ರೊಕ್ಕ ಹೆಂಗ ರೆಡಿ ಇಟ್ಕಳದು...?'

'ನೀ ಎಲ್ಲಾದಕ್ಕೆ ಏನರೆ ಕೊಸರು ತೆಗೀಬ್ಯಾಡ. ನಮ್ ಮೋದಿಮಾಮಾರ ಆಡಳಿತಾವಧಿಯಲ್ಲೇ ಎರಡು ಬಾರಿ ಚಂದ್ರಯಾನ ನಡೆದದ. ಹಿಂಗಾಗಿ ಮುಂದಿನ ವರ್ಷ ಸಂಸತ್ತಿನಾಗೆ ಪ್ರಧಾನಿಯಾನ 3 ಖಂಡಿತಾ ಅವರಿದ್ದೇ! ಅದಾದಮ್ಯಾಗೆ ಅವರು ರೆಗ್ಯುಲರ್ ಸ್ಪೇಸ್ ಶಿಪ್ ಬಿಡ್ತಾರಂತ. ಆಮ್ಯಾಗೆ ಅಲ್ಲಿ ಸೈಟು, ಅಪಾರ್ಟಮೆಂಟು, ರೆಸಾರ್ಟು, ತೋಟ ಎಲ್ಲ ಶುರುವಾಗತೈತಿ. ನಾವು ರೊಕ್ಕ ರೆಡಿ ಇಟ್ಕಂಡಿರೂಣು'.

'ಮೊದ್ಲು ಚಂದ್ರಯಾನ– 3 ಸಕ್ಸೆಸ್‌ಫುಲ್ ಮಾಡಿದ ನಮ್ ವಿಜ್ಞಾನಿಗಳಿಗೆ ಛಲೋ ಸಂಬಳಸಾರಿಗೆ ಕೊಡಲಿ, ಬಾಹ್ಯಾಕಾಶ ಇಲಾಖೆಗೆ ಜಾಸ್ತಿ ಅನುದಾನ ಕೊಡಲಿ. ಆಮ್ಯಾಗೆ ಮುಂದಿನ ಯಾನಗಳ ಬಗ್ಗೆ ಮಾತಾಡೂಣು'.

'ಅವರು ದೇಶಕ್ಕಾಗಿ ಅಂಥವೆಲ್ಲ ತ್ಯಾಗ ಮಾಡತಾರೆ. ನಮ್ ಮೋದಿಮಾಮಾರು ಪ್ರಧಾನಿಯಾನಕ್ಕಾಗಿ ಎಷ್ಟ್ ತ್ಯಾಗ ಮಾಡಿಲ್ಲೇನ್? ಅಲ್ಲದೇ ಮೋದಿಮಾಮಾರು, ಸಿದ್ದುಅಂಕಲ್ಲು ಅವ್ರಿದ್ದಲ್ಲೇ ಹೋಗಿ ಸ್ವೀಟ್ ತಿನ್ನಿಸ್ಯಾರೆ. ಅದೇ ಸಾಕೇಳು' ಬೆಕ್ಕಣ್ಣ ಉಡಾಫೆಯಿಂದ ನಕ್ಕಿತು.

ಸಂಗತ

ಎಂಜಿನಿಯರಿಂಗ್ ಶಿಕ್ಷಣ: ಈಗ ದುಬಾರಿ

ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಸೀಟುಗಳ ಸಂಖ್ಯೆ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ಮುತುವರ್ಜಿ ತೋರಬೇಕಿದೆ

● ಎಚ್.ಕೆ.ಶರತ್


ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಸರ್ಕಾರಿ ಕೋಟಾದ ಎಂಜಿನಿಯರಿಂಗ್ ಸೀಟುಗಳ ಹಂಚಿಕೆ ಮತ್ತು ಪ್ರವೇಶಾತಿಯ ಮೊದಲ ಸುತ್ತಿನ ಪ್ರಕ್ರಿಯೆ ಈಗಾಗಲೇ ಮುಗಿದಿದೆ. ಕೆಇಎ ಇದೇ ನಾಲ್ಕರಂದು ಪ್ರಕಟಿಸಿರುವ, 2023-24ನೇ ಸಾಲಿನಲ್ಲಿ ಲಭ್ಯವಿರುವ ಸೀಟುಗಳ ವಿವರ ಗಮನಿಸಿದರೆ, ಎಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಕಾಲೇಜುಗಳ ಪಾತ್ರ ಅದೆಷ್ಟು ನಗಣ್ಯವಾಗಿದೆ ಎಂಬುದರ ಅರಿವಾಗುತ್ತದೆ.

ರಾಜ್ಯದಲ್ಲಿ 21 ಸರ್ಕಾರಿ, 8 ಅನುದಾನಿತ ಹಾಗೂ 180ಕ್ಕೂ ಹೆಚ್ಚು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿವೆ. ಖಾಸಗಿ ಕಾಲೇಜುಗಳು ಬೇಡಿಕೆ-ಪೂರೈಕೆ ಎಂಬ ಮಾರುಕಟ್ಟೆ ಸೂತ್ರದ ಅನುಸಾರವಾಗಿ, ವಿದ್ಯಾರ್ಥಿಗಳು ಸೇರಲು ಇಚ್ಛಿಸುವ ಹೊಸ ಕೋರ್ಸ್‌ಗಳನ್ನು ತೆರೆಯಲು ಹಾಗೂ ಈಗಾಗಲೇ ಇರುವ ಕೋರ್ಸುಗಳಲ್ಲಿನ ಸೀಟುಗಳನ್ನು ಹೆಚ್ಚಿಸಲು ಮುತುವರ್ಜಿ ತೋರುತ್ತಿವೆ. ಆದರೆ, ಸರ್ಕಾರಿ ಕಾಲೇಜುಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಇನ್ನಿಲ್ಲದ ಒತ್ತು ನೀಡಲಾಗುತ್ತಿದೆ.

ಮೂಲ (ಕೋರ್) ವಿಭಾಗಗಳೆಂದು ಕರೆಯಲಾಗುವ ಮೆಕ್ಯಾನಿಕಲ್, ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ಗೆ ಹಿಂದಿನ ಐದಾರು ವರ್ಷಗಳಿಂದ ಬೇಡಿಕೆ ಕುಸಿದು, ಕಂಪ್ಯೂಟರ್ ಸೈನ್ಸ್ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಉಪವಿಭಾಗಗಳಾದ ಮಾಹಿತಿ ವಿಜ್ಞಾನ, ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್, ಡೇಟಾ ವಿಜ್ಞಾನಕ್ಕೆ ಬೇಡಿಕೆ ಹೆಚ್ಚುತ್ತಿದೆ. ಎಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿನ ಪಲ್ಲಟಕ್ಕೆ ಬಹುಬೇಗನೆ ಸ್ಪಂದಿಸತೊಡಗಿದ ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು, ಬೇಡಿಕೆ ಇರುವ ಹೊಸ ವಿಭಾಗಗಳನ್ನು ತೆರೆಯಲು ಇನ್ನಿಲ್ಲದ ಉತ್ಸಾಹ ತೋರುತ್ತಿವೆ. ಖಾಸಗಿ ಕಾಲೇಜುಗಳಲ್ಲಿನ ಕಂಪ್ಯೂಟರ್ ಸೈನ್ಸ್ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಕೋರ್ಸ್‌ಗಳಲ್ಲಿನ ಸೀಟುಗಳು ಹಿಂದಿನ ಐದಾರು ವರ್ಷಗಳಲ್ಲಿ ಮೂರ್ನಾಲ್ಕು ಪಟ್ಟು ಹೆಚ್ಚಿದ್ದರೆ, ಸರ್ಕಾರಿ ಕಾಲೇಜುಗಳಲ್ಲಿನ ಸೀಟುಗಳ ಸಂಖ್ಯೆಯಲ್ಲಿ ಏರಿಳಿತವೇ ಆಗಿಲ್ಲ.

ಖಾಸಗಿ ಕಾಲೇಜುಗಳಲ್ಲಿನ ಶೇ 40 ಅಥವಾ 45ರಷ್ಟು ಸೀಟುಗಳನ್ನು 'ಸರ್ಕಾರಿ ಕೋಟಾ' ಎಂದು ಪರಿಗಣಿಸಿ, ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ರ‍್ಯಾಂಕ್ ಆಧರಿಸಿ ಕೆಇಎ ಮೂಲಕ ಹಂಚಲಾಗುತ್ತಿದೆ. 15 ವರ್ಷಗಳ ಹಿಂದೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿನ ವಾರ್ಷಿಕ ಶುಲ್ಕ ₹ 18 ಸಾವಿರದ ಆಸುಪಾಸಿನಲ್ಲಿದ್ದರೆ, ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ವಾರ್ಷಿಕ ಶುಲ್ಕ ₹ 28 ಸಾವಿರದ ಆಸುಪಾಸಿನಲ್ಲಿತ್ತು. ಈ ಬಾರಿ ಸರ್ಕಾರಿ ಕಾಲೇಜುಗಳ ಸೀಟುಗಳಿಗೆ ₹ 40,110, ಅನುದಾನಿತ ಕಾಲೇಜುಗಳ ಸೀಟುಗಳಿಗೆ ₹ 60,110 ಹಾಗೂ ಖಾಸಗಿ ಕಾಲೇಜುಗಳಲ್ಲಿನ ಸೀಟುಗಳಿಗೆ ₹ 89,214 ಅಥವಾ ₹ 96,905 ಶುಲ್ಕವಿದೆ.

15 ವರ್ಷಗಳ ಹಿಂದೆ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳ ಶುಲ್ಕದ ನಡುವೆ ಬರೀ ಹತ್ತು ಸಾವಿರ ರೂಪಾಯಿಗಳ ಅಂತರವಿದ್ದರೆ, ಇಂದು ₹ 50 ಸಾವಿರದಿಂದ 60 ಸಾವಿರ ರೂಪಾಯಿಯ ಅಂತರವಿದೆ. ಇದರಿಂದ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಶಿಕ್ಷಣ ಕೈಗೆಟುಕದಷ್ಟು ದುಬಾರಿಯಾಗಿ ಪರಿಣಮಿಸುತ್ತಿದೆ. ಇರುವುದರಲ್ಲೇ ಕಡಿಮೆ ಶುಲ್ಕವಿರುವ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳು ಅತ್ಯಲ್ಪ. ಬಡ ವಿದ್ಯಾರ್ಥಿಗಳ ಹಿತ ಕಾಯಬಹುದಾಗಿದ್ದ ಸೂಪರ್ ನ್ಯೂಮರರಿ ಕೋಟಾ (ಎಸ್‌ಎನ್‌ಕ್ಯು), ಅದಕ್ಕೆ ವಿಧಿಸಲಾಗಿರುವ ವಾರ್ಷಿಕ ಆದಾಯ ಮಿತಿಯ ಕಾರಣಕ್ಕೆ ಉಳ್ಳವರಿಗೇ ಹೆಚ್ಚು ಅನುಕೂಲ ಕಲ್ಪಿಸುತ್ತಿದೆ. ಈ ಬಾರಿ ಎಸ್‌ಎನ್‌ಕ್ಯು ಸೀಟು ಪಡೆದವರು ₹ 10,610 ಶುಲ್ಕ ಪಾವತಿಸಿದರೆ ಸಾಕು. ಪೋಷಕರ ವಾರ್ಷಿಕ ಆದಾಯ ₹ 8 ಲಕ್ಷಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿ ಮೆರಿಟ್ ಆಧಾರದಲ್ಲಿ ಎಸ್‌ಎನ್‌ಕ್ಯು ಸೀಟು ಪಡೆಯಲು ಅರ್ಹ. ಹೀಗಾಗಿ ಕಡುಬಡತನದ ಹಿನ್ನೆಲೆ ಹೊಂದಿರುವ ವಿದ್ಯಾರ್ಥಿಗಳಿಗಿಂತ ಇತರರೇ ಈ ಕೋಟಾದ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಪಾಲಿಗೆ ಎಸ್‌ಎನ್‌ಕ್ಯು ಬಿಟ್ಟರೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿನ ಸೀಟುಗಳಷ್ಟೇ ಆಸರೆ.



ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುತ್ತಿರುವ ವಿದ್ಯಾರ್ಥಿ ವೇತನ ತಕ್ಕಮಟ್ಟಿಗೆ ನೆರವಾಗುತ್ತಿದೆ. ಆದರೆ, ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿ ವೇತನದ ಮೂರ್ನಾಲ್ಕು ಪಟ್ಟು ಶುಲ್ಕ ಪಾವತಿಸಬೇಕಿರುವುದರಿಂದ ಇದು ಕೂಡ ಪೂರ್ಣ ಪ್ರಮಾಣದಲ್ಲಿ ನೆರವಿಗೆ ಬರುತ್ತಿಲ್ಲ.

ಮೂಲಸೌಕರ್ಯ ಕಲ್ಪಿಸುವುದೂ ಸೇರಿದಂತೆ ಕಾಲೇಜುಗಳ ನಿರ್ವಹಣೆಗೆ ಬೇಕಿರುವ ಆರ್ಥಿಕ ಸಂಪನ್ಮೂಲ ಹೊಂದಿಸಲು ಖಾಸಗಿ ಕಾಲೇಜುಗಳು ಶುಲ್ಕ ಹೆಚ್ಚಳದ ಮೊರೆ ಹೋಗುತ್ತಿವೆ. ಬಡ ವಿದ್ಯಾರ್ಥಿಗಳ ಹಿತ ಗಣನೆಗೆ ತೆಗೆದುಕೊಂಡು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಸೀಟುಗಳ ಸಂಖ್ಯೆ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ಮುತುವರ್ಜಿ ತೋರಬೇಕಿದೆ. ಇಲ್ಲವಾದರೆ, ಬಡತನದ ಕಾರಣಕ್ಕೆ ಬಹಳಷ್ಟು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಶಿಕ್ಷಣದಿಂದ ವಿಮುಖರಾಗಲಿದ್ದಾರೆ.

ವಾಚಕರ ವಾಣಿ

ವಲಯ ಕ್ರೀಡಾಕೂಟ: ಬೇಕು ಬಂದೋಬಸ್ತ್!

ಶಿಕ್ಷಣ ಇಲಾಖೆ ಶಾಲಾ ಮಕ್ಕಳಿಗಾಗಿ ಪ್ರತಿವರ್ಷ ಕ್ರೀಡಾಕೂಟಗಳನ್ನು ನಡೆಸುತ್ತದೆ. ಅವುಗಳನ್ನು ನೋಡಲು ಬರುವ ಶಾಲೆಗಳ ಊರಿನ ಕೆಲವರು ತಮ್ಮ ಶಾಲೆಯ ಮಕ್ಕಳೇ ಗೆಲ್ಲಬೇಕೆಂದು, ನಿರ್ಣಾಯಕರು ನೀಡುವ ತೀರ್ಮಾನ ವಿರೋಧಿಸಿ ಹಲವು ಸಂದರ್ಭಗಳಲ್ಲಿ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗುತ್ತಾರೆ. ಇದರಿಂದ ಮಕ್ಕಳು ಭಯದಲ್ಲೇ ಆಡಬೇಕಾಗುತ್ತದೆ. ದೈಹಿಕ ಶಿಕ್ಷಣ ಶಿಕ್ಷಕರಲ್ಲಿ ಹಲ್ಲೆಗೊಳಗಾಗುವಭಯ ಕಂಡುಬರುತ್ತದೆ. ವಲಯ ಮಟ್ಟದ ಶಾಲಾ ಕ್ರೀಡಾಕೂಟಗಳನ್ನು ಸೂಕ್ತ ಬಂದೋಬಸ್ತ್‌ನಲ್ಲಿ ನಡೆಸುವುದು ಸೂಕ್ತ.

ರಾಧಾ ಅಶೋಕ, ಚನ್ನಳ್ಳಿ, ಹಿರೇಕೆರೂರು

ಜಂಟಿ ಖಾತೆಗೇಕೆ ನಾಮನಿರ್ದೇಶನದ ಗೊಡವೆ?

ಮ್ಯೂಚುವಲ್ ಫಂಡ್ ಹೂಡಿಕೆ, ಡಿಮ್ಯಾಟ್ ಖಾತೆ, ಷೇರು ವಹಿವಾಟಿನ ಟ್ರೇಡಿಂಗ್ ಖಾತೆಯಂತಹ ಕಡೆ ಖಾತೆದಾರ ಮರಣ ಹೊಂದಿದರೆ ಮುಂದೆ ವಾರಸುದಾರನಿಗೆ ಯಾವ ತೊಂದರೆಯೂ ಇಲ್ಲದೆ ಅದೇ ಖಾತೆಯಲ್ಲಿರುವ ಮೊತ್ತ ದೊರಕಲು ಅನುಕೂಲವಾಗುವಂತೆ, ನಾಮ ನಿರ್ದೇಶನ (ನಾಮಿನೇಶನ್) ಮಾಡುವುದನ್ನು ಅಕ್ಟೋಬರ್ 1ರಿಂದ ಕಡ್ಡಾಯ ಮಾಡಲಾಗಿದೆ. ಉದ್ದೇಶವೇನೋ ಸರಿಯಾಗಿಯೇ ಇದೆ. ಆದರೆ ಜಂಟಿ ಖಾತೆಗಳಲ್ಲಿ, ಒಬ್ಬ ಖಾತೆದಾರ ಮರಣ ಹೊಂದಿದರೆ, ಬದುಕುಳಿದ ಇನ್ನೊಬ್ಬ ಖಾತೆದಾರ ಯಾವುದೇ ತೊಂದರೆ ಇಲ್ಲದೆ ಖಾತೆಯನ್ನು ಮುಂದುವರಿಸಿಕೊಂಡು ಹೋಗಬಹುದು. ಹೀಗಿದ್ದರೂ ಜಂಟಿ ಖಾತೆಗಳಿಗೂ ನಾಮ ನಿರ್ದೇಶನದ ಬಲವಂತ ಯಾಕೆ? ಹಣಕಾಸು ಇಲಾಖೆ ಹಾಗೂ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ ಇತ್ತ ಗಮನಹರಿಸಿ, ಜಂಟಿ ಖಾತೆದಾರರಿಗೆ ನಾಮನಿರ್ದೇಶನವನ್ನು ಕಡ್ಡಾಯಗೊಳಿಸದಿರುವಂತೆ ಸುತ್ತೋಲೆ ಹೊರಡಿಸಬೇಕಾಗಿದೆ.

ಬಿ.ಎನ್.ಭರತ್, ಬೆಂಗಳೂರು

ರೈಲ್ವೆ ಪ್ಲಾಟ್‌ಫಾರಂ ಗೊಂದಲ ಬಗೆಹರಿಯಲಿ

ರಾಯಚೂರು ರೈಲು ನಿಲ್ದಾಣದಲ್ಲಿ ಒಂದು ನಿಯಮವಿದೆ. ವಾಡಿ ಕಡೆಯಿಂದ ಬರುವ ರೈಲುಗಳು ಒಂದನೆಯ ಪ್ಲಾಟ್‌ಫಾರಂಗೆ ಹಾಗೂ ಗುಂತಕಲ್ ಕಡೆಯಿಂದ ಬರುವ ರೈಲುಗಳು ಮೂರನೆಯ ಪ್ಲಾಟ್‌ಫಾರಂಗೆ ಬರುತ್ತವೆ. ಪ್ರಯಾಣಿಕರು ಗೊಂದಲಕ್ಕೆ ಆಸ್ಪದವಿಲ್ಲದಂತೆ, ಉದ್ಘೋಷಣೆಗಾಗಿ ಕಾಯದೆ ಆಯಾ ಪ್ಲಾಟ್‌ಫಾರಂನಲ್ಲಿ ಇರುತ್ತಾರೆ. ಆದರೆ, ಕಲಬುರಗಿ ರೈಲು ನಿಲ್ದಾಣದಲ್ಲಿ ಯಾವ ರೈಲು ಯಾವ ಪ್ಲಾಟ್‌ಫಾರಂಗೆ ಬರುತ್ತದೆ ಎಂದು ಗೊತ್ತಾಗುವುದು ಕೊನೇ ಗಳಿಗೆಯ ಉದ್ಘೋಷಣೆಯಿಂದ. ಹೀಗಾಗಿ, ಪ್ರಯಾಣಿಕರ ವಿಪರೀತ ದಟ್ಟಣೆಯ ಕಾರಣದಿಂದ ಮಹಿಳೆಯರು, ಚಿಕ್ಕ ಮಕ್ಕಳು, ಹಿರಿಯ ನಾಗರಿಕರು ಪ್ಲಾಟ್‌ಫಾರಂ ತಲುಪಲು ಸಾಹಸ ಪಡಬೇಕಾದುದು ಅನಿವಾರ್ಯ. ಸೋಲಾಪುರದ ವಿಭಾಗೀಯ ವ್ಯವಸ್ಥಾಪಕರು ರಾಯಚೂರಿನಲ್ಲಿರುವ ಪ್ಲಾಟ್‌ಫಾರಂ ಪದ್ಧತಿಯನ್ನು ಇಲ್ಲೂ ಜಾರಿಗೆ ತಂದು ಜನರಿಗೆ ಅನುಕೂಲ ಮಾಡಿಕೊಡಲಿ.

ವೆಂಕಟೇಶ ಮುದಗಲ್, ಕಲಬುರಗಿ

ಮಕ್ಕಳ ಸ್ವಾಭಿಮಾನಕ್ಕೆ ಧಕ್ಕೆ ತಾರದಿರಿ

ಉತ್ತರಪ್ರದೇಶದ ಗ್ರಾಮವೊಂದರಲ್ಲಿ ಹೋಂವರ್ಕ್ ಮಾಡದ ಮುಸ್ಲಿಂ ವಿದ್ಯಾರ್ಥಿಗೆ ಶಿಕ್ಷಕಿಯೊಬ್ಬರು ಇತರ ಮಕ್ಕಳಿಂದ ಕಪಾಳಮೋಕ್ಷ ಮಾಡಿಸಿದ ಪ್ರಕರಣದ ವಿಡಿಯೊ ಎಲ್ಲೆಡೆ ಹರಿದಾಡಿದೆ. ಮಕ್ಕಳಿಗೆ ಬುದ್ಧಿ ಕಲಿಸಲು ಆ ರೀತಿ ಮಾಡಿದರೂ ಅದು ತಪ್ಪು. ಈ ರೀತಿ ಮಾಡಿದಾಗ ಅದರಿಂದ ಮಕ್ಕಳ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗಿ ಅವರಿಗೆ ಅವಮಾನ ಮಾಡಿದಂತಾಗುತ್ತದೆ. ಅದರಿಂದ ಸೂಕ್ಷ್ಮ ಮನಸ್ಸಿನ ಮಕ್ಕಳ ಮೇಲೆ ಅದು ನಕಾರಾತ್ಮಕ ಪರಿಣಾಮ ಬೀರುವ ಸಂಭವ ಇರುತ್ತದೆ.

ಇಲ್ಲೊಂದು ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಶಾಲೆಗಳಲ್ಲಿ ಮೊಬೈಲ್ ತೆಗೆದುಕೊಂಡು ಹೋಗಿ ಆ ವಿಡಿಯೊವನ್ನು ಮಾಡಿದ್ದಾದರೂ ಹೇಗೆ? ಎರಡನೇ ತರಗತಿಯ ಮಕ್ಕಳಿಗೆ ಕೊಠಡಿಯೊಳಗೆ ಮೊಬೈಲ್ ತೆಗೆದುಕೊಂಡು ಹೋಗಲು ಅಲ್ಲಿ ಅವಕಾಶವಿದೆಯೇ? ಅಥವಾ ಆ ಶಿಕ್ಷಕಿಗೆ ಆಗದ ಇತರ ಶಿಕ್ಷಕರು ಈ ರೀತಿಯ ದುರುದ್ದೇಶದಿಂದ ಅವರನ್ನು ಸಿಕ್ಕಿಸುವ ಪ್ರಯತ್ನ ಮಾಡಿದ್ದಾರೆಯೇ? ವೃತ್ತಿವೈಷಮ್ಯ ಎಂಬುದು ಈ ರೀತಿಯ ಕಾರ್ಯಗಳನ್ನು ಮಾಡಿಸುವುದು ಸಹಜ. ಈ ಬಗ್ಗೆ ಸೂಕ್ತ ತನಿಖೆ ನಡೆದರೆ ಸತ್ಯಸಂಗತಿ ಹೊರಬರಲು ಸಾಧ್ಯ.

ಮಲ್ಲತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಪಕ್ಷಿಗಳ ಉಳಿವು ನಮ್ಮ ಉಳಿವು

ದೇಶದಲ್ಲಿ ಹಿಂದಿನ 30 ವರ್ಷಗಳಲ್ಲಿ ಶೇ 60ರಷ್ಟು ಪಕ್ಷಿ ಪ್ರಭೇದಗಳ ಸಂಖ್ಯೆಯಲ್ಲಿ ಕುಸಿತವಾಗಿದೆ ಎಂದು ಪಕ್ಷಿವೀಕ್ಷಕರು ನೀಡಿದ ದತ್ತಾಂಶ ವರದಿ ಹೇಳಿದೆ (ಪ್ರ.ವಾ., ಆ. 26). ಇದು ಖಂಡಿತವಾಗಿಯೂ ಮನುಷ್ಯ ಕುಲಕ್ಕೆ ಆತಂಕದ ಸಂಗತಿಯಾಗಿದೆ. ಈ ಹಿಂದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೊಸಲ್ಫಾನ್ ಕ್ರಿಮಿನಾಶಕದ ವಿಪರೀತ ಸಿಂಪಡಣೆಯಿಂದಾಗಿ ಗ್ರಾಮವೊಂದರಲ್ಲಿ ಅಂಗವಿಕಲ ಮಕ್ಕಳ ಜನನವಾದ ದುರಂತ ಉದಾಹರಣೆ ನಮ್ಮ ಕಣ್ಮುಂದೆ ಇರುವುದನ್ನು ನಾವು ಮರೆಯಬಾರದು. ಈಗ ಪಕ್ಷಿಸಂಕುಲ ನಾಶಕ್ಕೆ ಅಂಥದ್ದೇ ನಾನಾ ಬಗೆಯ ಕ್ರಿಮಿನಾಶಕಗಳ ಬಳಕೆ ಕಾರಣವಾಗಿರಬಹುದು. ಅದರಲ್ಲೂ ಭತ್ತದ ಗದ್ದೆಗಳಲ್ಲಿ ವಿಪರೀತ ಕ್ರಿಮಿನಾಶಕಗಳ ಬಳಕೆ ಆಗುತ್ತಿದೆ. ಆ ಗದ್ದೆಗಳ ನೀರು ಕುಡಿಯುವ ಪಕ್ಷಿಗಳು ಸಾವನ್ನಪ್ಪುತ್ತಿವೆ. ಹಾಗೆಯೇ ದಾಳಿಂಬೆ ತೋಟಗಳಿಗೆ ಹೊದಿಸುವ ಬಲೆಗಳಲ್ಲಿ ಸಿಲುಕುವ ಅಸಂಖ್ಯಾತ ಪಕ್ಷಿಗಳು ನಿತ್ಯವೂ ಸಾವನ್ನಪ್ಪುತ್ತಿವೆ. ಹೀಗಾಗಿ ಪಕ್ಷಿಗಳ ಮಾರಣಹೋಮ ನಿತ್ಯ ನಡೆದಿದೆ.

ಪಕ್ಷಿಗಳು ನಿಜಕ್ಕೂ ರೈತರಿಗೆ ಉಪಕಾರಿಯಾಗಿವೆ. ಅವು ಎಲ್ಲಾ ಬೆಳೆಗಳ ಪರಾಗಸ್ಪರ್ಶಕ್ಕೆ ನೆರವಾಗುತ್ತವೆ. ಅಷ್ಟೇ ಏಕೆ, ಅವು ನಮ್ಮ ಆರೋಗ್ಯಕರ ವಾತಾವರಣದ ಜೀವಂತ ಸಾಕ್ಷಿಯಾಗಿವೆ. ಅವಿಲ್ಲದೆ ನಾವಿಲ್ಲ. ಸರ್ಕಾರದ ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆ ಮನಸ್ಸು ಮಾಡಿದರೆ ಈ ದುರಂತ ತಪ್ಪಿಸಬಹುದು. ಈ ದಿಕ್ಕಿನಲ್ಲಿ ಸರ್ಕಾರ ಕಣ್ತೆರೆಯಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅನ್ವರ್ಥನಾಮ!


ನಮ್ಮ ಹೆಮ್ಮೆಯ
ಇಸ್ರೊ ಅಧ್ಯಕ್ಷರು
ಸೋಮನಾಥ...
ಸೋಮನೆಂದರೆ ಚಂದ್ರ!
ಹೆಸರಿಗೆ ತಕ್ಕಂತೆ
ಯಶಸ್ವಿಯಾಗಿಬಿಟ್ಟರು
ಮಾಡಿಸಿ ಚಂದ್ರಯಾನ!


ಮ.ಗು.ಬಸವಣ್ಣ
ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಕೈಗೆಟಕುವ ಮನೆ’ಗಳಿಗೆ ಬಡ್ಡಿಯೇ ದುಬಾರಿ!

• ವಿಜಯ್ ಜೋಷಿ





2023ರ ಮೊದಲ ಆರು ತಿಂಗಳ ಅವಧಿಯಲ್ಲಿ ದೇಶದ ಮನೆ ಮಾರುಕಟ್ಟೆಯಲ್ಲಿ ‘ಕೈಗೆಟಕುವ ದರ’ದ ಮನೆಗಳ ಮಾರಾಟವು ಕುಸಿದಿದೆ. ಹಣದುಬ್ಬರದ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಹೆಚ್ಚಿಸುತ್ತ ಸಾಗಿದೆ. ಕೈಗೆಟಕುವ ದರಕ್ಕೆ ಮನೆ ಅಥವಾ ಅಪಾರ್ಟ್‌ಮೆಂಟ್ ನಿರ್ಮಿಸಲು ಅಗತ್ಯವಿರುವ ಜಮೀನಿನ ಖರೀದಿ ಮೌಲ್ಯ ಹೆಚ್ಚಾಗಿದೆ. ಇಂತಹ ಮನೆಗಳನ್ನು ಕೊಳ್ಳುವ ವರ್ಗದವರ ಖರೀದಿ ಸಾಮರ್ಥ್ಯ ಕಡಿಮೆ ಆಗಿದೆ... ಇವೆಲ್ಲವೂ ಕೈಗೆಟಕುವ ಮನೆಗಳ ಮಾರಾಟ ಕುಸಿತದ ಹಿಂದೆ ಇರುವ ಕಾರಣಗಳು.

ಕೈಗೆಟಕುವ ದರದ ವರ್ಗಕ್ಕೆ ಸೇರಿದ ಮನೆಗಳ ಖರೀದಿ ಕಡಿಮೆ ಆಗಿರುವುದು ಮಾತ್ರವೇ ಅಲ್ಲದೆ, ಬಡ್ಡಿ ದರ ಏರಿಕೆಯ ಇನ್ನೊಂದು ತೀರಾ ಕೆಟ್ಟ ಪರಿಣಾಮ ಇದೆ. ಅದು, ಕೈಗೆಟಕುವ ದರದ ಮನೆಯನ್ನು ಸಾಲ ಮಾಡಿ ಖರೀದಿಸಿದವರಲ್ಲಿ ಕೆಲವರು ಸಾಲ ತೀರಿಸುವ ಹೊತ್ತಿನಲ್ಲಿ ಅಸಲು ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಬಡ್ಡಿ ತೀರಿಸಲಿಕ್ಕಾಗಿ ವಿನಿಯೋಗಿಸಿರುತ್ತಾರೆ!

ಕೈಗೆಟಕುವ ದರದ ಮನೆಗಳನ್ನು ಖರೀದಿಸುವ ವರ್ಗವು ಕೋವಿಡ್ ಸಾಂಕ್ರಾಮಿಕದ ಪರಿಣಾಮವಾಗಿ ಹಣಕಾಸಿನ ತೀವ್ರ ತೊಂದರೆಗೆ ಸಿಲುಕಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ನಡೆಸಿದ ಅಧ್ಯಯನ ವರದಿಯು 2022–23ನೆಯ ಆರ್ಥಿಕ ವರ್ಷದ ಕೊನೆಯಲ್ಲಿ ಹೇಳಿತ್ತು. ‘ಈ ವರ್ಗದ ಜನ ಮನೆ ಖರೀದಿಸುವುದನ್ನು ಮುಂದೂಡಿ, ಬಾಡಿಗೆ ಮನೆಯಲ್ಲಿ ವಾಸಿಸುವುದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಕೂಡ ಆ ವರದಿ ಹೇಳಿತ್ತು. ₹40 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಬೆಲೆಯ ಮನೆಗಳನ್ನು ‘ಕೈಗೆಟಕುವ ದರದ ಮನೆಗಳು’ ಎಂದು ವ್ಯಾಖ್ಯಾನಿಸಲಾಗಿದೆ. ಜಮೀನು ಮಾತ್ರವೇ ಅಲ್ಲದೆ, ಮನೆ ನಿರ್ಮಾಣದಲ್ಲಿ ಅಗತ್ಯ ವಸ್ತುಗಳಾದ ಸಿಮೆಂಟ್, ಉಕ್ಕು ಬೆಲೆ ಹೆಚ್ಚಳ ಮತ್ತು ಕಾರ್ಮಿಕರ ಕೂಲಿ ಏರಿಕೆಯು ಕೂಡ ಕೈಗೆಟಕುವ ದರದ ಮನೆಗಳನ್ನು ನಿರ್ಮಿಸುವುದನ್ನು ಡೆವಲಪರ್‌ಗಳ ಪಾಲಿಗೆ ಕಷ್ಟದ ಕೆಲಸವನ್ನಾಗಿಸಿದೆ.

‘ಬೇರೆ ವರ್ಗದ ಮನೆಗಳ ಮಾರಾಟವು ಈಚಿನ ಎರಡು ವರ್ಷಗಳಲ್ಲಿ ಚೇತರಿಕೆ ಕಂಡುಕೊಂಡಿದ್ದರೂ ಕೈಗೆಟಕುವ ದರದ ಮನೆಗಳ ಮಾರಾಟವು ಸುಧಾರಿಸಿಲ್ಲ. ಈ ವರ್ಗದ ಮನೆಗಳನ್ನು ಬಯಸುತ್ತಿದ್ದವರು ಈಗ ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಡೆವಲಪರ್‌ಗಳು ಕೂಡ ಈ ವರ್ಗದ ಮನೆಗಳ ನಿರ್ಮಾಣವನ್ನು ಕಡಿಮೆ ಮಾಡಿಬಿಟ್ಟಿದ್ದಾರೆ’ ಎಂದು ಅನರಾಕ್ ಅಧ್ಯಯನ ವರದಿ ಹೇಳಿದೆ.

ಕೋವಿಡ್ ನಂತರದಲ್ಲಿ ಭಾರತದ ಅರ್ಥ ವ್ಯವಸ್ಥೆಯು ಇಂಗ್ಲಿಷ್‌ನ ‘ಕೆ’ ಅಕ್ಷರದ ಮಾದರಿಯಲ್ಲಿ ಚೇತರಿಕೆ ಕಂಡುಕೊಂಡಿದೆ. ಅಂದರೆ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿದ್ದಾರೆ. ಬಡವರು ಮತ್ತಷ್ಟು ಬಡವರಾಗಿದ್ದಾರೆ ಎಂಬ ವಾದವೊಂದು ಇದೆ. ಮನೆ ಮಾರುಕಟ್ಟೆಯು ಕೂಡ ಈ ವಾದವನ್ನು ಪುಷ್ಟೀಕರಿಸುವಂತೆ ಇದೆ. 2018ರಿಂದ ಈಚೆಗೆ ಐಷಾರಾಮಿ ಮನೆಗಳ ಮೌಲ್ಯವು ದೇಶದ ಏಳು ನಗರಗಳಲ್ಲಿ ಸರಾಸರಿ ಶೇ 24ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಕೈಗೆಟಕುದ ದರದ ವರ್ಗಕ್ಕೆ ಸೇರಿದ ಮನೆಗಳ ಮೌಲ್ಯದಲ್ಲಿ ಆಗಿರುವ ಸರಾಸರಿ ಹೆಚ್ಚಳ ಶೇ 15ರಷ್ಟು ಮಾತ್ರ. ಅಂದರೆ, ಐಷಾರಾಮಿ ಮನೆಗಳಿಗೆ ಬೇಡಿಕೆ ಹೆಚ್ಚಿದೆ.

ಎರಡು ವರ್ಷಗಳ ಹಿಂದಿನ ಸಂದರ್ಭಕ್ಕೆ ಹೋಲಿಸಿ ನೋಡಿದರೆ, ಕೈಗೆಟಕುವ ದರದ ಮನೆಗಳನ್ನು ಖರೀದಿಸಲು ಸಾಲ ಮಾಡಿದ್ದವರು ಅದನ್ನು ತೀರಿಸಲು, ಶೇಕಡ 20ರಷ್ಟು ಹೆಚ್ಚು ಇಎಂಐ ಕಟ್ಟುತ್ತಿದ್ದಾರೆ. ಏಕೆಂದರೆ ₹30 ಲಕ್ಷದವರೆಗಿನ ಗೃಹ ಸಾಲಗಳ ಮೇಲಿನ ಬಡ್ಡಿ ದರವು (ರೆಪೊ ದರಕ್ಕೆ ಹೊಂದಿಕೊಂಡಿರುವ ಬಡ್ಡಿ ದರ) 2021ರ ಮಧ್ಯ ಭಾಗದಲ್ಲಿ ಶೇ 6.7ರಷ್ಟು ಇದ್ದಿದ್ದು, ಈಗ ಸರಿಸುಮಾರು ಶೇ 9.15ಕ್ಕೆ ಏರಿಕೆ ಕಂಡಿದೆ.

‘ಒಟ್ಟು ಮನೆಗಳ ಮಾರಾಟದಲ್ಲಿ ಕೈಗೆಟಕುವ ಮನೆಗಳ ಮಾರಾಟ ಪ್ರಮಾಣವು 2023ನೆಯ ಇಸವಿಯ ಮೊದಲ ಆರು ತಿಂಗಳಲ್ಲಿ ಶೇಕಡ 20ರಷ್ಟಕ್ಕೆ ಕುಸಿದಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ವರ್ಗದ ಮನೆಗಳ ಮಾರಾಟವು ಶೇ 31ರಷ್ಟು ಪಾಲು ಹೊಂದಿತ್ತು. 2023ರ ಮೊದಲ ಆರು ತಿಂಗಳಲ್ಲಿ ಏಳು ಪ್ರಮುಖ ನಗರಗಳಲ್ಲಿ ಮಾರಾಟವಾದ ಒಟ್ಟು 2.29 ಲಕ್ಷ ಮನೆಗಳ ಪೈಕಿ 46,650 ಮನೆಗಳು (ಶೇ 20ರಷ್ಟು) ಮಾತ್ರ ಕೈಗೆಟಕುವ ದರದ ವರ್ಗಕ್ಕೆ ಸೇರಿದವು. 2022ರ ಮೊದಲ ಆರು ತಿಂಗಳಲ್ಲಿ ಮಾರಾಟವಾದ ಒಟ್ಟು 1.84 ಲಕ್ಷ ಮನೆಗಳಲ್ಲಿ ಕೈಗೆಟಕುವ ದರದ ವರ್ಗಕ್ಕೆ ಸೇರಿದ ಮನೆಗಳ ಸಂಖ್ಯೆ 57,060 (ಶೇ 31) ಆಗಿತ್ತು’ ಎಂದು ಅನರಾಕ್ ಅಧ್ಯಕ್ಷ ಅನುಜ್ ಪುರಿ ಅವರು ಇನ್ನೊಂದು ವರದಿಯಲ್ಲಿ ಹೇಳಿದ್ದಾರೆ.

ಪ್ರಮುಖ ನಗರಗಳಲ್ಲಿ ಜಮೀನಿನ ಬೆಲೆಯು ತೀವ್ರ ಪ್ರಮಾಣದಲ್ಲಿ ಏರಿಕೆ ಕಾಣುತ್ತಿದೆ. ಭಾರಿ ಬೆಲೆ ನೀಡಿ ಜಮೀನು ಖರೀದಿಸಿ, ಅಲ್ಲಿ ಕೈಗೆಟಕುವ ದರದ ಮನೆಗಳನ್ನು ನಿರ್ಮಿಸಿ ಮಾರಾಟ ಮಾಡುವುದು ಡೆವಲಪರ್‌ಗಳ ಪಾಲಿಗೆ ಆಕರ್ಷಕ ವಹಿವಾಟಾಗಿ ಉಳಿದಿಲ್ಲ. ಭಾರಿ ಬೆಲೆ ಕೊಟ್ಟು ಖರೀದಿ ಮಾಡಿದ ಜಮೀನಿನಲ್ಲಿ, ಹೆಚ್ಚಿನ ಬೆಲೆಗೆ ಮಾರಾಟ ಆಗುವ ಐಷಾರಾಮಿ ಮನೆಗಳನ್ನು ನಿರ್ಮಿಸುವುದು ಡೆವಲಪರ್‌ಗಳ ಪಾಲಿಗೆ ಹೆಚ್ಚು ಲಾಭದಾಯಕ. ಕೈಗೆಟಕುವ ದರದ ಮನೆಗಳಿಗೆ ಬೇಡಿಕೆ ತಗ್ಗಿದೆ ಎಂಬ ಅಂಶವು ಡೆವಲಪರ್‌ಗಳನ್ನು ಈ ವರ್ಗದ ಮನೆಗಳ ನಿರ್ಮಾಣದಿಂದ ಮತ್ತಷ್ಟು ವಿಮುಖರನ್ನಾಗಿಸಬಹುದು. ನಗರಗಳಿಂದ ಆಚೆಗೆ ತುಸು ಕಡಿಮೆ ಬೆಲೆಗೆ ಜಮೀನು ಸಿಗಬಹುದಾದರೂ, ಮೂಲಸೌಕರ್ಯದ ಕೊರತೆಯ ಕಾರಣದಿಂದಾಗಿ ಅಲ್ಲಿ ನಿರ್ಮಾಣವಾಗುವ ಮನೆಗಳಿಗೆ ಬೇಡಿಕೆ ಹೆಚ್ಚು ಬರದೆ ಇರಬಹುದು ಎಂಬ ಅಂದಾಜು ಡೆವಲಪರ್‌ಗಳಲ್ಲಿ ಇದೆ.

‘ರಿಯಲ್ ಎಸ್ಟೇಟ್ ಬೆಲೆ ಏರಿಕೆಯ ಕಾರಣದಿಂದಾಗಿ ಕೈಗೆಟಕುವ ದರದ ಮನೆಗಳನ್ನು ಖರೀದಿಸುವ ವರ್ಗದವರು ಮನೆ ಖರೀದಿ ತೀರ್ಮಾನವನ್ನು ಕಳೆದೊಂದು ವರ್ಷದಿಂದ ಮುಂದಕ್ಕೆ ಹಾಕುತ್ತಿದ್ದಾರೆ. ಈ ವರ್ಗದ ಮನೆಗಳಿಗೆ ಬೇಡಿಕೆ ಕಡಿಮೆಯಾಗಿದೆ ಎಂದು ಡೆವಲಪರ್‌ಗಳು ಮಧ್ಯಮ ಶ್ರೇಣಿಯ, ಪ್ರೀಮಿಯಂ ವರ್ಗದ ಮತ್ತು ಐಷಾರಾಮಿ ವರ್ಗದ ಮನೆಗಳ ನಿರ್ಮಾಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಈ ವರ್ಗಗಳಿಗೆ ಸೇರಿದ ಮನೆಗಳಿಗೆ ಹೆಚ್ಚು ಬೇಡಿಕೆ ಇದೆ’ ಎಂದು ವರದಿ ಹೇಳಿದೆ.

ಅಸಲಿಗಿಂತ ಬಡ್ಡಿಯೇ ಹೆಚ್ಚು

‘ಕೈಗೆಟಕುವ ದರದ ಮನೆ ಖರೀದಿಸಲು ₹30 ಲಕ್ಷ ಸಾಲ ಮಾಡಿ, 20 ವರ್ಷಗಳ ಮರುಪಾವತಿ ಅವಧಿ ಆಯ್ಕೆ ಮಾಡಿಕೊಂಡು 2021ರ ಜುಲೈ ಹೊತ್ತಿಗೆ ತಿಂಗಳಿಗೆ ಅಂದಾಜು ₹22,700 ಇಎಂಐ ಪಾವತಿ ಮಾಡುತ್ತಿದ್ದವರು, ಈಗ ಬಡ್ಡಿ ಏರಿಕೆಯ ಪರಿಣಾಮವಾಗಿ ಅಂದಾಜು ₹27,300 ಪಾವತಿ ಮಾಡುತ್ತಿದ್ದಾರೆ. ಅಂದರೆ ಅವರ ಇಎಂಐ ಮೊತ್ತವು ತಿಂಗಳಿಗೆ ₹4,600ರಷ್ಟು ಹೆಚ್ಚಾಗಿದೆ. ಇಎಂಐ ಮೊತ್ತದಲ್ಲಿ ಆಗಿರುವ ಶೇ 20ರಷ್ಟು ಹೆಚ್ಚಳವು ಅವರು ಪಾವತಿ ಮಾಡಬೇಕಿರುವ ಬಡ್ಡಿಯ ಮೊತ್ತ ₹11 ಲಕ್ಷದಷ್ಟು ಹೆಚ್ಚಾಗುವಂತೆ ಮಾಡಿದೆ (ಸಾಲದ ಮರುಪಾವತಿ ಈಗಷ್ಟೇ ಶುರುವಾಗಿದೆ ಎಂದು ಭಾವಿಸಿದರೆ)’ ಎಂದು ಅನರಾಕ್ ಸಂಸ್ಥೆಯ ಸಂಶೋಧನಾ ವಿಭಾಗದ ಪ್ರಾದೇಶಿಕ ನಿರ್ದೇಶಕ ಹಾಗೂ ಮುಖ್ಯಸ್ಥ ಪ್ರಶಾಂತ್ ಠಾಕೂರ್ ಅಂದಾಜಿಸಿದ್ದಾರೆ.



₹30 ಲಕ್ಷ ಸಾಲ ಪಡೆದ ವ್ಯಕ್ತಿಯು ಶೇ 6.7ರ ಬಡ್ಡಿ ದರ ಇದ್ದಾಗ, ಅಸಲು ಮೊತ್ತದ ಮೇಲೆ ಬಡ್ಡಿಯ ರೂಪದಲ್ಲಿ ₹24.5 ಲಕ್ಷ ಪಾವತಿಸಬೇಕಿತ್ತು (20 ವರ್ಷ ಅವಧಿಯಲ್ಲಿ). ಆದರೆ ಈಗ ಬಡ್ಡಿಯು ಶೇ 9.15ಕ್ಕೆ ಹೆಚ್ಚಾಗಿರುವ ಕಾರಣದಿಂದಾಗಿ, ಅಷ್ಟೇ ಅಸಲು ಮೊತ್ತಕ್ಕೆ ಪಾವತಿ ಮಾಡಬೇಕಿರುವ ಬಡ್ಡಿಯ ಮೊತ್ತವು ₹35.5 ಲಕ್ಷಕ್ಕೆ ತಲುಪಿದೆ. ಇಲ್ಲಿ ಸಾಲ ಪಡೆದವನು ಅಸಲು ಮೊತ್ತಕ್ಕಿಂತ ಹೆಚ್ಚು ಮೊತ್ತವನ್ನು ಬಡ್ಡಿಯ ರೂಪದಲ್ಲಿ ಪಾವತಿಸುತ್ತಾನೆ ಎಂದು ಠಾಕೂರ್ ಹೇಳಿದ್ದಾರೆ.

ಮನೆ ಖರೀದಿಸಲು ಹಣಕಾಸು ಸಂಸ್ಥೆಗಳು ಮನೆಯ ಮೌಲ್ಯದ ಶೇಕಡ 80ರವರೆಗೆ ಸಾಲ ನೀಡುತ್ತವೆ. ₹37.5 ಲಕ್ಷದ ಬೆಲೆಯ ಮನೆಗೆ ₹30 ಲಕ್ಷದವರೆಗೆ ಸಾಲ ಸಿಗುತ್ತದೆ. ಇಷ್ಟು ಸಾಲ ಮಾಡಿ ಖರೀದಿಸಿದ ಮನೆಯ ಬಡ್ಡಿ ಪಾವತಿಯೇ ದೊಡ್ಡ ಹೊರೆಯಾದರೆ? ಅಸಲು ಮೊತ್ತಕ್ಕಿಂತ ಬಡ್ಡಿಯೇ ಜಾಸ್ತಿ ಆದರೆ? ಸಾಲವನ್ನು ಹೇಗೋ ತೀರಿಸಬಹುದು. ಆದರೆ ಮುಂದೊಂದು ದಿನ, ಮನೆಯನ್ನು ಮಾರಾಟ ಮಾಡುವ ಸಂದರ್ಭ ಸೃಷ್ಟಿಯಾದರೆ, ಆ ಆಸ್ತಿಯ ಮೌಲ್ಯವರ್ಧನೆಯಿಂದ ಸಿಗುವ ಲಾಭಕ್ಕೆ ಪೆಟ್ಟು ಬೀಳುತ್ತದೆ. ₹30 ಲಕ್ಷ ಸಾಲ ಮಾಡಿ, ಕೈಗೆಟಕುವ ದರದ ಮನೆಯನ್ನು ಖರೀದಿಸಿ, ಅದಕ್ಕೆ 20 ವರ್ಷಗಳ ಅವಧಿಯಲ್ಲಿ ₹35.5 ಲಕ್ಷದಷ್ಟು ಬಡ್ಡಿ ಪಾವತಿಸಿ (ಅಸಲು ಮತ್ತು ಬಡ್ಡಿ ಸೇರಿಸಿ ₹65.5 ಲಕ್ಷ) ಹತ್ತು ವರ್ಷಗಳ ನಂತರ ₹70 ಲಕ್ಷಕ್ಕೆ ಮನೆಯನ್ನು ಮಾರಾಟ ಮಾಡಿದರೆ, ಮಾರಿದ ವ್ಯಕ್ತಿಗೆ ವಾಸ್ತವದಲ್ಲಿ ಲಾಭವೇ ಸಿಗುವುದಿಲ್ಲ. ಏಕೆಂದರೆ, ₹65.5 ಲಕ್ಷ ಸಾಲದ ಮರುಪಾವತಿಗಾಗಿ ವಿನಿಯೋಗ ಆಗಿರುತ್ತದೆ, ಮನೆ ಖರೀದಿಸುವಾಗ ವ್ಯಕ್ತಿ ₹7.5 ಲಕ್ಷವನ್ನು ತನ್ನ ಕೈಯಿಂದ ಕೊಟ್ಟಿರುತ್ತಾನೆ. ಅಂದರೆ, ಒಟ್ಟು ₹73 ಲಕ್ಷ ವಿನಿಯೋಗ ಆಗಿರುತ್ತದೆ.

‘ಅಸಲು ಮೊತ್ತಕ್ಕಿಂತ ಪಾವತಿ ಮಾಡಬೇಕಿರುವ ಬಡ್ಡಿಯು ಹೆಚ್ಚಾಗುವುದು ಸಾಲ ಪಡೆದ ವ್ಯಕ್ತಿಗಾಗಲಿ, ಮನೆ ಮಾರುಕಟ್ಟೆಗಾಗಲಿ ಒಳ್ಳೆಯದಲ್ಲ. ಕೈಗೆಟಕುವ ದರದ ಮನೆಗಳ ಮಾರುಕಟ್ಟೆಯು ಹಳಿತಪ್ಪದಂತೆ ನೋಡಿಕೊಳ್ಳಲು ಈ ಸಮಸ್ಯೆಯ ಬಗ್ಗೆ ಕೇಂದ್ರವು ಮುಂದಿನ ಬಜೆಟ್‌ನಲ್ಲಿ ಅಥವಾ ಅದಕ್ಕೂ ಮೊದಲು ಸೂಕ್ತ ನೀತಿಗಳ ಮೂಲಕ ಗಮನ ನೀಡಬೇಕಿದೆ’ ಎಂದು ಅನರಾಕ್ ವರದಿ ಅಭಿಪ್ರಾಯ ವ್ಯಕ್ತಪಡಿಸಿದೆ.



ವ್ಯಾಖ್ಯಾನ ಬದಲಾಯಿಸಲು ಆಗ್ರಹ

₹40 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ದರದ ಮನೆಗಳು ‘ಕೈಗೆಟಕುವ ದರ’ದ ಮನೆಗಳು ಎಂಬ ವ್ಯಾಖ್ಯಾನದ ಅಡಿಯಲ್ಲಿ ಬರುವುದಿಲ್ಲ. ಹಣದುಬ್ಬರದಲ್ಲಿ ಏರಿಕೆ ಹಾಗೂ ಜನರ ವರಮಾನ ಏರಿಕೆಯ ಕಾರಣವನ್ನುಉಲ್ಲೇಖಿಸಿ ಪ್ರಾವಿಡೆಂಟ್ ಹೌಸಿಂಗ್ ಲಿಮಿಟೆಡ್ ಕಂಪನಿಯ ಸಿಒಒ ಮಲ್ಲಣ್ಣ ಸಾಸಲು ಅವರು ಕೈಗೆಟಕುವ ದರದ ಮನೆ ಎಂಬ ವ್ಯಾಖ್ಯಾನದಲ್ಲಿ ಬದಲಾವಣೆ ತರಬೇಕು ಎಂದು ಒತ್ತಾಯಿಸಿದ್ದರು.

‘ಮನೆ ಖರೀದಿಸಲು ಬಯಸುವವರು 2–ಬಿಎಚ್‌ಕೆ ಮನೆಗಳನ್ನು ಹೆಚ್ಚಾಗಿ ಬಯಸುತ್ತಾರೆ. ಆದರೆ 2–ಬಿಎಚ್‌ಕೆ ಮನೆಗಳನ್ನು ಕೈಗೆಟಕುವ ದರದಲ್ಲಿ (ಅಂದರೆ, ₹40 ಲಕ್ಷಕ್ಕಿಂತ ಕಡಿಮೆ ಬೆಲೆಗೆ) ಕಟ್ಟಲು ಈಗಿನ ಪರಿಸ್ಥಿತಿಯಲ್ಲಿ ಆಗುತ್ತಿಲ್ಲ. ಮನೆ ನಿರ್ಮಾಣಕ್ಕೆ ಅಗತ್ಯವಿರುವ ವಸ್ತುಗಳ ಬೆಲೆಯು ಶೇ 9ರಿಂದ ಶೇ 11ರಷ್ಟು ಹೆಚ್ಚಾಗಿದೆ. ವೆಚ್ಚ ಹೆಚ್ಚಳವನ್ನು ಗಮನದಲ್ಲಿ ಇರಿಸಿಕೊಂಡು, ಕೈಗೆಟಕುವ ದರದ ಮನೆಯ ವ್ಯಾಖ್ಯಾನವನ್ನು ಬದಲಿಸಬೇಕಾಗಿದೆ. ಹಣದುಬ್ಬರ ಹೆಚ್ಚಳವನ್ನು ಪರಿಗಣಿಸಿ, ₹60 ಲಕ್ಷ ಅಥವಾ ₹65 ಲಕ್ಷದವರೆಗಿನ ಬೆಲೆಯ ಮನೆಗಳನ್ನೆಲ್ಲ ಕೈಗೆಟಕುವ ದರದ ಮನೆಗಳು ಎಂಬ ವ್ಯಾಖ್ಯಾನದ ಅಡಿ ತರಬೇಕು’ ಎಂಬುದು ಮಲ್ಲಣ್ಣ ಅವರ ಪ್ರತಿಪಾದನೆ.

ಸಿನಿ ಬಿಟ್ಸ್

ದಿಗಂತ್‌ಗೆ ‘ಪೌಡರ್’ ಹಚ್ಚಲಿರುವ ಶರ್ಮಿಳಾ!



ಶರ್ಮಿಳಾ, ದಿಗಂತ್, ಧನ್ಯ

ದಿಗಂತ್, ಧನ್ಯ ರಾಮಕುಮಾರ್, ಶರ್ಮಿಳಾ ಮಾಂಡ್ರೆ ಮುಖ್ಯಭೂಮಿಕೆಯಲ್ಲಿರುವ ‘ಪೌಡರ್’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಕೆಆರ್‌ಜಿ ಸ್ಟುಡಿಯೋಸ್ ಹಾಗೂ ಟಿವಿಎಫ್ ಮೋಷನ್ ಪಿಕ್ಚರ್ಸ್ ಸಂಸ್ಥೆ ಒಟ್ಟಾಗಿ ನಿರ್ಮಿಸುತ್ತಿರುವ ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡುವ ಮೂಲಕ ನಟ ಕಿಚ್ಚ ಸುದೀಪ್ ಚಿತ್ರೀಕರಣಕ್ಕೆ ಚಾಲನೆ ನೀಡಿದ್ದಾರೆ.

‘ಗುಲ್ಟು’ ಸಿನಿಮಾದ ನಿರ್ದೇಶಕ ಜನಾರ್ದನ್ ಚಿಕ್ಕಣ್ಣ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ‘ಇದೊಂದು ಹಾಸ್ಯಮಯ ಚಿತ್ರವಾಗಿದ್ದು, ಒಂದು ಸಣ್ಣ ಊರಿನ ಯುವಕರಿಗೆ ದೊಡ್ಡ ಪ್ರಮಾಣದ ಕೊಕೇನ್ ಸಿಗುತ್ತದೆ. ಒಂದು ಕಡೆ ಆ ಕೊಕೇನ್‌ಗಾಗಿ ಹುಡುಕಾಟದಲ್ಲಿರುವ ದುಷ್ಕರ ಗುಂಪು. ಇನ್ನೊಂದು ಕಡೆ ಆ ಕೊಕೇನ್ ಮಾರಿ ಶ್ರೀಮಂತರಾಗಬೇಕೆಂಬ ಯುವಕರ ಗುಂಪು. ಮತ್ತೊಂದು ಕಡೆ ತಮ್ಮ ಅಧಿಪತ್ಯ ಸ್ಥಾಪಿಸುವುದಕ್ಕೆ ಪ್ರಯತ್ನಿಸುತ್ತಿರುವ ಒಬ್ಬ ಮಾಸ್ಟರ್ ಮೈಂಡ್. ಈ ಹಾವು-ಏಣಿ ಆಟದಲ್ಲಿ ಗೆಲ್ಲುವವರು ಯಾರು? ಎಂಬುದೇ ಚಿತ್ರ’ ಎಂದರು ನಿರ್ದೇಶಕರು.

ಅನಿರುದ್ಧ ಆಚಾರ್ಯ, ರಂಗಾಯಣ ರಘು, ಅಚ್ಯುತ ಕುಮಾರ್, ರವಿಶಂಕರ ಗೌಡ ಮುಂತಾದವರು ನಟಿಸಿರುವ ಈ ಚಿತ್ರಕ್ಕೆ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ಸೀನ್ ರೋಲ್ಡನ್ ಸಂಗೀತ ಸಂಯೋಜಿಸುತ್ತಿದ್ದಾರೆ. ದೀಪಕ್ ವೆಂಕಟೇಶನ್ ಕಥೆ-ಚಿತ್ರಕಥೆ ಬರೆದಿದ್ದು, ಶಾಂತಿ ಸಾಗರ್ ಅವರ ಛಾಯಾಗ್ರಹಣವಿದೆ.

‘ತುಕ್ರ-ತನಿಯ’ನಿಗೆ ವಿಜಯ್ ಸಾಥ್



ರಾಘು ಶಿವಮೊಗ್ಗ, ದುನಿಯಾ ವಿಜಯ್

ನಟ ಪ್ರವೀಣ್ ತೇಜ್ ಹಾಗೂ ಅಚ್ಯುತ್ ಕುಮಾರ್ ನಟಿಸಿರುತ್ತಿರುವ ನೂತನ ಚಿತ್ರದ ಶೀರ್ಷಿಕೆಯನ್ನು ಇತ್ತೀಚೆಗಷ್ಟೇ ದುನಿಯಾ ವಿಜಯ್ ಬಿಡುಗಡೆಗೊಳಿಸಿದರು. ‘ಚೂರಿಕಟ್ಟೆ’ ಸಿನಿಮಾ ನಿರ್ದೇಶಿಸಿದ್ದ ರಾಘು ಶಿವಮೊಗ್ಗ ಆ್ಯಕ್ಷನ್–ಕಟ್ ಹೇಳುತ್ತಿರುವ ಚಿತ್ರಕ್ಕೆ ‘ತುಕ್ರ-ತನಿಯ’ ಎಂದು ಹೆಸರಿಡಲಾಗಿದೆ.

‘ತುಕ್ರ’ ಎಂದರೆ ಶುಕ್ರವಾರ ಹುಟ್ಟಿದವನು. ‘ತನಿಯ’ ಅಂದರೆ ಶನಿವಾರ ಹುಟ್ಟಿದವನು. ಶುಕ್ರವಾರ-ಶನಿವಾರ ಹುಟ್ಟಿದ ಇಬ್ಬರ ನಡುವಿನ ಕಥಾಹಂದರ ಇದಾಗಿದೆ. ಮಲೆನಾಡಿನ ಗ್ರಾಮೀಣ ಭಾಗದ ಕಥೆಯಾಗಿದ್ದು, ಡಿಸೆಂಬರ್‌ನಿಂದ ಚಿತ್ರೀಕರಣ ಪ್ರಾರಂಭ’ ಎಂದರು ರಾಘು ಶಿವಮೊಗ್ಗ.

ಈ ಚಿತ್ರವನ್ನು ಪದ್ಮಾ ಪಿಕ್ಚರ್ಸ್ ಹಾಗೂ ಗೌರಿ ಟಾಕೀಸ್‌ನಡಿ ನಿರ್ಮಾಣ ಮಾಡಲಾಗುತ್ತಿದ್ದು, ಶಾಂತಿ ಸಾಗರ್ ಛಾಯಾಗ್ರಹಣ, ಕದ್ರಿ ಮಣಿಕಾಂತ್ ಸಂಗೀತ, ಪ್ರಕಾಶ್ ಕಾರಿಂಜ ಸಂಕಲನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಅಮೆರಿಕದ ‘ನ್ಯೂಯಾರ್ಕ್ ಟೈಮ್ಸ್’ ಪತ್ರಿಕೆಯ ಸಂಪಾದಕ ಜೋಸೆಫ್ ಹೋಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು, ಅವರ ವಿದೇಶಿ ನೀತಿಗಳಿಗಾಗಿ ಹೊಗಳಿದ್ದಾರೆ’ ಎಂದು ಹೇಳುವ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ನರೇಂದ್ರ ಮೋದಿ ಅವರ ಮುಖ್ಯ ಉದ್ದೇಶ ಭಾರತವನ್ನು ಉನ್ನತ ಮಟ್ಟಕ್ಕೆ ಏರಿಸುವುದು. ಇವರನ್ನು ನಿಯಂತ್ರಿಸದಿದ್ದರೆ, ಭವಿಷ್ಯದಲ್ಲಿ ಭಾರತವು ಜಗತ್ತಿನಲ್ಲೇ ಶಕ್ತಿಶಾಲಿ ದೇಶವಾಗಲಿದೆ. ಅದು ಅಮೆರಿಕ, ಯೂರೋಪ್, ರಷ್ಯಾ ಮತ್ತು ಜಪಾನ್ ಅನ್ನು ಅಚ್ಚರಿಗೊಳಿಸಲಿದೆ’ ಎಂಬ ವಿವರಗಳು ಪೋಸ್ಟ್‌ನಲ್ಲಿವೆ. ಆದರೆ, ಇದು ಸುಳ್ಳು ಸುದ್ದಿ.



‘ನ್ಯೂಯಾರ್ಕ್ ಟೈಮ್ಸ್’ನ ಸಂವಹನ ವಿಭಾಗದ ನಿರ್ದೇಶಕ ನಿಕೋಲ್ ಟೇಲರ್ ಅವರು ಈ ಬಗ್ಗೆ ಇ–ಮೇಲ್ ಮೂಲಕ ಸ್ಪಷ್ಟನೆ ನೀಡಿದ್ದು, ಇದೊಂದು ಸುಳ್ಳು ಸುದ್ದಿ ಎಂದು ಹೇಳಿದ್ದಾರೆ. ‘ಜೋಸೆಫ್ ಹೋಪ್ ಎಂದು ಹೇಳಿಕೊಂಡು ಬರೆದಿರುವ ಯಾವುದೇ ಪೋಸ್ಟ್‌ಗೂ ನಮ್ಮ ಪತ್ರಿಕೆಗೂ ಸಂಬಂಧವಿಲ್ಲ. ಡೀನ್ ಬ್ಯಾಕ್ವೆಟ್ ನಮ್ಮ ಪತ್ರಿಕೆಯ ಸಂಪಾದಕ. ಭಾರತದ ಕುರಿತು ನಮ್ಮ ವರದಿಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ನೋಡಬಹುದು’ ಎಂದಿದ್ದಾರೆ. ಆದ್ದರಿಂದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಸಂಪಾದಕ ಮೋದಿ ಅವರನ್ನು ಹೊಗಳಿದ್ದಾರೆ ಎನ್ನುವುದು ಸುಳ್ಳು ಸುದ್ದಿ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಅರ್ಥವಾಗದ್ದನ್ನು ಪ್ರಶ್ನೆ ಕೇಳಿ ಅರ್ಥ ಮಾಡಿಕೊಳ್ಳಿ



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಬ್ಬಾತ ಮನೆಯಲ್ಲಿ ತನ್ನ ತಂದೆಯ ಶ್ರಾದ್ಧ ಮಾಡುವಾಗ, ತಾನು ಸಾಕಿದ್ದ ಬೆಕ್ಕು ತೊಂದರೆ ಕೊಡಬಾರದು ಎಂದು ಅದನ್ನು ಕಂಬಕ್ಕೆ ಕಟ್ಟಿ ಶ್ರಾದ್ಧ ಮಾಡಿದನಂತೆ. ಆತ ತೀರಿ ಹೋದ ಮೇಲೆ ಅವನ ಮಗ ಅಪ್ಪನ ಶ್ರಾದ್ಧ ಮಾಡುವ ಸಂದರ್ಭ ಬಂತು. ಮಗನ ಮನೆಯಲ್ಲಿ ಬೆಕ್ಕಿರಲಿಲ್ಲ. ಅಪ್ಪ ಶ್ರಾದ್ಧ ಮಾಡುವಾಗ ಬೆಕ್ಕನ್ನು ಕಟ್ಟಿ ಹಾಕಿ ಶ್ರಾದ್ಧ ಮಾಡಿದ್ದ ಎಂಬ ಕಾರಣಕ್ಕಾಗಿ ಮಗ ಪೇಟೆಗೆ ಹೋಗಿ ಒಂದು ಬೆಕ್ಕನ್ನು ಖರೀದಿಸಿ ತಂದು ಅದನ್ನು ಕಂಬಕ್ಕೆ ಕಟ್ಟಿ, ಶ್ರಾದ್ಧ ಮಾಡಿದನಂತೆ!

ಯಾವುದನ್ನೇ ಆಗಲಿ ನಾವು ಪ್ರಶ್ನಿಸದೇ ಅನುಕರಣೆ ಮಾಡಿದಾಗ ಇಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಎಲ್ಲಾ ಆಚರಣೆಗಳಿಗೂ ಒಂದು ಸಾಂದರ್ಭಿಕ ಕಾರಣವಿರುತ್ತದೆ ಅದೇನೆಂದು ಪ್ರಶ್ನಿಸಿ, ಸರಿಯಾಗಿ ಅನುಸರಣೆ ಮಾಡುವುದು ಸೂಕ್ತ. ಪ್ರಶ್ನಿಸದೇ ಅನುಕರಿಸಿದರೆ ಅದು ಮೂಢನಂಬಿಕೆಯಾಗುತ್ತದೆ. ಹೀಗಾಗಿ ಪ್ರಶ್ನೆ ಮಾಡುವುದು ವ್ಯಕ್ತಿವಿಕಸನದ ಮೂಲಭೂತ ಅಗತ್ಯಗಳಲ್ಲಿ ಒಂದು. ಮಕ್ಕಳಾಗಿದ್ದಾಗ ಹತ್ತು ಹಲವು ಪ್ರಶ್ನೆಗಳನ್ನು ಕೇಳುವ ಮನಸ್ಸು ವಯಸ್ಸಾಗುತ್ತಾ ಬಂದಂತೆ ಈ ಪ್ರಕ್ರಿಯೆಯನ್ನು ನಿಲ್ಲಿಸಿ ಬಿಡುತ್ತದೆ. ದೊಡ್ಡವರಾದ ಮೇಲೆ ನಾವು ಕೇಳೋದು ಒಂದೇ ಪ್ರಶ್ನೆ, ‘ನಮಗ್ಯಾಕ್ರೀ ಬೇಕು ಏನಾದ್ರೂ ಹಾಳಾಗಿ ಹೋಗಲಿ’ ಎಂಬುದು! ಪ್ರಶ್ನಿಸುವುದೆಂದರೆ ವ್ಯವಸ್ಥೆಯ ವಿರುದ್ಧ ಮಾತನಾಡುವುದೆಂದೂ, ಪ್ರವಾಹಕ್ಕೆದುರು ಈಜಿ ಜಯಸಿದವರುಂಟೇ ಎಂದೆಣಿಸಿ ಸುಮ್ಮನಾಗಿ ಬಿಡುತ್ತೇವೆ.

ಪ್ರಶ್ನಿಸುವುದು ಒಂದು ವೈಜ್ಞಾನಿಕ ನಡವಳಿಕೆ. ಈ ನಡುವಳಿಕೆಯಿಂದಲೇ ಎಲ್ಲಾ ಪ್ರಮುಖ ವೈಜ್ಞಾನಿಕ ಸಂಶೋಧನೆ ಮತ್ತು ಆವಿಷ್ಕಾರಗಳು ಘಟಿಸಿದವು ಹಾಗೂ ಘಟಿಸುತ್ತಿವೆ. ಭೂಮಿ ದುಂಡಗಿದೆ ಎಂದು ಆರ್ಕಿಮಿಡಿಸ್ ಹೇಳಿದಾಗ ಅವನು ವ್ಯವಸ್ಥೆ ವಿರೋಧಿ, ಹುಚ್ಚ ಎಂದು ಹಣೆಪಟ್ಟಿ ಕಟ್ಟಲಾಯಿತು. ಮುಂದೆ ಅವನ ಮಾತು ಸತ್ಯವೆಂದು ಸಾಬೀತದಾಗ ಇಡೀ ಜಗತ್ತು ಅವನನ್ನು ದೊಡ್ಡ ವಿಜ್ಞಾನಿ ತತ್ವಜ್ಞಾನಿ ಎಂದು ಗೌರವಿಸಿತು. ಭೂಮಿ ಚಪ್ಪಟೆಯಾಗಿದೆ ಎಂಬ ಜನರ ಸಾಮಾನ್ಯ ನಂಬಿಕೆಯನ್ನು ಆತ ಪ್ರಶ್ನಿಸಿದ್ದರಿಂದಲೇ ಅತ್ಯಂತ ದೊಡ್ಡ ವೈಜ್ಞಾನಿಕ ಸತ್ಯವನ್ನು ಅನಾವರಣಗೊಂಡಿತು.

ಪ್ರಪಂಚದ ಬಹುಪಾಲು ವೈಜ್ಞಾನಿಕ ಸಂಶೋಧನೆಗಳು ಪಾಶ್ಚಿಮಾತ್ಯರ ಕೊಡುಗೆ. ಆದರೆ ಆಂತರಿಕ ಹುಡುಕಾಟವಾದ ಆಧ್ಯಾತ್ಮವು ಪ್ರಪಂಚಕ್ಕೆ ಭಾರತೀಯರ ಕೊಡುಗೆ. ಆಧ್ಯಾತ್ಮದ ಮೂಲವೂ ಪ್ರಶ್ನೆಗಳೇ ಆಗಿವೆ. ನಾನು ಯಾರು ಎಂಬ ಜಿಜ್ಞಾಸೆ ಆಧ್ಯಾತ್ಮದ ತಳಹದಿ.

ಜೀವನವೆಂಬುದೇ ಒಂದು ಪ್ರಶ್ನೆ. ಹೀಗಾಗಿ ಪ್ರಶ್ನೆ ಎಂಬುದು ಋಣಾತ್ಮಕ ವಿಚಾರವಲ್ಲ. ಮನಸ್ಸನ್ನು ಸದಾ ಸೃಜನಶೀಲವಾಗಿರಿಸುವ ನಮ್ಮ ಜ್ಞಾನವನ್ನು ವಿಸ್ತರಿಸುವ ಧನಾತ್ಮಕ ಚಿಂತನೆ. ಪ್ರಶ್ನಿಸುವ ಮನೋಭಾವದವರನ್ನು ತಲೆ ತಿನ್ನುವವರು ಎಂದು ಹೀಗಳೆಯುವುದು ಸಲ್ಲ. ಪ್ರಶ್ನೆಗಳಿಗೆ ನಮ್ಮ ಆಲೋಚನೆಗಳನ್ನು ಸದಾ ಜೀವಂತವಾಗಿಡುವ ಶಕ್ತಿ ಇರುತ್ತದೆ. ಹಾಗೆಂದ ಮಾತ್ರಕ್ಕೆ ಪ್ರಶ್ನೆ ಕೇಳಬೇಕೆಂಬ ಕಾರಣಕ್ಕಾಗಿಯೇ ತೂಕವಿರದ ಸಂಬಂಧವಿರದ ಪ್ರಶ್ನೆಗಳನ್ನು ಕೇಳುವ ಸ್ವಭಾವವೂ ಸರಿಯಲ್ಲ. ಅರ್ಥವಾಗದನ್ನು ಸೂಕ್ತವಾದ ಪ್ರಶ್ನೆ ಕೇಳಿ ಅರ್ಥ ಮಾಡಿಕೊಳ್ಳುವುದೇ ಸರಿಯಾದ ಧೋರಣೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದ್ವಾದಶಿ ಗಂ. 18-23 ನಕ್ಷತ್ರ: ಉತ್ತರಾಷಾಢ ಗಂ. 26-43 ಯೋಗ: ಆಯುಷ್ಮಾನ್ ಗಂ. 09- 56 ಕರಣ: ಬವ ಗಂ. 08-02, ಸಿಂಹ ಮಾಸದ 11 ನೇ ದಿನ, ಮಳೆನಕ್ಷತ್ರ: ಮಘಾ 4.
ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-23 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 11 ಸಫರ್
ದಿನ ವಿಶೇಷ : ಓಣಂ ಮೊದಲ ದಿನ
ಅದೃಷ್ಟ ಸಂಖ್ಯೆ : 1, 9

ಮೇಷ: ತಾಂತ್ರಿಕ ಕ್ಷೇತ್ರದಲ್ಲಿ ಗುರಿ ಮುಟ್ಟುವ ಗಣನೀಯ ಸಾಧನೆ ತೋರಿ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗುವಿರಿ. ಯಾವುದಾದರೂ ಹೊಸ ವಿಚಾರವನ್ನು ಕಲಿಯಲು ಈ ದಿನ ಸರಿಯಲ್ಲ. ಆಲಂಕಾರಿಕ ವಸ್ತುಗಳ ಮಾರಾಟ ಹೆಚ್ಚಲಿದೆ.

ವೃಷಭ: ಕಾರ್ಯಕ್ಷೇತ್ರದಲ್ಲಿ ಉತ್ತಮ ಹೊಂದಾಣಿಕೆ ಮಾಡಿಕೊಳ್ಳುವುದು ಅಗತ್ಯವಾಗಲಿದೆ. ಕಣ್ಣಿನ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಅನಾಹುತಕ್ಕೆ ನಾಂದಿ ಮಾಡಿದಂತಾಗುವುದು. ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ.

ಮಿಥುನ: ಮನೆಯ ಪತ್ರ ಅಥವಾ ಕಂದಾಯ ಇಲಾಖೆಯ ವ್ಯವಹಾರದಲ್ಲಿ ಸಂಕಷ್ಟದ ಪರಿಸ್ಥಿತಿ ಎದುರಾಗಲಿದೆ. ಗ್ರಂಥಪಾಲಕರ ಹುದ್ದೆಗೆ ಅಭ್ಯರ್ಥಿಯಾಗುವುದರಿಂದ ಶುಭವಾಗುವುದು. ಏಕಾಗ್ರತೆಗೆ ಭಂಗವಾಗಲಿದೆ.

ಕರ್ಕಾಟಕ: ಸಣ್ಣಪುಟ್ಟ ಅಡಚಣೆಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಲಾರದು. ಇಂದು ವಿವಾಹಾಪೇಕ್ಷಿಗಳಿಗೆ ಅನಿರೀಕ್ಷಿತವಾಗಿ ಸಹೋದರನ ಮುಖಾಂತರವಾಗಿ ವೈವಾಹಿಕ ಸಂಬಂಧವೊಂದು ಕೂಡಿ ಬರಲಿದೆ.

ಸಿಂಹ: ವಿಭಿನ್ನ ರೀತಿಯ ಮತ್ತು ಅತಿ ಕ್ಲಿಷ್ಟಕರವಾದ ಕೆಲಸವೊಂದನ್ನು ಇಂದು ನಿಮ್ಮ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ ಅದು ನಿಮಗೆ ಸಾಕಷ್ಟು ಗೌರವವನ್ನು, ಹೆಸರನ್ನು ತರಲಿದೆ. ಬಿಳಿ ಬಣ್ಣ ಶುಭ ತರಲಿದೆ.

ಕನ್ಯಾ: ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಿಗಾಗಿ ಜನರು ಕಾಯುವುದನ್ನು ನೋಡಿ ಬಹಳ ಹೆಮ್ಮೆ ಪಟ್ಟುಕೊಳ್ಳುವಿರಿ. ಕಾರ್ಮಿಕರ ಮೇಲಿನ ದೃಷ್ಟಿಕೋನ ಬದಲಾಯಿಸಿಕೊಳ್ಳುವುದರಿಂದ ಪ್ರಯೋಜನ ಪಡೆಯಲಿದ್ದೀರಿ.

ತುಲಾ: ಮಾನಸಿಕ ಒತ್ತಡದ ನಿವಾರಣೆಗೆ ಹಾಗೂ ಶತ್ರುನಿವಾರಣೆಗೆ ಕುಲ ದೇವರ ದರ್ಶನ, ಸೇವೆ ಮಾಡುವುದು ಉಪಕಾರಿಯಾಗುವುದು. ಮುದ್ರಣ ವೃತ್ತಿಯವರು ತಪ್ಪಿಲ್ಲದೇ ಕಾರ್ಯ ನಿರ್ವಹಿಸುವುದರಿಂದ ಲಾಭ ಬರುವುದು.

ವೃಶ್ಚಿಕ: ವ್ಯಾಪಾರದಲ್ಲಿ ಹಿಂದೆ ನೀವು ತೆಗೆದುಕೊಂಡಿದ್ದ ನಿರ್ಧಾರ ಸರಿಯಾದುದೆಂದು ಈ ದಿನ ನಿಮಗೆ ಮನವರಿಕೆಯಾಗುವುದು. ಆಹಾರ ಪದಾರ್ಥಗಳ ಬಳಕೆಯಲ್ಲಿ ನಿಮ್ಮಲ್ಲಿರುವ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವ ಪ್ರಯತ್ನಿಸಿ.

ಧನು: ಕಾರ್ಖಾನೆಯ ವಿದ್ಯುತ್ ಲೋಪಗಳನ್ನು ಸರಿಪಡಿಸಲು ಅಧಿಕ ವೆಚ್ಚವಾಗುವುದು. ಈ ದಿನದಲ್ಲಾದ ಹೊಸ ಜನರ ಸಂಪರ್ಕವು ಉತ್ತಮ ಧನಲಾಭ ತರಲಿದೆ. ಇಂದಿನ ಲಾಭ ಹಿಂದಿನ ನಷ್ಟಗಳನ್ನು ಮುಚ್ಚಿ ಹಾಕಲಿದೆ.

ಮಕರ: ಜಾಣ್ಮೆ ಮತ್ತು ಅವಿರತ ದುಡಿಮೆಯಿಂದ ನೀವು ಮಾಡುತ್ತಿರುವಂಥ ವ್ಯವಹಾರದಲ್ಲಿ ದುಪ್ಪಟ್ಟು ಲಾಭವಾಗಿರುವುದು ಗಮನಕ್ಕೆ ಬರಲಿದೆ. ನಿಮ್ಮನ್ನು ನೀವು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವಿರಿ.


ಕುಂಭ: ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ. ವಿಮಾ ಯೋಜನೆಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಹೊಸ ಉದ್ಯೋಗದ ಬಗ್ಗೆ ಯೋಚನೆ ಬೇಡ.

ಮೀನ: ಉನ್ನತ ಶಿಕ್ಷಣ ಮುಂದುವರಿಸಲು ಬಂಧುಗಳ ಸಹಾಯ ಹಸ್ತ ಅಥವಾ ವಾಸ್ತವ್ಯದ ವ್ಯವಸ್ಥೆ ಅಪೇಕ್ಷಿಸಬಹುದು. ಟ್ರಾವೆಲ್ ಏಜನ್ಸಿ ನಡೆಸುವವರಿಗೆ ಈ ದಿನವು ಉತ್ತಮವಾಗಿ ಇರಲಿದೆ. ಕೆಲಸವು ನಿಧಾನ ಗತಿಯಲ್ಲಿ ಸಾಗುವವು.

ಪದಬಂಧ 5424 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
4.ಮುಷ್ಕರ ಹೂಡುವವನು (4)
5.ಗಮನಕೊಟ್ಟು ವೀಕ್ಷಿಸಿದ ಆಕಾಶ (3)
7. ನವೆ ಹೀಗೆ ಉಂಟಾಗಿದೆ (3)
10.ಪುನಃ ಬರುವ ಸ್ಮರಣೆ (3)
12.ದುರಸ್ತಿಯನ್ನು ಹೀಗೆನ್ನಿ (3)
13.ಅದೇತಾನೆ ಮೂಡುತ್ತಿರುವ ಸೂರ್ಯ (4)
15.ಯಾತ್ರಿಕರು ಇಳಿದುಕೊಳ್ಳಲು ಮಾಡಿರುವ ವಸತಿ (6)

ಮೇಲಿಂದ ಕೆಳಕ್ಕೆ
1.ಆ ಜಾಗದಲ್ಲಿರುವ ಹೆಬ್ಬಾವು ಕಾಣುತ್ತಿದೆಯೇ? (4)
2.ರಭಸವಾಗಿ ಹರಿಯುತ್ತಿರುವ ದ್ರವ (2)
3.ಬರದಲ್ಲಿ ಹೊರಹಾಕುವಿಕೆ! (4)
6.ಹಜಾರವನ್ನು ಹೀಗೂ ಹೇಳುವರು (4)
7.ಕದಕ್ಕೆ ತಾಕಿಸಿರುವ ಕೆನ್ನೆ (3)
8.ಕಾರಿನಲ್ಲಿರುವ ಕಾಯಿಪಲ್ಲೆ (4)
9.ಅಕ್ಕಪಕ್ಕ ಎಂದು ಈ ರೀತಿ ಹೇಳಿ (4)
11.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



5423ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಸೂತಿಗೃಹ 4.ಸಮಸ್ಯೆ 5.ವರಾತ 6.ವದನ 7.ತಕಲಿ 9.ಅಂಕೆ 10.ಹರಿ 12.ಪರಮ 14.ಪ್ರಭಾವ 15.ಸುಲಭ 16.ಪರಾಕು 17.ವಚನಭ್ರಷ್ಟ

ಮೇಲಿಂದ ಕೆಳಕ್ಕೆ:
1.ಪ್ರಸಾಧನ 2.ತಿಳಿವಳಿಕೆ 3.ಹವನ 4.ಸತತ 8.ಕಚೇರಿ 9.ಅಂಬರ 10.ಹಯವದನ 11.ದಷ್ಟಪುಷ್ಟ 13.ಮಸುಕು 14.ಪ್ರಭವ

ಸುಡೊಕು 5810

		6		7		3		8
	8		2		4		1	7
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5809ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಬಾಸ್ಮತಿ ಅಕ್ಕಿ ರಫ್ತಿಗೆ ದರ ಮಿತಿ



ನವದೆಹಲಿ (ಪಿಟಿಐ): ಪ್ರತಿ ಟನ್‌ಗೆ 1,200 ಡಾಲರ್‌ಗಿಂತಲೂ (₹99,057) ಕಡಿಮೆ ಬೆಲೆಗೆ ಬಾಸ್ಮತಿ ಅಕ್ಕಿ ರಫ್ತು ಮಾಡಲು ಅವಕಾಶ ನೀಡದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಪ್ರೀಮಿಯಂ ಬಾಸ್ಮತಿ ಅಕ್ಕಿ ಬದಲಾಗಿ ಬಾಸ್ಮತಿ ಅಲ್ಲದ ಅಕ್ಕಿಯನ್ನು ಅಕ್ರಮವಾಗಿ ರಫ್ತು ಮಾಡುವ ಸಾಧ್ಯತೆಯನ್ನು ತಡೆಯಲು ಕೇಂದ್ರ ಈ ನಿರ್ಧಾರಕ್ಕೆ ಬಂದಿದೆ.

ಪ್ರತಿ ಟನ್‌ಗೆ 1,200 ಡಾಲರ್‌ಗಿಂತಲೂ ಕಡಿಮೆ ಬೆಲೆಗೆ ರಫ್ತು ಮಾಡುವುದಕ್ಕೆ ಅನುಮತಿ ನೀಡದಂತೆ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಎಪಿಇಡಿಎ) ಸೂಚನೆ ನೀಡಿರುವುದಾಗಿ ವಾಣಿಜ್ಯ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ವಿದೇಶ ವ್ಯಾಪಾರ ನೀತಿಯ ಪ್ರಕಾರ, ಬಾಸ್ಮತಿ ಅಕ್ಕಿ ರಫ್ತು ಮಾಡಲು ಎಲ್ಲ ವ್ಯಾಪಾರಿಗಳು ಎಪಿಇಡಿಎ ಬಳಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಆ ಬಳಿಕ ಅದು ನೋಂದಣಿ ಮತ್ತು ಹಂಚಿಕೆ ಪ್ರಮಾಣಪತ್ರ (ಆರ್‌ಸಿಎಸಿ) ನೀಡುತ್ತದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	100 ಮೊಟ್ಟೆಗೆ	₹460
	12 ಮೊಟ್ಟೆಗೆ	₹65
ಮೈಸೂರು	100 ಮೊಟ್ಟೆಗೆ	₹460

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹345-571

ದ್ವಿತಳಿ (ಬಿ.ವಿ) ₹351-670

ಸ್ಮಾಲ್ ಕ್ಯಾಪ್: ರಿಸ್ಕ್ ಜೊತೆ ಸಂಪತ್ತು



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಪೈಕಿ ಸ್ಮಾಲ್ ಕ್ಯಾಪ್ ಫಂಡ್‌ಗಳು ಪ್ರಮುಖ ಸ್ಥಾನ ಪಡೆದಿವೆ. ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧ, ಆದರೆ ದೀರ್ಘಾವಧಿಯಲ್ಲಿ ಅತಿ ಹೆಚ್ಚು ಲಾಭ ಸಿಗಬೇಕು ಎನ್ನುವವರಿಗೆ ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್ ಹೂಡಿಕೆ ಸೂಕ್ತ. ಈ ಫಂಡ್‌ಗಳಿಂದ ಎಷ್ಟು ಲಾಭ ಸಿಗಬಹುದು? ಈ ಫಂಡ್‌ಗಳ ಮಹತ್ವವೇನು? ತಿಳಿಯೋಣ.

₹5,000 ಕೋಟಿಗಿಂತ ಕಡಿಮೆ ಮಾರುಕಟ್ಟೆ ಮೌಲ್ಯ ಹೊಂದಿರುವ ಕಂಪನಿಗಳನ್ನು ಸ್ಮಾಲ್ ಕ್ಯಾಪ್ ಕಂಪನಿಗಳು ಎಂದು ಕರೆಯಲಾಗುತ್ತದೆ. ಅಂತಹ ಕಂಪನಿಗಳಲ್ಲಿ ಹೂಡಿಕೆ ಮಾಡುವ ಫಂಡ್‌ಗಳನ್ನು ಸ್ಮಾಲ್ ಕ್ಯಾಪ್ ಫಂಡ್ ಎಂದು ವಿಂಗಡಿಸಲಾಗುತ್ತದೆ. ಲಾರ್ಜ್ ಕ್ಯಾಪ್ ಅಂದರೆ ಷೇರು ಮಾರುಕಟ್ಟೆಯಲ್ಲಿರುವ ಬೃಹತ್ ಕಂಪನಿಗಳು, ಮಿಡ್ ಕ್ಯಾಪ್ ಅಂದರೆ ಮಧ್ಯಮ ಗಾತ್ರದವು ಮತ್ತು ಸ್ಮಾಲ್ ಕ್ಯಾಪ್ ಅಂದರೆ ಸಣ್ಣ ಕಂಪನಿಗಳು.

ಸ್ಮಾಲ್ ಕ್ಯಾಪ್ ಫಂಡ್‌ಗಳು ಹೂಡಿಕೆದಾರರ ಶೇಕಡ 65ರಷ್ಟು ಹಣವನ್ನು ಸಣ್ಣ ಕಂಪನಿಗಳಲ್ಲಿ ಹೂಡಿಕೆ ಮಾಡುತ್ತವೆ. ಒಂದಿಷ್ಟು ಮೊತ್ತವನ್ನು ಮಿಡ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಕಂಪನಿಗಳಲ್ಲೂ ತೊಡಗಿಸಲಾಗುತ್ತದೆ. ಆದರೆ ಸ್ಮಾಲ್ ಕ್ಯಾಪ್ ಫಂಡ್‌ಗಳ ಬಹುಪಾಲು ಮೊತ್ತ ಸಣ್ಣ ಕಂಪನಿಗಳ ಮೇಲೆಯೇ ಹೂಡಿಕೆಯಾಗಿರುತ್ತದೆ.

ರಿಸ್ಕ್ ಜಾಸ್ತಿ, ಬೆಳವಣಿಗೆ ಸಾಧ್ಯತೆ ಹೆಚ್ಚು: ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿನ ಅಲ್ಪಾವಧಿ ಹೂಡಿಕೆಯಲ್ಲಿ ರಿಸ್ಕ್ ಜಾಸ್ತಿ ಇರುತ್ತದೆ. ಆದರೆ ದೀರ್ಘಾವಧಿ, ಅಂದರೆ ಸುಮಾರು 5ರಿಂದ 7 ವರ್ಷಗಳ ಅವಧಿಗೆ, ಹೂಡಿಕೆ ಮಾಡಿದರೆ ಲಾಭದ ಸಾಧ್ಯತೆ ಹೆಚ್ಚು. ಕಳೆದ 5 ವರ್ಷಗಳಲ್ಲಿ ಸ್ಮಾಲ್ ಕ್ಯಾಪ್ ಫಂಡ್‌ಗಳು ಸರಾಸರಿ ಶೇ 20.28ರಷ್ಟು ವಾರ್ಷಿಕ ಲಾಭಾಂಶ ಕೊಟ್ಟಿವೆ. ಕಳೆದ 10 ವರ್ಷಗಳ ಅವಧಿಯಲ್ಲಿ ಸರಾಸರಿ ಶೇ 24.29ರಷ್ಟು ವಾರ್ಷಿಕ ಲಾಭ ಒದಗಿಸಿವೆ. ಮಾರುಕಟ್ಟೆ ಅನಿಶ್ಚಿತತೆಯ ಸಂದರ್ಭದಲ್ಲಿ ಸ್ಮಾಲ್ ಕ್ಯಾಪ್ ಫಂಡ್‌ಗಳು ದೊಡ್ಡ ಪೆಟ್ಟು ಅನುಭವಿಸುತ್ತವೆ. ಆದರೆ ಅಷ್ಟೇ ದೊಡ್ಡ ಮಟ್ಟದ ಲಾಭ ಕೊಡುವ ಸಾಮರ್ಥ್ಯವೂ ಈ ಫಂಡ್‌ಗಳಿಗಿದೆ.

ಒಳ್ಳೆಯ ಕಂಪನಿಗಳ ಹುಟ್ಟು: ಸ್ಮಾಲ್ ಕ್ಯಾಪ್ ಕಂಪನಿಗಳು ಬೆಳವಣಿಗೆ ಕಂಡು ಕ್ರಮೇಣ ಮಿಡ್ ಕ್ಯಾಪ್, ಲಾರ್ಜ್ ಕ್ಯಾಪ್ ಕಂಪನಿಗಳಾಗಿ ರೂಪುಗೊಳ್ಳುತ್ತವೆ. ಒಂದು ಸಮಯದಲ್ಲಿ ಸ್ಮಾಲ್ ಕ್ಯಾಪ್ ಕಂಪನಿಗಳಾಗಿದ್ದ ಐಷರ್ ಮೋಟರ್ಸ್, ಅರಬಿಂದೊ ಫಾರ್ಮಾ, ಇಂಡಸ್ ಇಂಡ್ ಬ್ಯಾಂಕ್ ಇಂದು ಲಾರ್ಜ್ ಕ್ಯಾಪ್ ಕಂಪನಿಗಳಾಗಿ ರೂಪುಗೊಂಡಿವೆ. ಸ್ಮಾಲ್ ಕ್ಯಾಪ್‌ನಲ್ಲೂ ಈಗ ಒಳ್ಳೆಯ ಹೆಸರು ಮಾಡಿರುವ ಕಂಪನಿಗಳಿವೆ.

ಸಿಡಿಎಸ್‌ಎಲ್, ಬಿಇಎಂಎಲ್, ಸಿಯೆಟ್, ಇಂಡಿಗೊ ಪೇಂಟ್ಸ್, ಗ್ರಾಫೈಟ್ ಇಂಡಿಯಾ, ಕ್ಯಾಮ್ಸ್, ಪಿವಿಆರ್ ಐನಾಕ್ಸ್ ಇವೆಲ್ಲವೂ ಸ್ಮಾಲ್ ಕ್ಯಾಪ್ ಕಂಪನಿಗಳೇ. ಆದರೆ ಹೆಚ್ಚು ಲಾಭ ಕೊಡದ ಕಂಪನಿಗಳೂ ಸ್ಮಾಲ್ ಕ್ಯಾಪ್ ವರ್ಗದಲ್ಲಿರುತ್ತವೆ ಎನ್ನುವುದು ನೆನಪಿರಲಿ. ಹೂಡಿಕೆ ಮಾಡುವಾಗ ಯಾವ ಫಂಡ್ ಪರಿಗಣಿಸಬೇಕು ಎಂದು ಅಧ್ಯಯನ ಮಾಡಿ ಮುಂದುವರಿಯುವುದು ಮುಖ್ಯ. ನಿಮಗೆ ಯಾವ ಸ್ಮಾಲ್ ಕ್ಯಾಪ್ ಫಂಡ್ ಉತ್ತಮ ಎಂಬುದನ್ನು ಸ್ವತಂತ್ರವಾಗಿ ತಿಳಿದುಕೊಳ್ಳಲು ಸಾಧ್ಯವಾಗದಿದ್ದರೆ. ಪರಿಣತ ಹಣಕಾಸು ತಜ್ಞರ ನೆರವು ಪಡೆಯಿರಿ.

ಯಾರು ಹೂಡಿಕೆ ಮಾಡಬೇಕು?: ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ದೀರ್ಘಾವಧಿ ಹೂಡಿಕೆ ಬಹಳ ಮುಖ್ಯ. ಸುಮಾರು 5ರಿಂದ 7 ವರ್ಷಗಳ ಹೂಡಿಕೆ ಸಮಯವಿದ್ದರೆ ಮಾತ್ರ ಈ ಫಂಡ್‌ಗಳಲ್ಲಿ ಹಣ ತೊಡಗಿಸುವುದು ಸೂಕ್ತ. 'ಹೆಚ್ಚು ರಿಸ್ಕ್, ಹೆಚ್ಚು ಲಾಭ' ಎನ್ನುವ ಲೆಕ್ಕಾಚಾರವನ್ನು ಯಾರು ಒಪ್ಪುವರೋ ಅವರು ಸ್ಮಾಲ್ ಕ್ಯಾಪ್ ಫಂಡ್‌ಗಳನ್ನು ಪರಿಗಣಿಸಬಹುದು.

ಸಹಜವಾಗಿಯೇ ಸ್ಮಾಲ್ ಕ್ಯಾಪ್ ಕಂಪನಿಗಳು, ಮಿಡ್ ಮತ್ತು ಲಾರ್ಜ್ ಕ್ಯಾಪ್ ಕಂಪನಿಗಳಷ್ಟು ಸದೃಢವಾಗಿರುವುದಿಲ್ಲ, ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಸ್ಮಾಲ್ ಕ್ಯಾಪ್ ಕಂಪನಿಗಳು ಚೇತರಿಸಿಕೊಳ್ಳಲು ಸಮಯ ತೆಗೆದುಕೊಳ್ಳುತ್ತವೆ. ಮೂರು ತಿಂಗಳು, ಆರು ತಿಂಗಳು ಒಂದು ವರ್ಷದ ಅವಧಿಯ ಹೂಡಿಕೆಗೆ ಸ್ಮಾಲ್ ಕ್ಯಾಪ್ ಫಂಡ್‌ಗಳನ್ನು ಪರಿಗಣಿಸಬೇಡಿ.

ಗಳಿಕೆಗೆ ತೆರಿಗೆ ಎಷ್ಟು?: ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಒಳಗಾಗಿ ನಗದೀಕರಣಕ್ಕೆ ಮುಂದಾದರೆ ಗಳಿಕೆಯ ಮೇಲೆ ಶೇ 15ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಇದನ್ನು ಎಲ್‌ಟಿಸಿಜಿ ಅಥವಾ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಎನ್ನುತ್ತಾರೆ. ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ನಗದೀಕರಣಕ್ಕೆ ಮುಂದಾಗಿ ಲಾಭಾಂಶ ₹1 ಲಕ್ಷದ ಒಳಗಿದ್ದರೆ ಯಾವುದೇ ತೆರಿಗೆ ಇಲ್ಲ. ₹1 ಲಕ್ಷ ಮೀರಿದ ಲಾಭಾಂಶಕ್ಕೆ ಶೇ 10ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಇದನ್ನು ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಎಂದು ಕರೆಯಲಾಗುತ್ತದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಕುಸಿತ ಕಂಡ ಸೂಚ್ಯಂಕಗಳು



ಷೇರುಪೇಟೆ

ಆಗಸ್ಟ್ 25ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪಮಟ್ಟದ ಕುಸಿತ ದಾಖಲಿಸಿವೆ. 64,886 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.09ರಷ್ಟು ಕುಸಿದಿದೆ. 19,265 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.22ರಷ್ಟು ಇಳಿಕೆಯಾಗಿದೆ.

ವಲಯವಾರು ಪ್ರಗತಿಯಲ್ಲಿ ಫಾರ್ಮಾ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕಗಳು ತಲಾ ಶೇ 1.5ರಷ್ಟು ಕುಸಿದಿವೆ. ನಿಫ್ಟಿ ಎನರ್ಜಿ ಸೂಚ್ಯಂಕ ಶೇ 1.2ರಷ್ಟು ಕುಸಿದಿದೆ. ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1ರಷ್ಟು ಮತ್ತು ಮಾಧ್ಯಮ ಸೂಚ್ಯಂಕ ಶೇ 0.6ರಷ್ಟು ಹೆಚ್ಚಳವಾಗಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹4,895.29 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹8,495.99 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಟಾಟಾ ಪವರ್, ಇಂಡಸ್ ಟವರ್ಸ್, ಬಜಾಜ್ ಫೈನಾನ್ಸ್, ಸೀಮನ್ಸ್, ಪೇಟಿಎಂ ಮತ್ತು ಎಕ್ಸಿಸ್ ಬ್ಯಾಂಕ್ ಗಳಿಸಿಕೊಂಡಿವೆ. ಅಂಬುಜಾ ಸಿಮೆಂಟ್ಸ್, ಅದಾನಿ ಪೋರ್ಟ್ಸ್, ರಿಲಯನ್ಸ್ ಇಂಡಸ್ಟ್ರೀಸ್, ಅದಾನಿ ಎಂಟರ್‌ಪ್ರೈಸಸ್ ಮತ್ತು ಜೈಡಸ್ ಲೈಫ್ ಸೈನ್ಸಸ್ ಕುಸಿದಿವೆ.

ಮುನ್ನೋಟ: ಅಮೆರಿಕ ಫೆಡರಲ್ ರಿಸರ್ವ್‌ನ ಅಧ್ಯಕ್ಷ ಜೆರೋಮ್ ಪೋವೆಲ್ ಹಣದುಬ್ಬರ ನಿಯಂತ್ರಣಕ್ಕೆ ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದ್ದು ಅಗತ್ಯಬಿದ್ದರೆ ಮತ್ತಷ್ಟು ಬಡ್ಡಿ ದರ ಹೆಚ್ಚಳ ಮಾಡಬೇಕಾಗಬಹುದು ಎನ್ನುವ ಮುನ್ಸೂಚನೆ ನೀಡಿದ್ದಾರೆ. ಈ ಬೆಳವಣಿಗೆಗೆ ಜಾಗತಿಕ ಮಾರುಕಟ್ಟೆಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎನ್ನುವುದರ ಆಧಾರದ ಮೇಲೆ ದೇಶಿ ಮಾರುಕಟ್ಟೆಯ ಗತಿ ನಿರ್ಧಾರವಾಗಲಿದೆ.

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕ ಅವಧಿ: ಡಿಪಿಐಐಟಿ

ತಗ್ಗಿದ ಎಫ್‌ಡಿಐ ಒಳಹರಿವು



ನವದೆಹಲಿ (ಪಿಟಿಐ): ಏಪ್ರಿಲ್–ಜೂನ್ ಅವಧಿಯಲ್ಲಿ ಭಾರತಕ್ಕೆ ವಿದೇಶಿ ನೇರ ಬಂಡವಾಳದ (ಎಫ್‌ಡಿಐ) ಹರಿವು ಶೇಕಡ 34ರಷ್ಟು ಕಡಿಮೆ ಆಗಿದೆ. ಈ ಅವಧಿಯಲ್ಲಿ ಆಗಿರುವ ಎಫ್‌ಡಿಐ ಮೊತ್ತ 10.94 ಬಿಲಿಯನ್ ಅಮೆರಿಕನ್ ಡಾಲರ್ (ಅಂದಾಜು ₹90 ಸಾವಿರ ಕೋಟಿ).

ಕಂಪ್ಯೂಟರ್ ಯಂತ್ರಾಂಶ ಹಾಗೂ ತಂತ್ರಾಂಶ, ದೂರಸಂಪರ್ಕ, ಆಟೊಮೊಬೈಲ್ ಮತ್ತು ಫಾರ್ಮಾ ವಲಯಗಳಲ್ಲಿ ಹೂಡಿಕೆ ಕಡಿಮೆ ಆಗಿರುವುದು ಇದಕ್ಕೆ ಕಾರಣ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 16.58 ಬಿಲಿಯನ್ ಡಾಲರ್ (₹ 1.36 ಲಕ್ಷ ಕೋಟಿ) ಎಫ್‌ಡಿಐ ಭಾರತಕ್ಕೆ ಬಂದಿತ್ತು. ಈ ವರ್ಷದ ಜನವರಿ–ಮಾರ್ಚ್ ಅವಧಿಯಲ್ಲಿ ಕೂಡ ಎಫ್‌ಡಿಐ ಪ್ರಮಾಣವು ಶೇ 40.55ರಷ್ಟು ತಗ್ಗಿತ್ತು ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಅಂಕಿ–ಅಂಶಗಳು ಹೇಳುತ್ತವೆ.

ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಸಿಂಗಪುರ, ಮಾರಿಷಸ್, ಅಮೆರಿಕ, ಬ್ರಿಟನ್ ಮತ್ತು ಯುಎಇ ಸೇರಿದಂತೆ ಪ್ರಮುಖ ದೇಶಗಳಿಂದ ಬರುವ ಎಫ್‌ಡಿಐ ಹರಿವು ಕಡಿಮೆ ಆಗಿದೆ. ಆದರೆ ನೆದರ್ಲೆಂಡ್ಸ್, ಜಪಾನ್ ಮತ್ತು ಜರ್ಮನಿಯಿಂದ ಬರುವ ಎಫ್‌ಡಿಐ ಹೆಚ್ಚಾಗಿದೆ.

ಎಫ್‌ಡಿಐ ಆಕರ್ಷಿಸುವುದರಲ್ಲಿ ಮಹಾರಾಷ್ಟ್ರವು ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರವು ಜೂನ್ ತ್ರೈಮಾಸಿಕದಲ್ಲಿ 4.46 ಬಿಲಿಯನ್ ಅಮೆರಿಕನ್ ಡಾಲರ್ (₹36 ಸಾವಿರ ಕೋಟಿ) ಎಫ್‌ಡಿಐ ಪಡೆದುಕೊಂಡಿದೆ. ಇದು ಕೂಡ ಹಿಂದಿನ ವರ್ಷದ ಇದೇ ಅವಧಿಯಲ್ಲಿನ ಹೂಡಿಕೆಗೆ ಹೋಲಿಸಿದರೆ ಕಡಿಮೆ.

ಜಾಗತಿಕವಾಗಿ ಬಡ್ಡಿ ದರ ಹೆಚ್ಚಾಗುತ್ತಿರುವುದು ಹಾಗೂ ಜಾಗತಿಕ ಬಿಕ್ಕಟ್ಟುಗಳು ಎಫ್‌ಡಿಐ ಹರಿವಿನ ಮೇಲೆ ಪ್ರಭಾವ ಬೀರಬಹುದು ಎಂದು ಡಿಪಿಐಐಟಿ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಮೇ ತಿಂಗಳಲ್ಲಿ ಹೇಳಿದ್ದರು.

ರಾಜ್ಯದಲ್ಲೂ ಹೂಡಿಕೆ ಇಳಿಕೆ

ಕರ್ನಾಟಕ ಆಕರ್ಷಿಸಿದ ವಿದೇಶಿ ನೇರ ಬಂಡವಾಳ ಹೂಡಿಕೆಯು 1.46 ಬಿಲಿಯನ್ ಡಾಲರ್‌ಗೆ (₹12 ಸಾವಿರ ಕೋಟಿ) ತಗ್ಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕರ್ನಾಟಕವು 2.8 ಬಿಲಿಯನ್ ಡಾಲರ್ (₹23 ಸಾವಿರ ಕೋಟಿ) ಎಫ್‌ಡಿಐ ಆಕರ್ಷಿಸಿತ್ತು.

ಉತ್ತರ ಕಾಶ್ಮೀರದಲ್ಲಿ ಪ್ಲಾಸ್ಟಿಕ್ ಮಾಲಿನ್ಯದ ಭೀತಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ದೇಶ ಮತ್ತು ವಿದೇಶಗಳಿಂದ ಸಾವಿರಾರು ಪ್ರವಾಸಿಗರು ಉತ್ತರ ಕಾಶ್ಮೀರದ ಗಡಿ ಬಳಿಯ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಅವರು ಬಯಲಿನಲ್ಲೇ ತ್ಯಾಜ್ಯ ಎಸೆದು ಹೋಗುವ ಕಾರಣ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಗಡಿ ಪ್ರದೇಶಗಳಲ್ಲಿ ವಾಸಿಸುವ ಸ್ಥಳೀಯರೂ ಪ್ಲಾಸ್ಟಿಕ್ ಹಾವಳಿಯಿಂದ ತೊಂದರೆ ಅನುಭವಿಸುತ್ತಿದ್ದಾರೆ.

ಉತ್ತರ ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿಯ (ಎಲ್‌ಒಸಿ) ಕೇರನ್, ಬಂಗಸ್, ತಾಂಗ್ಧಾರ್, ಗುರೆಜ್ ಮತ್ತು ಉರಿ ಸ್ಥಳಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಪ್ರವಾಸೋದ್ಯಮ ಗರಿಗೆದರಿದೆ. 2021ರ ಫೆಬ್ರುವರಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಸೇನೆಗಳ ನಡುವೆ ಕದನ ವಿರಾಮ ಒಪ್ಪಂದ ಏರ್ಪಡುವುದಕ್ಕೂ ಮೊದಲು ಈ ಸ್ಥಳಗಳಿಂದ ಪ್ರವಾಸಿಗರು ದೂರವೇ ಇದ್ದರು.

'ಪ್ರವಾಸಿಗರು ತ್ಯಾಜ್ಯವನ್ನು ಬಯಲಿನಲ್ಲೇ ಎಸೆಯುತ್ತಾರೆ. ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆಯೂ ಇಲ್ಲ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.

'ಪ್ರವಾಸಿಗರು ಪ್ಲಾಸ್ಟಿಕ್ ಬಾಟಲಿಗಳು ಮತ್ತು ರ‍್ಯಾಪರ್‌ಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರ ವಾಹನಗಳು ಉತ್ತರ ಕಾಶ್ಮೀರಕ್ಕೆ ಆಗಮಿಸುತ್ತಿರುವುದರಿಂದ ಪರಿಸರ ಮಾಲಿನ್ಯವೂ ಹೆಚ್ಚಿದೆ' ಎಂದು ಸಾಮಾಜಿಕ ಕಾರ್ಯಕರ್ತೆ ಫಿದಾ ಫಿರ್ದೋಸ್ ಅವರು 'ಪ್ರಜಾವಾಣಿ'ಗೆ ಹೇಳಿದ್ದಾರೆ.

ಮಹಿಳೆಯರಿಗೆ ಮಾಸಿಕ ₹1,250, ಉದ್ಯೋಗದಲ್ಲಿ ಶೇ 35 ಮೀಸಲಾತಿ



ಶಿವರಾಜ್ ಸಿಂಗ್ ಚೌಹಾಣ್

ಭೋಪಾಲ್ (ಪಿಟಿಐ): ಮಹಿಳೆಯರಿಗಾಗಿ ಶ್ರಾವಣ ಮಾಸದ ಕೊಡುಗೆ ಘೋಷಿಸಿರುವ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಲಾಡ್ಲಿ ಬೆಹನಾ ಯೋಜನೆ ಅಡಿ ಮಹಿಳೆಯರಿಗೆ ನೀಡುವ ಹಣಕಾಸು ನೆರವನ್ನು ಹೆಚ್ಚಿಸಿದ್ದಾರೆ. ಅದರಂತೆ ₹1,000 ಹಣಕಾಸು ನೆರವನ್ನು ಈ ತಿಂಗಳು ₹1,250ಕ್ಕೆ ಹೆಚ್ಚಿಸಲಾಗಿದೆ.

ಇದಲ್ಲದೇ, ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಈಗಿರುವ ಶೇ 30 ಮೀಸಲಾತಿಯನ್ನು ಶೇ 35ಕ್ಕೆ ಏರಿಸುವುದಾಗಿ ಮತ್ತು ₹450 ಸಬ್ಸಿಡಿ ದರದಲ್ಲಿ ಅಡುಗೆ ಅನಿಲದ ಸಿಲಿಂಡರ್ ಒದಗಿಸುವುದಾಗಿಯೂ ಹೇಳಿದ್ದಾರೆ.

ಶ್ರಾವಣ ಮಾಸದ ಅಂಗವಾಗಿ ನೀಡಲಾಗಿರುವ ಈ ವಿಶೇಷ ಕೊಡುಗೆಗಳನ್ನು ಮುಂದುವರಿಸುವ ಸಲುವಾಗಿ ನಂತರದ ದಿನಗಳಲ್ಲಿ ಕಾಯಂ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ರಾಖಿ ಹಬ್ಬದ ಸಲುವಾಗಿ ಸದ್ಯ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ₹250 ವರ್ಗಾಯಿಸಲಾಗಿದೆ. ಬಾಕಿ ₹1,000ವನ್ನು ಸೆಪ್ಟೆಂಬರ್ ತಿಂಗಳಲ್ಲಿ ನೀಡಲಾಗುವುದು. ಅಕ್ಟೋಬರ್ ತಿಂಗಳಿನಿಂದ ರಾಜ್ಯದ 1.25 ಕೋಟಿ ಮಹಿಳೆಯರು ತಿಂಗಳಿಗೆ ₹1,250 ಪಡೆಯುವರು, ನಂತರ ದಿನಗಳಲ್ಲಿ ಆ ಮೊತ್ತವನ್ನು ₹3,000ಕ್ಕೆ ಏರಿಸಲಾಗುವುದು ಎಂದು ಚೌಹಾಣ್ ಹೇಳಿದ್ದಾರೆ.

ಈ ವರ್ಷಾಂತ್ಯಕ್ಕೆ ಮಧ್ಯಪ್ರದೇಶ ವಿಧಾನಸಭೆ ಚುನಾವಣೆ ನಡೆಯಲಿದ್ದು, ಹೊಸದಾಗಿ ಮತ ಚಲಾಯಿಸುತ್ತಿರುವ 13.39 ಲಕ್ಷ ಮತದಾರರಲ್ಲಿ 7.07 ಲಕ್ಷ ಮಹಿಳೆಯರಿದ್ದಾರೆ. ಮಹಿಳೆಯರ ಮತಗಳನ್ನು ಸೆಳೆಯಲು ಈ ಘೋಷಣೆಗಳನ್ನು ಮಾಡಲಾಗಿದೆ ಎನ್ನಲಾಗಿದೆ.

ವಿಮಾ ಕಂಪನಿಗಳಿಗೆ ಬಂಡವಾಳ ನೆರವು ಅನುಮಾನ

ನವದೆಹಲಿ (ಪಿಟಿಐ): ಸರ್ಕಾರಿ ವಲಯದ ಸಾಮಾನ್ಯ ವಿಮೆ ಕಂಪನಿಗಳಿಗೆ ಕೇಂದ್ರ ಸರ್ಕಾರವು ಪ್ರಸಕ್ತ ಹಣಕಾಸು ವರ್ಷದಲ್ಲಿ ಬಂಡವಾಳ ನೆರವು ನೀಡುವ ಸಾಧ್ಯತೆ ಇಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸರ್ಕಾರವು ಕಳೆದ ವರ್ಷ ನ್ಯಾಷನಲ್ ಇನ್ಶುರೆನ್ಸ್ ಕಂಪನಿ, ಓರಿಯಂಟಲ್ ಇನ್ಶುರೆನ್ಸ್ ಮತ್ತು ಯುನೈಟೆಡ್ ಇಂಡಿಯಾ ಇನ್ಶುರೆನ್ಸ್ ಕಂಪನಿಗಳಿಗೆ ಒಟ್ಟು ₹5 ಸಾವಿರ ಕೋಟಿ ಬಂಡವಾಳ ನೆರವು ನೀಡಿತ್ತು. 2023–24ರ ಬಜೆಟ್‌ನಲ್ಲಿ ಯಾವುದೇ ನೆರವು ನೀಡಿಲ್ಲ.

‘ಮನ್ ಕಿ ಬಾತ್’ ಬಾನುಲಿ ಕಾರ್ಯಕ್ರಮ • ಮಹಿಳೆಯರ ಸಾಮರ್ಥ್ಯ– ಸಾಧನೆ ಕೊಂಡಾಡಿದ ಮೋದಿ

‘ಚಂದ್ರಯಾನ: ನವಭಾರತ ಚೈತನ್ಯದ ಸಂಕೇತ’

ನವದೆಹಲಿ (ಪಿಟಿಐ): ‘ಚಂದ್ರಯಾನ ಬಾಹ್ಯಾಕಾಶ ಕಾರ್ಯಕ್ರಮವು ನವ ಭಾರತದ ಚೈತನ್ಯದ ಸಂಕೇತವೇ ಆಗಿದೆ. ಎಂಥದೇ ಪರಿಸ್ಥಿತಿ ಎದುರಾದರೂ ಹೇಗೆ ಗೆಲುವು ಸಾಧಿಸಬೇಕು ಎಂಬುದನ್ನು ಈ ಅಂತರಿಕ್ಷ ಕಾರ್ಯಕ್ರಮ ತೋರಿಸಿಕೊಟ್ಟಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ತಮ್ಮ ‘ಮನ್ ಕಿ ಬಾತ್’ ತಿಂಗಳ ಬಾನುಲಿ ಕಾರ್ಯಕ್ರಮದಲ್ಲಿ ‘ಚಂದ್ರಯಾನ–3’ ಯಶಸ್ಸನ್ನು ಮತ್ತೊಮ್ಮೆ ಮೆಲುಕು ಹಾಕಿರುವ ಅವರು, ‘ಭಾರತೀಯ ಮಹಿಳೆಯರಿಗಿರುವ ಶಕ್ತಿಗೆ ಈ ಬಾಹ್ಯಾಕಾಶ ಕಾರ್ಯಕ್ರಮ ಜೀವಂತ ನಿದರ್ಶನವಾಗಿದೆ’ ಎಂದಿದ್ದಾರೆ.

‘ಅಂತರಿಕ್ಷವನ್ನು ಆದಿ–ಅಂತ್ಯ ಇಲ್ಲದ ಅವಕಾಶ ಎಂದೇ ಪರಿಗಣಿಸಲಾಗುತ್ತದೆ. ಇಂತಹ ಅನಂತ ಆಕಾಶಕ್ಕೆ ಭಾರತದ ಪುತ್ರಿಯರು ಸವಾಲೆಸೆದಿದ್ದಾರೆ. ದೇಶದ ಪುತ್ರಿಯರು ಇಷ್ಟೊಂದು ಮಹತ್ವಾಕಾಂಕ್ಷಿಗಳಾಗಿರುವಾಗ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮುವುದನ್ನು ತಡೆಯುವವರು ಯಾರು’ ಎಂದು ಮೋದಿ ಹೇಳಿದ್ದಾರೆ.



ಮಹಿಳೆಯರ ಸಾಮರ್ಥ್ಯವನ್ನು ಸೂಕ್ತವಾಗಿ ಬಳಸಿಕೊಂಡಾಗ ಅಸಾಧ್ಯ ಎಂಬುದು ಸಾಧ್ಯವಾಗುತ್ತದೆ ಎನ್ನುವುದಕ್ಕೆ ‘ಚಂದ್ರಯಾನ–3’ ಸಾಕ್ಷಿ

ನರೇಂದ್ರ ಮೋದಿ, ಪ್ರಧಾನಿ

‘ಅನೇಕ ಮಹಿಳಾ ವಿಜ್ಞಾನಿಗಳು, ಎಂಜಿನಿಯರುಗಳು ಈ ಕಾರ್ಯಕ್ರಮದ ಭಾಗವಾಗಿದ್ದು, ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ’ ಎಂದರು. ‘ಚಂದ್ರನ ದಕ್ಷಿಣ ಧ್ರುವದಲ್ಲಿ ಚಂದ್ರಯಾನ–3ರ ಭಾಗವಾಗಿರುವ ಪ್ರಜ್ಞಾನ್ ರೋವರ್ ಇಳಿದು ನಾಲ್ಕು ದಿನಗಳು ಕಳೆದಿವೆ. ಆದರೆ, ಈ ಬಾಹ್ಯಾಕಾಶ ಯಾತ್ರೆ ಕುರಿತು ಎಷ್ಟು ಮಾತನಾಡಿದರೂ ಸಾಲದು ಎಂಬಷ್ಟು ಬೃಹತ್ ಯಶಸ್ಸು ಇದಾಗಿದೆ’ ಎಂದು ಪ್ರತಿಪಾದಿಸಿದ ಅವರು, ತಮ್ಮ ಕವನದ ಕೆಲ ಸಾಲುಗಳನ್ನು ಉಲ್ಲೇಖಿಸಿದರು.

ಪ್ರಮುಖ ಅಂಶಗಳು

- ಮೇಘಾಲಯದಲ್ಲಿ 1,700 ಗುಹೆಗಳನ್ನು ಪತ್ತೆ ಮಾಡಿರುವ ಬ್ರಿಯಾನ್ ಡಿ.ಖಾರ್‌ಪ್ರಾನ್ ನೇತೃತ್ವದ ‘ಮೇಘಾಲಯ ಅಡ್ವೆಂಚರರ್ಸ್ ಅಸೋಸಿಯೇಷನ್’ ಕಾರ್ಯಕ್ಕೆ ಶ್ಲಾಘನೆ. ಗುಹೆಗಳಿಗೆ ಭೇಟಿ ನೀಡುವಂತೆ ದೇಶವಾಸಿಗಳಿಗೆ ಕರೆ
- ಕ್ರೀಡಾಕ್ಷೇತ್ರದಲ್ಲಿ ಭಾರತ ಮಿಂಚಬೇಕು. ಅದರಲ್ಲೂ ವಿಶೇಷವಾಗಿ ಹಾಕಿ, ಫುಟ್ಬಾಲ್, ಕಬಡ್ಡಿ ಮತ್ತು ಕೊಕ್ಕೊಗಳಲ್ಲಿ ನಮ್ಮ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಬೇಕು ಎಂಬ ಉದ್ದೇಶದಿಂದ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ
- ‘ಮೇರಿ ಮಾಟಿ, ಮೇರಾ ದೇಶ್’ ಅಭಿಯಾನದಡಿ ಮುಂದಿನ ತಿಂಗಳು ದೇಶದ ಪ್ರತಿ ಗ್ರಾಮದಲ್ಲಿ ಪ್ರತಿ ಮನೆಯಿಂದ ಮಣ್ಣನ್ನು ‘ಅಮೃತ ಕಲಶ’ಗಳಲ್ಲಿ ಸಂಗ್ರಹ. ಅಕ್ಟೋಬರ್ ಅಂತ್ಯಕ್ಕೆ ‘ಅಮೃತ ಕಲಶ ಯಾತ್ರೆ’ ದೆಹಲಿ ತಲುಪಲಿದೆ ನಂತರ ‘ಅಮೃತ ಉದ್ಯಾನ’ ನಿರ್ಮಾಣ
- ತೆಲುಗು ಭಾಷೆಯಲ್ಲಿನ ಸಂಪದ್ಭರಿತ ಸಾಹಿತ್ಯ ಹಾಗೂ ಪರಂಪರೆಯನ್ನು ದೇಶದ ಜನರಿಗೆ ತಲುಪಿಸುವ ಉದ್ದೇಶದಿಂದ ಆಗಸ್ಟ್ 29ರಂದು ತೆಲುಗು ದಿನ ಆಚರಣೆ

‘ಜಿ–20 ಶೃಂಗಕ್ಕೆ ಸನ್ನದ್ಧ’

‘ಜಿ–20 ಅಧ್ಯಕ್ಷ ಸ್ಥಾನ ವಹಿಸಿಕೊಂಡ ನಂತರ, ಈ ಗುಂಪನ್ನು ಹೆಚ್ಚು ಒಳಗೊಳ್ಳುವಿಕೆ ಇರುವ ವೇದಿಕೆಯನ್ನಾಗಿ ಮಾಡಿದ ಹೆಗ್ಗಳಿಕೆಯೂ ಭಾರತದ್ದಾಗಿದೆ’ ಎಂದರು.

‘ಜಿ–20 ಶೃಂಗಸಭೆಗೆ ಭಾರತ ಸನ್ನದ್ಧವಾಗಿದ್ದು, 40 ದೇಶಗಳ ನಾಯಕರು ಹಾಗೂ ಜಾಗತಿಕ ಸಂಘಟನೆಗಳ ಮುಖ್ಯಸ್ಥರು ಶೃಂಗದಲ್ಲಿ ಪಾಲ್ಗೊಳ್ಳಲಿದ್ದಾರೆ. ಇದು ಈ ಸಂಘಟನೆಯ ಇತಿಹಾಸದಲ್ಲಿಯೇ ದೊಡ್ಡ ಸಭೆಯಾಗಲಿದೆ’ ಎಂದು ಹೇಳಿದ್ದಾರೆ.

‘ಭಾರತದ ಆಹ್ವಾನದ ಮೇರೆಗೆ ಆಫ್ರಿಕಾ ಒಕ್ಕೂಟ ಸಹ ಜಿ–20 ಸೇರುತ್ತಿದೆ. ಆಫ್ರಿಕಾ ಜನರ ಕೂಗು ವಿಶ್ವದ ಈ ಮಹತ್ವದ ವೇದಿಕೆಯನ್ನು ತಲುಪಿದಂತಾಗಿದೆ’ ಎಂದರು. ಜಿ–20 ಶೃಂಗಸಭೆಯು ಸೆಪ್ಟೆಂಬರ್ 9 ಹಾಗೂ 10ರಂದು ದೆಹಲಿಯಲ್ಲಿ ನಡೆಯಲಿದೆ.

ಬೆಂಗಳೂರಿನ ಧನಪಾಲ್ ಉಲ್ಲೇಖ

ಮನದ ಮಾತು

‘ಕೆಲವೊಮ್ಮೆ ಜನರಿಗೆ ತಾವಿರುವ ನಗರ ಕುರಿತ ಐತಿಹಾಸಿಕ ಸಂಗತಿಗಳ ಅರಿವು ಇರುವುದಿಲ್ಲ’ ಎಂದ ಮೋದಿ, ಬೆಂಗಳೂರಿನಲ್ಲಿ ಸಾರಿಗೆ ಇಲಾಖೆ ಕಚೇರಿಯಲ್ಲಿ ಚಾಲಕರಾಗಿದ್ದ ಧನಪಾಲ್ ಎಂಬುವವರ ಸಾಧನೆಯನ್ನು ಉಲ್ಲೇಖಿಸಿದರು.

‘17 ವರ್ಷಗಳ ಹಿಂದೆ ಬೆಂಗಳೂರಿನ ಪ್ರಮುಖ ಸ್ಥಳಗಳ ದರ್ಶನಕ್ಕೆ ಕರೆದೊಯ್ಯುವ ಜವಾಬ್ದಾರಿಯನ್ನು ಧನಪಾಲ್ ಅವರಿಗೆ ವಹಿಸಲಾಗಿತ್ತು. ಈಗ ಈ ಕಾರ್ಯಕ್ರಮವನ್ನು ಬೆಂಗಳೂರು ದರ್ಶಿನಿ ಎನ್ನಲಾಗುತ್ತದೆ’.

‘ನಗರದ ಸ್ಯಾಂಕಿ ಟ್ಯಾಂಕ್ ಅನ್ನು ಆ ಹೆಸರಿನಿಂದ ಏಕೆ ಕರೆಯಲಾಗುತ್ತದೆ ಎಂಬ ಪ್ರವಾಸಿಗರೊಬ್ಬರ ಪ್ರಶ್ನೆ ಧನಪಾಲ್ ಅವರನ್ನು ಚಿಂತನೆಗೆ ಹಚ್ಚಿತು. ಈ ಬಗ್ಗೆ ಮಾಹಿತಿ ಇಲ್ಲದ್ದಕ್ಕಾಗಿ ಅವರು ಬೇಸರಗೊಂಡರು’

‘ಶಾಸನಗಳು, ದಾಖಲೆಗಳ ಅಧ್ಯಯನದಲ್ಲಿ ತೊಡಗಿದ ಅವರು, ನಂತರ ಶಾಸನಶಾಸ್ತ್ರದಲ್ಲಿ ಡಿಪ್ಲೊಮಾ ಪಡೆಯುವ ಮೂಲಕ ತಮ್ಮ ಜ್ಞಾನದ ಹರವನ್ನು ವಿಸ್ತರಿಸಿಕೊಂಡರು’ ಎಂದು ಮೋದಿ ವಿವರಿಸಿದ್ದಾರೆ.

‘ಕೃತಕ ಬುದ್ಧಿಮತ್ತೆಗೂ ಬೇಕು ಸಹಭಾಗಿತ್ವ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃತಕ ಬುದ್ಧಿಮತ್ತೆಯನ್ನು ನೈತಿಕವಾಗಿ ಬಳಸುವುದನ್ನು ಉತ್ತೇಜಿಸುವುದಕ್ಕಾಗಿ ಉದ್ಯಮ ಸಮುದಾಯ ಮತ್ತು ಸರ್ಕಾರಗಳು ಜಾಗತಿಕ ಸಹಭಾಗಿತ್ವವನ್ನು ರೂಪಿಸಬೇಕು ಎಂದು ಮೋದಿ ಹೇಳಿದ್ದಾರೆ.



ಬಿ20 ಶೃಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ‘ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕೌಶಲ ರೂಪಿಸುವಿಕೆ ಮತ್ತು ಅದನ್ನು ಬೆಳೆಸುವುದಕ್ಕಾಗಿ ಜಾಗತಿಕ ಸಹಭಾಗಿತ್ವದ ಅಗತ್ಯ ಇದೆ. ಕೃತಕ ಬುದ್ಧಿಮತ್ತೆಯ ಕೆಲಸದಲ್ಲಿ ತಪ್ಪು ಆಗಬಹುದು ಎಂಬ ಪೂರ್ವಗ್ರಹ ಮತ್ತು ಸಮಾಜದ ಮೇಲೆ ಅದರ ಪರಿಣಾಮಗಳ ಕುರಿತು ಕೂಡ ಚಿಂತಿಸಬೇಕಾದ ಅಗತ್ಯ ಇದೆ. ಇಂತಹ ಸಮಸ್ಯೆಗಳನ್ನು ಎಲ್ಲರೂ ಜೊತೆಗೂಡಿ ಪರಿಹರಿಸಿಕೊಳ್ಳಬೇಕಿದೆ ಎಂದು’ ಪ್ರತಿಪಾದಿಸಿದರು.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಜಾಗತಿಕ ಪೂರೈಕೆ ಸರಪಣಿಯಲ್ಲಿ ಆದ ಏರಿಳಿತವನ್ನು ಮೋದಿ ಪ್ರಸ್ತಾಪಿಸಿದ್ದಾರೆ. ತೀರಾ ಅಗತ್ಯದ ಸಂದರ್ಭದಲ್ಲಿ ಪೂರೈಕೆಗೆ ಅಡ್ಡಿ ಉಂಟಾದರೆ, ಅದನ್ನು ದಕ್ಷವಾದ ಪೂರೈಕೆ ಸರಪಣಿ ಎಂದು ಕರೆಯಲು ಸಾಧ್ಯವೇ ಎಂದು ಮೋದಿ ಪ್ರಶ್ನಿಸಿದ್ದಾರೆ. ಈ ಸಮಸ್ಯೆಗೆ ಭಾರತವು ಪರಿಹಾರ ಒದಗಿಸಲಿದೆ ಎಂದಿದ್ದಾರೆ. ದಕ್ಷ ಮತ್ತು ವಿಶ್ವಾಸಾರ್ಹ ಜಾಗತಿಕ ಪೂರೈಕೆ ಸರಪಣಿ ರೂಪಿಸುವಲ್ಲಿ ಭಾರತವು ಮಹತ್ವದ ಪಾತ್ರ ವಹಿಸಲಿದೆ ಎಂದು ಮೋದಿ ಹೇಳಿದರು.

ಕೈಗಾರಿಕಾ ಕ್ರಾಂತಿ 4.0ಕ್ಕೆ ಭಾರತದ್ದೇ ನೇತೃತ್ವ. ಜಾಗತಿಕ ಬೆಳವಣಿಗೆಯ ಭವಿಷ್ಯವು ಭವಿಷ್ಯದ ವ್ಯಾಪಾರದ ಮೇಲೆ ಅವಲಂಬಿತ. ಅರ್ಥವ್ಯವಸ್ಥೆಯಲ್ಲಿ ವ್ಯಾಪಾರದ ಪಾತ್ರವು ನಿರ್ಣಾಯಕ ಎಂದು ಮೋದಿ ವಿವರಿಸಿದರು.



ಆನೆಗೆ ಆಹಾರ **ಕೇರಳದ ಕೋಟಯಂನ ತಿರುನಕ್ಕರ ಮಹಾದೇವ ದೇವಾಲಯದಲ್ಲಿ ಭಾನುವಾರ ಆನೆಗಳಿಗೆ ಆಹಾರ ನೀಡುವ ಕಾರ್ಯಕ್ರಮ ನಡೆಯಿತು– ಪಿಟಿಐ ಚಿತ್ರ**

ನಾಲ್ವರು ದಲಿತ ಬಾಲಕರನ್ನು ಮರಕ್ಕೆ ನೇತು ಹಾಕಿ ಥಳಿತ

ಪ್ರಜಾವಾಣಿ ವಾರ್ತೆ

ಮುಂಬೈ: ಆಡುಗಳನ್ನು ಮತ್ತು ಪಾರಿವಾಳಗಳನ್ನು ಕದ್ದಿದ್ದಾರೆ ಎಂದು ಆರೋಪಿಸಿ ನಾಲ್ವರು ದಲಿತ ಬಾಲಕರನ್ನು ಮರಕ್ಕೆ ತಲೆಕೆಳಗಾಗಿ ನೇತುಹಾಕಿ, ಥಳಿಸಿರುವ ಪ್ರಕರಣ ಮಹಾರಾಷ್ಟ್ರದ ಅಹಮದನಗರ ಜಿಲ್ಲೆಯ ಶ್ರೀರಾಮ್‌ಪುರದ ಹರೇಗಾಂವ್‌ನಲ್ಲಿ ನಡೆದಿದೆ.

ಬಾಲಕರನ್ನು ಮರಕ್ಕೆ ನೇತುಹಾಕಿ, ಥಳಿಸುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಈ ಕುರಿತು ತನಿಖೆ ನಡೆಸಬೇಕು ಎಂದು ‘ವಂಚಿತ್ ಬಹುಜನ ಅಘಾಡಿ’ ಸಂಸ್ಥಾಪಕ ಪ್ರಕಾಶ್ ಅಂಬೇಡ್ಕರ್ ಆಗ್ರಹಿಸಿದ್ದಾರೆ.

ಸಂತ್ರಸ್ತ ಬಾಲಕನೊಬ್ಬನ ಜೊತೆಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ‘ತನ್ನ ಮೇಲೆ ಹಲ್ಲೆ ನಡೆಸಿ, ಮೂತ್ರ ವಿಸರ್ಜನೆ ಮಾಡಲಾಗಿದೆ ಮತ್ತು ಉಗುಳಲಾಗಿದೆ’ ಎಂದು ಆತ ತಿಳಿಸಿರುವುದಾಗಿ ಪ್ರಕಾಶ್ ಅವರು ‘ಎಕ್ಸ್’ (ಟ್ವಿಟರ್) ವೇದಿಕೆಯಲ್ಲಿ ಹೇಳಿದ್ದಾರೆ.

ಈ ಪೋಸ್ಟ್ ಅನ್ನು ಪ್ರಕಾಶ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಟ್ಯಾಗ್ ಮಾಡಿದ್ದಾರೆ. ಈ ಕುರಿತು ಕ್ರಮ ಕೈಗೊಳ್ಳದಿದ್ದರೆ ಬೀದಿಗಿಳಿದು ಪ್ರತಿಭಟನೆ ನಡೆಸುವುದಾಗಿಯೂ ಅವರು ಎಚ್ಚರಿಕೆ ನೀಡಿದ್ದಾರೆ.

ದಲಿತರ ಹಕ್ಕುಗಳನ್ನು ರಕ್ಷಿಸುವಲ್ಲಿ ಸರ್ಕಾರವು ವಿಫಲವಾಗಿದೆ ಎಂದು ಎನ್‌ಸಿಪಿ ವಕ್ತಾರ ಮಹೇಶ್ ತಾಪಸೆ ಆರೋಪಿಸಿದ್ದಾರೆ.

ಕಂದಾಯ ಸಚಿವ ರಾಧಾಕೃಷ್ಣ ವಿಖೆ-ಪಾಟೀಲ ಅವರು ಆಸ್ಪತ್ರೆಗೆ ಭೇಟಿ ನೀಡಿ ಬಾಲಕರು ಮತ್ತು ಅವರ ಪೋಷಕರ ಜೊತೆಗೆ ಮಾತನಾಡಿದ್ದಾರೆ. ಪ್ರಕರಣದ ಕುರಿತು ತನಿಖೆ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಮಧ್ಯಪ್ರದೇಶ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ದಲಿತ ವ್ಯಕ್ತಿಗೆ ಥಳಿಸಿ ಹತ್ಯೆ: 8 ಮಂದಿ ಸೆರೆ

ಭೋಪಾಲ್/ಸಾಗರ್ (ಪಿಟಿಐ): ಹಳೆ ವೈಷಮ್ಯದ ಕಾರಣಕ್ಕೆ ಗುಂಪೊಂದು ದಲಿತ ಯುವಕನನ್ನು ಥಳಿಸಿ ಕೊಂದಿರುವ ಪ್ರಕರಣ ಮಧ್ಯಪ್ರದೇಶದ ಸಾಗರ್ ಜಿಲ್ಲೆಯಲ್ಲಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಈ ಘಟನೆಯು ಗುರುವಾರ ನಡೆದಿದೆ. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಯುವಕ ಮೃತಪಟ್ಟಿದ್ದಾನೆ. ಈತನನ್ನು ಬೊರೋದಿಯಾ ನೋನಾಗಿರ್ ಗ್ರಾಮದ ನಿವಾಸಿ ನಿತಿನ್ ಆಹಿರ್‌ವಾರ್ ಎಂದು ಗುರುತಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಗುರುತು ಪತ್ತೆ ಆದ ಒಂಬತ್ತು ಮಂದಿ ಮತ್ತು ಗುರುತು ಪತ್ತೆ ಆಗದ ಮೂರರಿಂದ ನಾಲ್ಕು ಮಂದಿ ಆರೋಪಿಗಳ ಮೇಲೆ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 307 (ಕೊಲೆ ಯತ್ನ) ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ ಅಡಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ಎಎಸ್‌ಪಿ ಸಂಜೀವ್ ಉಯ್ಕೆ ತಿಳಿಸಿದ್ದಾರೆ.

ಪೊಲೀಸರ ದಾಖಲೆಗಳ ಪ್ರಕಾರ ಸುಲಿಗೆ, ಥಳಿತ ಮತ್ತು ಕಳವಿಗೆ ಸಂಬಂಧಿಸಿ ನಿತಿನ್ ವಿರುದ್ಧ ಸುಮಾರು ಏಳು ಮೊಕದ್ದಮೆಗಳಿದ್ದವು.

‘ಆರೋಪಿಗಳ ವಿರುದ್ಧ ನಾಲ್ಕು ವರ್ಷಗಳ ಕೆಳಗೆ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದೆ. ಪ್ರಕರಣ ಹಿಂಪಡೆಯುವಂತೆ ನನ್ನ ಸಹೋದರನ ಮೇಲೆ ಅವರು ಒತ್ತಡ ಹೇರುತ್ತಿದ್ದರು. ಈ ಕಾರಣಕ್ಕೆ ಈ ಹತ್ಯೆ ನಡೆದಿದೆ’ ಎಂದು ಸಂತ್ರಸ್ತನ ಸಹೋದರಿ ಆರೋಪಿಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ಎಎಸ್‌ಪಿ, ಸಂತ್ರಸ್ತನ ಸಹೋದರಿಯು 2019ರಲ್ಲಿ ನಾಲ್ವರ ವಿರುದ್ಧ ದೂರು ದಾಖಲಿಸಿದ್ದರು. ದೂರಿನನ್ವಯ ಆರೋಪಿಗಳನ್ನು ಬಂಧಿಸಲಾಗಿತ್ತು ಮತ್ತು ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ ಎಂದು ಹೇಳಿದ್ದಾರೆ.

‘ಮಧ್ಯಪ್ರದೇಶ ದೌರ್ಜನ್ಯಗಳ ಪ್ರಯೋಗಾಲಯ’



ನವದೆಹಲಿ (ಪಿಟಿಐ): ‘ಬಿಜೆಪಿಯು ಮಧ್ಯಪ್ರದೇಶವನ್ನು ದಲಿತರ ಮೇಲಿನ ದೌರ್ಜನ್ಯಗಳ ಪ್ರಯೋಗಾಲಯವನ್ನಾಗಿ ಮಾಡಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟೀಕಿಸಿದ್ದಾರೆ. ಮಧ್ಯಪ್ರದೇಶದ ಸಾಗರ್‌ನಲ್ಲಿ ದಲಿತ ವ್ಯಕ್ತಿಯನ್ನು ಥಳಿಸಿ ಕೊಂದ ಪ್ರಕರಣದ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿ ‘ಎಕ್ಸ್’ ವೇದಿಕೆಯಲ್ಲಿ ಅವರು ಹೀಗೆ ಪೋಸ್ಟ್ ಮಾಡಿದ್ದಾರೆ.

ಈ ವರ್ಷಾಂತ್ಯದಲ್ಲಿ ಮಧ್ಯಪ್ರದೇಶ ಚುನಾವಣೆ ನಡೆಯಲಿರುವ ಕಾರಣ ಈ ಘಟನೆಯು ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿದೆ.

‘ರಾಜ್ಯದಲ್ಲಿ ದಲಿತ ಯುವಕನನ್ನು ಹತ್ಯೆ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ತೋರಿಕೆಗಾಗಿ ಮಾತ್ರ ಸಾಗರ್‌ನಲ್ಲಿ ಸಂತ ರವಿದಾಸ ದೇವಾಲಯವನ್ನು ನಿರ್ಮಿಸುತ್ತಿದ್ದಾರೆ. ಆದರೆ ಮಧ್ಯಪ್ರದೇಶದಲ್ಲಿ ದಲಿತರು ಮತ್ತು ಬುಡಕಟ್ಟು ಜನಾಂಗಗಳ ಮೇಲೆ ನಡೆಯುತ್ತಿರುವ ಅಪರಾಧಗಳ ಕುರಿತು ಅವರಿಗೆ ಸ್ವಲ್ಪವೂ ಕಳವಳ ಇಲ್ಲ’ ಎಂದಿದ್ದಾರೆ.

ದಲಿತರ ಮೇಲೆ ಅತಿ ಹೆಚ್ಚು ದೌರ್ಜನ್ಯ ಪ್ರಕರಣಗಳು ಬಿಜೆಪಿ ಆಡಳಿತದ ಮಧ್ಯಪ್ರದೇಶದಲ್ಲಿ ನಡೆಯುತ್ತಿವೆ. ದೌರ್ಜನ್ಯದ ದರವು ದೇಶದ ಒಟ್ಟು ಸರಾಸರಿಗಿಂತ ರಾಜ್ಯದಲ್ಲಿ ಮೂರು ಪಟ್ಟು ಹೆಚ್ಚು ಇದೆ ಎಂದು ಖರ್ಗೆ ಹೇಳಿದ್ದಾರೆ.

‘ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಮಧ್ಯಪ್ರದೇಶದ ಜನರು ಬಿಜೆಪಿಯನ್ನು ಚುನಾಯಿಸುವುದಿಲ್ಲ. ಸಮಾಜದಲ್ಲಿ ತುಳಿತಕ್ಕೊಳಗಾಗಿರುವವರು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳಿಗೆ ತಕ್ಕ ಉತ್ತರ ನೀಡಲಿದ್ದಾರೆ’ ಎಂದು ಹೇಳಿದ್ದಾರೆ.

ದೆಹಲಿ ಮೆಟ್ರೊ ನಿಲ್ದಾಣಗಳಲ್ಲಿ ‘ಖಾಲಿಸ್ತಾನ ಜಿಂದಾಬಾದ್’ ಬರಹ

ನವದೆಹಲಿ(ಪಿಟಿಐ): ದೆಹಲಿಯ 5 ಮೆಟ್ರೊ ನಿಲ್ದಾಣಗಳಲ್ಲಿ ಕಿಡಿಗೇಡಿಗಳು ‘ದೆಹಲಿ ಬನೇಗಾ ಖಾಲಿಸ್ತಾನ’ ಮತ್ತು ‘ಖಾಲಿಸ್ತಾನ ಜಿಂದಾಬಾದ್’ ಘೋಷಣೆಗಳನ್ನು ಬರೆದಿರುವುದು ಕಂಡು ಬಂದಿದೆ.

ಸೆಪ್ಟೆಂಬರ್ 9 ಮತ್ತು 10ರಂದು ದೆಹಲಿಯಲ್ಲಿ ಜಿ-20 ಶೃಂಗಸಭೆ ನಡೆಯಲಿದ್ದು, ಈ ಸಂದರ್ಭದಲ್ಲಿಯೇ ಕಿಡಿಗೇಡಿಗಳು ಈ ಕೃತ್ಯ ನಡೆಸಿದ್ದಾರೆ.

ಶಿವಾಜಿ ಪಾರ್ಕ್, ಮದಿಪುರ್, ಪಶ್ಚಿಮ ವಿಹಾರ್, ಉದ್ಯೋಗ್ ನಗರ ಮತ್ತು ಮಹಾರಾಜ ಸೂರಜ್ಮಲ್ ಕ್ರೀಡಾಂಗಣ ಮೆಟ್ರೊ ನಿಲ್ದಾಣಗಳಲ್ಲಿ ಮತ್ತು ನಂಗ್ಲಾಯ್‌ನ ಸರ್ಕಾರಿ ಶಾಲೆಯ ಗೋಡೆ ಮೇಲೂ ಖಾಲಿಸ್ತಾನ ಪರ ಘೋಷಣೆಗಳನ್ನು ಬರೆಯಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.ಆರೋಪಿಗಳ ಪತ್ತೆಗಾಗಿ ಮೆಟ್ರೊ ನಿಲ್ದಾಣಗಳ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ ಎಂದಿದ್ದಾರೆ.

ಮೆಟ್ರೊ ನಿಲ್ದಾಣಗಳ ಗೋಡೆಗಳನ್ನು ವಿರೂಪಗೊಳಿಸಿರುವ ದೃಶ್ಯವಿರುವ ವಿಡಿಯೊವನ್ನು ನಿಷೇಧಿತ ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಸಂಘಟನೆ ಬಿಡುಗಡೆ ಮಾಡಿದೆ.

‘ಜಿ20 ರಾಷ್ಟ್ರಗಳ ಮುಖಂಡರೇ, ನೀವು ಸೆಪ್ಟೆಂಬರ್ 10ರಂದು ದೆಹಲಿಯಲ್ಲಿ ಶೃಂಗಸಭೆ ನಡೆಸುವಾಗ ನಾವು ಕೆನಡಾದಲ್ಲಿ ಖಾಲಿಸ್ತಾನ ಪರ ಜನಮತ ಸಂಗ್ರಹಿಸಲಿದ್ದೇವೆ’ ಎಂದು ಎಸ್‌ಎಫ್‌ಜೆ ವಕ್ತಾರ ಗುರುಪತ್ವಂತ್ ಸಿಂಗ್ ಪನ್ನುನ್ ವಿಡಿಯೊದಲ್ಲಿ ಹೇಳಿದ್ದಾರೆ.

‘ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ್ದಾಗಿದೆ. ನಾವು ದೆಹಲಿ ಪೊಲೀಸರಿಗೆ ಸಹಕಾರ ನೀಡುತ್ತೇವೆ’ ಎಂದು ಮೆಟ್ರೊ ರೈಲು ನಿಗಮದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿ20 ಶೃಂಗಸಭೆ ಭಾರತದ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದು, 40ಕ್ಕೂ ಹೆಚ್ಚು ದೇಶಗಳ ನಾಯಕರು, ಯುರೋಪಿಯನ್ ಒಕ್ಕೂಟದ ಪ್ರಮುಖರು, ಅಂತರ ರಾಷ್ಟ್ರೀಯ ಸಂಸ್ಥೆಗಳ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ರಹಸ್ಯ ದಾಖಲೆ ಕಳೆದುಕೊಂಡಿದ್ದನ್ನು ಒಪ್ಪಿಕೊಂಡ ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ರಾಜತಾಂತ್ರಿಕ ರಹಸ್ಯ ಸಂದೇಶದ ದಾಖಲೆಗಳನ್ನು ಕಳೆದುಕೊಂಡಿರುವುದಾಗಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ.

ವರ್ಗೀಕೃತ ದಾಖಲೆಗಳ ಅಕ್ರಮ ಬಳಕೆಗೆ ಸಂಬಂಧಿಸಿದಂತೆ ಅಧಿಕೃತ ರಹಸ್ಯ ಕಾಯ್ದೆಯಡಿ ದಾಖಲಾಗಿರುವ ಪ್ರಕರಣದಲ್ಲಿ ಪಾಕಿಸ್ತಾನದ ‘ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿ’ಯ (ಎಫ್‌ಐಎ) ಭಯೋತ್ಪಾದನಾ ನಿಗ್ರಹ ದಳ (ಸಿಟಿಡಬ್ಲ್ಯು) ಇಮ್ರಾನ್ ಖಾನ್ ಅವರನ್ನು ಜೈಲಿನಲ್ಲಿ ವಿಚಾರಣೆಗೆ ಒಳಪಡಿಸಿದ್ದು, ಈ ವೇಳೆ ಖಾನ್ ಈ ವಿಷಯ ತಿಳಿಸಿದ್ದಾರೆ.

ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ 70 ವರ್ಷದ ಖಾನ್, ಸದ್ಯ ಅಟಾಕ್ ಜೈಲಿನಲ್ಲಿ ಬಂಧಿಯಾಗಿದ್ದಾರೆ.



ಇಮ್ರಾನ್ ಖಾನ್

ಪ್ರಧಾನಿ ಹುದ್ದೆಯಿಂದ ತಮ್ಮನ್ನು ಕೆಳಗಿಸಲು ಅಮೆರಿಕ ಬೆಂಬಲಿತ ಕೂಟವೊಂದು ತಮ್ಮ ವಿರುದ್ಧ ಪಿತೂರಿ ನಡೆಸುತ್ತಿದೆ ಎಂದು ಇಮ್ರಾನ್ ಖಾನ್ ವರ್ಷದ ಹಿಂದೆ ಆರೋಪಿಸಿದ್ದರು. ಅದಕ್ಕೆ ಸಂಬಂಧಿಸಿದ ಪುರಾವೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದ್ದರು. ಅಂದು ಅವರು ಪ್ರದರ್ಶಿಸಿದ್ದ ದಾಖಲೆಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ರಾಜತಾಂತ್ರಿಕ ರಹಸ್ಯ ಸಂದೇಶವನ್ನು ಬಹಿರಂಗಗೊಳಿಸಿದ್ದಕ್ಕಾಗಿ ಅವರ ವಿರುದ್ಧ ಅಧಿಕೃತ ರಹಸ್ಯ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಾಗಿದೆ.

ದಕ್ಷಿಣ ಮತ್ತು ಮಧ್ಯ ಏಷ್ಯಾಕ್ಕೆ ಸಂಬಂಧಿಸಿದ ವ್ಯವಹಾರಗಳ ವಿಭಾಗದ ಅಮೆರಿಕ ಸಹಾಯಕ ವಿದೇಶಾಂಗ ಕಾರ್ಯದರ್ಶಿ ಡೊನಾಲ್ಡ್ ಲು ಮತ್ತು ಅಮೆರಿಕದ ಇತರ ಅಧಿಕಾರಿಗಳು ಹಾಗೂ ಅಂದಿನ ಪಾಕಿಸ್ತಾನಿ ರಾಯಭಾರಿ ಅಸದ್ ಮಜೀದ್ ಖಾನ್ ನಡುವಿನ ಸಭೆಗೆ ಸಂಬಂಧಿಸಿದ ಮಾಹಿತಿ ಈ ರಹಸ್ಯ ದಾಖಲೆಗಳಲ್ಲಿ ಇತ್ತು ಎನ್ನಲಾಗಿದೆ.

ಎಫ್‌ಐಎ ಉಪ ನಿರ್ದೇಶಕ ಅಯಾಜ್ ಖಾನ್ ನೇತೃತ್ವದ ಆರು ಸದಸ್ಯರ ಜಂಟಿ ತನಿಖಾ ತಂಡವು ಅಟಾಕ್ ಜೈಲಿನ ಉಪ ಅಧೀಕ್ಷಕರ ಕಚೇರಿಯಲ್ಲಿ ಖಾನ್ ಅವರನ್ನು ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಿತು ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ರಹಸ್ಯ ಸಂದೇಶವನ್ನು ಕಳೆದುಕೊಂಡಿರುವುದಾಗಿಯೂ, ಅದನ್ನು ಎಲ್ಲಿ ಇರಿಸಲಾಗಿದೆಯೋ ಗೊತ್ತಿಲ್ಲ ಎಂಬುದಾಗಿಯೂ ತನಿಖಾ ತಂಡಕ್ಕೆ ಖಾನ್ ಹೇಳಿದ್ದಾರೆ ಎನ್ನಲಾಗಿದೆ.

ಆದರೆ, ವಿದೇಶಿ ಪಿತೂರಿಗೆ ಸಂಬಂಧಿಸಿದಂತೆ ತಾವು ವರ್ಷದ ಹಿಂದೆ ಪ್ರದರ್ಶಿಸಿದ್ದ ದಾಖಲೆ ಅದಾಗಿರಲಿಲ್ಲ ಎಂದೂ ಖಾನ್ ಹೇಳಿದ್ದಾರೆ. ಅಂದು ಸಾರ್ವಜನಿಕವಾಗಿ ಪ್ರದರ್ಶಿಸಿದ್ದ ದಾಖಲೆಗಳು ಕ್ಯಾಬಿನೆಟ್ ಸಭೆಗೆ ಸಂಬಂಧಿಸಿದ್ದಾಗಿತ್ತು’ ಎಂದು ಖಾನ್ ಹೇಳಿರುವುದನ್ನು ಪತ್ರಿಕೆ ಉಲ್ಲೇಖಿಸಿದೆ.

ಇದೇ ಪ್ರಕರಣದಲ್ಲಿ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಉಪಾಧ್ಯಕ್ಷ ಮತ್ತು ಮಾಜಿ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ವಿರುದ್ಧವೂ ತನಿಖಾ ತಂಡ ಪ್ರಕರಣ ದಾಖಲಿಸಿದೆ. ಅವರನ್ನು ಆ.19ರಂದು ಬಂಧಿಸಲಾಗಿದೆ. ಮಾಜಿ ಪ್ರಧಾನಿ ಖಾನ್ ಅವರ ಪ್ರಧಾನ ಕಾರ್ಯದರ್ಶಿಯಾಗಿದ್ದ ಅಜಂ ಖಾನ್, ಮಾಜಿ ಯೋಜನಾ ಸಚಿವ ಅಸದ್ ಉಮರ್ ಮತ್ತು ಇತರ ಸಹಚರರ ಪಾತ್ರವನ್ನು ತನಿಖೆಯ ನಂತರ ನಿರ್ಧರಿಸಲಾಗುವುದು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

‘ಮುಸ್ಲಿಂ ವಿದ್ಯಾರ್ಥಿಗೆ ಬೇರೆ ಶಾಲೆಯಲ್ಲಿ ಪ್ರವೇಶ’

ಮುಜಫ್ಫರನಗರ (ಪಿಟಿಐ): ಜಿಲ್ಲೆಯ ಖುಬ್ಬುಪುರದಲ್ಲಿ ಶಿಕ್ಷಕಿಯೊಬ್ಬರ ಸೂಚನೆಯಂತೆ ಸಹಪಾಠಿಗಳಿಂದ ಕಪಾಳಕ್ಕೆ ಹೊಡೆಸಿಕೊಂಡಿರುವ ಮುಸ್ಲಿಂ ವಿದ್ಯಾರ್ಥಿಯ ಕುಟುಂಬಸ್ಥರು ಒಪ್ಪಿದಲ್ಲಿ ಆತನನ್ನು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯೊಂದಕ್ಕೆ ಸೇರಿಸಲಾಗುವುದು ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

‘ಶಾಲೆಯ ಇತರ ಮಕ್ಕಳನ್ನು ಕೂಡ ಬೇರೆ ಶಾಲೆಗೆ ಸೇರಿಸಲು ಇಲಾಖೆ ಕ್ರಮ ಕೈಗೊಳ್ಳಲಿದೆ’ ಎಂದೂ ಅಧಿಕಾರಿಗಳು ಹೇಳಿದ್ದಾರೆ. ಗ್ರಾಮದ ನೇಹಾ ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ಈ ಘಟನೆ ನಡೆದಿತ್ತು.

‘ಕಪಾಳಕ್ಕೆ ಹೊಡೆಸಿಕೊಂಡಿರುವ ವಿದ್ಯಾರ್ಥಿಯ ತಂದೆಗೆ ಆತ ಈ ಶಾಲೆಯಲ್ಲಿ ಓದು ಮುಂದುವರಿಸುವುದು ಇಷ್ಟವಿಲ್ಲ. ಬಿಇಒ ಅವರೂ ವಿದ್ಯಾರ್ಥಿ ಜೊತೆ ಮಾತನಾಡಿದ್ದು, ಸರ್ಕಾರಿ ಶಾಲೆಯಲ್ಲಿ ಓದುವ ಇಚ್ಛೆಯನ್ನು ಆತ ವ್ಯಕ್ತಪಡಿಸಿದ್ದಾನೆ. ಪಾಲಕರು ಒಪ್ಪಿದಲ್ಲಿ, ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಆತನ ಪ್ರವೇಶಾತಿ ಪ್ರಕ್ರಿಯೆಯನ್ನು ಸೋಮವಾರ ಪೂರ್ಣಗೊಳಿಸಲಾಗುವುದು’ ಎಂದು ಪ್ರಾಥಮಿಕ ಶಿಕ್ಷಣ ಅಧಿಕಾರಿ ಶುಭಮ್ ಶುಕ್ಲಾ ಹೇಳಿದ್ದಾರೆ.

ವಿದ್ಯಾರ್ಥಿಗೆ ನಿದ್ರಾಹೀನತೆ: ಸಹಪಾಠಿಗಳಿಗೆ ಪೆಟ್ಟು ತಿಂದಿದ್ದ ಮುಸ್ಲಿಂ ವಿದ್ಯಾರ್ಥಿ ನಿದ್ರಾಹೀನತೆ ಸಮಸ್ಯೆಗೆ ಗುರಿಯಾಗಿದ್ದು, ಭಾನುವಾರ ಮೀರತ್‌ಗೆ ಚಿಕಿತ್ಸೆಗೆ ಕರೆದೊಯ್ಯಲಾಗಿತ್ತು.

ಅಸ್ಸಾಂ: 154 ಗ್ರಾಮ ಜಲಾವೃತ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂನಲ್ಲಿ ಭಾನುವಾರ ಮಳೆಯ ಆರ್ಭಟ ಮುಂದುವರಿದಿದೆ. ಬ್ರಹ್ಮಪುತ್ರ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹಲವೆಡೆ ಪ್ರವಾಹದ ಪರಿಸ್ಥಿತಿ ತಲೆದೋರಿದೆ.

ಒಟ್ಟು 11 ಜಿಲ್ಲೆಗಳಲ್ಲಿನ 154 ಗ್ರಾಮಗಳು ಪ್ರವಾಹದಿಂದ ಜಲಾವೃತಗೊಂಡಿವೆ. 45 ಸಾವಿರಕ್ಕೂ ಹೆಚ್ಚು ಜನರು ತೊಂದರೆಗೆ ಸಿಲುಕಿದ್ದಾರೆ.

ನಿಮತಿಘಾಟ್, ಧುಬ್ರಿ ಮತ್ತು ತೇಜ್‌ಪುರ ಪ್ರದೇಶದಲ್ಲಿ ಬ್ರಹ್ಮಪುತ್ರ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಅಲ್ಲದೇ, ಬೆಕಿ, ದಿಶಾಂಗ್ ಮತ್ತು ಡಿಖೌ ನದಿಗಳೂ ಉಕ್ಕಿ ಹರಿಯುತ್ತಿದ್ದು, ನದಿಪಾತ್ರದ ಜನರು ಸಂಕಷ್ಟ ಅನುಭವಿಸುವಂತಾಗಿದೆ.

ಹೀಗೆಯೇ ಮಳೆ ಮುಂದುವರಿದರೆ ಅಸ್ಸಾಂನ ಹಲವು ಪ್ರದೇಶಗಳ ಪರಿಸ್ಥಿತಿ ಹದಗೆಡುವ ನಿರೀಕ್ಷೆಯಿದೆ. ಜೊತೆಗೆ, ನೆರೆಯ ಅರುಣಾಚಲ ಪ್ರದೇಶ ಹಾಗೂ ಮೇಘಾಲಯ ರಾಜ್ಯದ ಸ್ಥಿತಿಯೂ ಬಿಗಡಾಯಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕಳೆದ 24 ಗಂಟೆಯಲ್ಲಿ ಸುರಿದ ಮಳೆಯಿಂದ ಆರು ಜಿಲ್ಲೆಗಳಲ್ಲಿ ಮಳೆ ಅನಾಹುತಗಳು ಹೆಚ್ಚಿವೆ. ಧರ್ಮಜಿ ಜಿಲ್ಲೆಯ 48 ಗ್ರಾಮಗಳಲ್ಲಿನ 19,600 ನಾಗರಿಕರು ತೊಂದರೆಗೆ ಸಿಲುಕಿದ್ದಾರೆ. 1,753 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಫಸಲು ಹಾನಿಯಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಅಗ್ನಿ ಅನಾಹುತ: ಮೂವರ ಸಾವು

ಮುಂಬೈ (ಪಿಟಿಐ): ಸಾಂತಾಕ್ರೂಜ್ ಪೂರ್ವದ ಪ್ರಭಾತ್ ಕಾಲೊನಿಯ ಗ್ಯಾಲಕ್ಸಿ ಹೋಟೆಲ್‌ನಲ್ಲಿ ಭಾನುವಾರ ಅಗ್ನಿ ಅನಾಹುತ ಸಂಭವಿಸಿ ಮೂವರು ಮೃತಪಟ್ಟಿದ್ದಾರೆ.

ರೂಪಲ್ ಕಂಜಿ (25), ಕಿಶನ್ (28) ಮತ್ತು ಕಾಂತಿಲಾಲ್ (48) ಮೃತಪಟ್ಟವರು. ಇತರ ಇಬ್ಬರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಐದು ಅಂತಸ್ತಿನ ಹೋಟೆಲ್‌ನ ಮೂರನೇ ಅಂತಸ್ತಿನಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿದ್ದು, ಬಳಿಕ ಎರಡು ಕೋಣೆಗಳು ಮತ್ತು ಇತರೆಡೆಗಳಿಗೂ ಹಬ್ಬಿದೆ. ಅಗ್ನಿಶಾಮಕ ದಳದ ನಾಲ್ಕು ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಯರಿಂಗ್, ಮರದ ಪೀಠೋಪಕರಣಗಳು, ಹಾಸಿಗೆಗಳು, ಪರದೆ ಮತ್ತಿತರ ವಸ್ತುಗಳು ಭಸ್ಮವಾಗಿವೆ ಎಂದು ವಿವರಿಸಿದ್ದಾರೆ.

‘ಸುರಕ್ಷತಾ ಮಾನದಂಡಗಳನ್ನು ಅನುಸರಿಸದ ಕಾರಣಕ್ಕೆ ಈಚೆಗೆ ಈ ಹೋಟೆಲ್‌ಗೆ ನೋಟಿಸ್ ಜಾರಿ ಮಾಡಲಾಗಿತ್ತು ಮತ್ತು ಪ್ರಕರಣವನ್ನೂ ದಾಖಲಿಸಿಕೊಂಡಿದ್ದೆವು ಆದರೆ ಹೋಟೆಲ್‌ಗೆ ಸಂಬಂಧಪಟ್ಟವರು ಯಾರೂ ಉತ್ತರಿಸಿಲ್ಲ’ ಎಂದು ಬೃಹನ್ ಮುಂಬೈ ನಗರ ಪಾಲಿಕೆಯ (ಬಿಎಂಸಿ) ವಾರ್ಡ್ ಆರೋಗ್ಯಾಧಿಕಾರಿ ಡಾ. ಸತೀಶ್ ತಿಳಿಸಿದ್ದಾರೆ.

ಇನ್ಫೊಸಿಸ್‌ನಲ್ಲಿ ಪತ್ನಿ ಅಕ್ಷತಾ ಷೇರು: ಸುನಕ್‌ಗೆ ಪ್ರಶ್ನೆ

ಲಂಡನ್(ಪಿಟಿಐ): ಭಾರತ ಮತ್ತು ಬ್ರಿಟನ್ ನಡುವಿನ ‘ಮುಕ್ತ ವ್ಯಾಪಾರ ಒಪ್ಪಂದ’ (ಎಫ್‌ಟಿಎ) ಅಂತಿಮಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಇನ್ನೊಂದೆಡೆ, ಪತ್ನಿ ಅಕ್ಷತಾ ಮೂರ್ತಿ ಅವರು ಇನ್ಫೊಸಿಸ್ ಕಂಪನಿ ಷೇರುಗಳನ್ನು ಹೊಂದಿರುವ ವಿಚಾರವಾಗಿ ಪ್ರಧಾನಿ ರಿಷಿ ಸುನಕ್ ಅವರಿಗೆ ವಿರೋಧ ಪಕ್ಷವು ಹಲವು ಪ್ರಶ್ನೆಗಳನ್ನು ಮುಂದಿಟ್ಟಿದೆ.

ಎಫ್‌ಟಿಎ ಸೇರಿದಂತೆ ಉಭಯ ದೇಶಗಳ ನಡುವಿನ ವ್ಯಾಪಾರಕ್ಕೆ ಸಂಬಂಧಿಸಿ ಏರ್ಪಡುವ ಯಾವುದೇ ಒಪ್ಪಂದದಿಂದ ಇನ್ಫೊಸಿಸ್‌ಗೂ ಲಾಭವಾಗಲಿದೆ. ಹೀಗಾಗಿ, ವಾಣಿಜ್ಯ ಕ್ಷೇತ್ರದ ತಜ್ಞರು ಕೂಡ ಇದೇ ವಿಷಯವಾಗಿ ಸುನಕ್ ಅವರಿಗೆ ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ‘ದಿ ಆಬ್ಸರ್ವರ್’ ನಿಯತಕಾಲಿಕೆ ವರದಿ ಮಾಡಿದೆ.

ಬೆಂಗಳೂರು ಮೂಲದ ಇನ್ಫೊಸಿಸ್‌ನ ಸಹಸಂಸ್ಥಾಪಕ ನಾರಾಯಣಮೂರ್ತಿ ಪುತ್ರಿಯಾಗಿರುವ ಅಕ್ಷತಾ ಅವರು ಹೊಂದಿರುವ ಕಂಪನಿಯ ಷೇರುಗಳ ಮೌಲ್ಯ ಅಂದಾಜು ₹ 5 ಸಾವಿರ ಕೋಟಿ. ಒಪ್ಪಂದದ ಹಿನ್ನೆಲೆಯಲ್ಲಿ ಆಗುವ ವಿತ್ತೀಯ ಪರಿಣಾಮ ಕುರಿತ ಮಾಹಿತಿ ಬಹಿರಂಗಪಡಿಸಬೇಕು ಎಂದು ಲೇಬರ್ ಪಾರ್ಟಿ ಸಂಸದ ಡರೆನ್ ಜೋನ್ಸ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪ್ರಿಗೋಷಿನ್ ಸಾವು ದೃಢಪಡಿಸಿದ ತನಿಖಾ ಸಂಸ್ಥೆ

ಮಾಸ್ಕೊ (ಎಎಫ್‌ಪಿ): ರಷ್ಯಾದ ಟಿವೆರ್ ಪ್ರದೇಶದಲ್ಲಿ ಇತ್ತೀಚೆಗೆ ಸಂಭವಿಸಿದ ವಿಮಾನ ಅಪಘಾತದಲ್ಲಿ ಖಾಸಗಿ ಸೇನಾ ಗುಂಪು ‘ವ್ಯಾಗ್ನರ್’ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರು ಮೃತಪಟ್ಟಿರುವುದನ್ನು ರಷ್ಯಾದ ತನಿಖಾ ಸಂಸ್ಥೆ ಅಧಿಕೃತವಾಗಿ ದೃಢಪಡಿಸಿದೆ.

ಯೆವ್ಗೆನಿ ಪ್ರಿಗೋಷಿನ್ ಅವರ ಮರಣವನ್ನು ಡಿಎನ್‌ಎ ಪರೀಕ್ಷೆ ದೃಢಪಡಿಸಿದೆ ಎಂದು ರಷ್ಯಾದ ತನಿಖಾ ಸಮಿತಿ ಭಾನುವಾರ ತಿಳಿಸಿದೆ. ಡಿಎನ್‌ಎ ಪರೀಕ್ಷೆಯ ಫಲಿತಾಂಶಗಳ ಪ್ರಕಾರ, ಹತ್ತು ಮಂದಿ ಮೃತರ ಗುರುತುಗಳನ್ನು ಪತ್ತೆಹಚ್ಚಲಾಗಿದೆ. ಅಪಘಾತಕ್ಕೀಡಾದ ವಿಮಾನದ ಪ್ರಯಾಣಿಕರ ಪಟ್ಟಿಯಲ್ಲಿದ್ದ ಹೆಸರುಗಳಿಗೆ ಮೃತರ ಗುರುತು ಹೋಲಿಕೆಯಾಗಿದೆ ಎಂದು ತನಿಖಾ ಸಮಿತಿ ಹೇಳಿದೆ.

ವಿಮಾನ ಪತನ: ಮೂವರ ಸಾವು

ಕ್ಯಾನ್‌ಬೆರಾ (ಎಪಿ): ಅಮೆರಿಕದ ನೌಕಾ ಪಡೆಯ ವಿಮಾನವು (ಮರೀನ್ ಕೋರ್) ಉತ್ತರ ಆಸ್ಟ್ರೇಲಿಯಾದ ದ್ವೀಪದಲ್ಲಿ ಬಹು ರಾಷ್ಟ್ರಗಳ ನೌಕಾಪಡೆಗಳ ತರಬೇತಿ ಕಸರತ್ತಿನ ವೇಳೆ ಭಾನುವಾರ ಪತನಗೊಂಡಿದ್ದು, ಮೂವರು ಮೃತಪಟ್ಟಿದ್ದಾರೆ ಮತ್ತು 20 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಲ್ ಬೋಯಿಂಗ್ ವಿ-22 ಓಸ್ಪ್ರೇ ಟಿಲ್ಟ್ರೋಟರ್ ವಿಮಾನವು ಸ್ಥಳೀಯ ಕಾಲಮಾನ ಬೆಳಿಗ್ಗೆ 9.30ರ ಸುಮಾರಿಗೆ ಅಪಘಾತಕ್ಕೀಡಾಗಿ ಮೆಲ್ವಿಲ್ಲೆ ದ್ವೀಪದಲ್ಲಿ ಪತನಗೊಂಡಿದೆ.

ಗುಂಡಿನ ದಾಳಿ: ಮೂವರ ಸಾವು

ಜಾಕ್ಸನ್‌ವಿಲ್ಲೆ (ಅಮೆರಿಕ) (ಎಪಿ): ‘ಬಂದೂಕುಧಾರಿ ಶ್ವೇತ ವರ್ಣೀಯನೊಬ್ಬ ಮೂವರು ಕಪ್ಪು ವರ್ಣೀಯರನ್ನು ಗುಂಡಿಕ್ಕಿ ಕೊಂದ ಘಟನೆ ಫ್ಲಾರಿಡಾದ ಜಾಕ್ಸನ್‌ವಿಲ್ಲೆಯ ಡಾಲರ್ ಜನರಲ್ ಸ್ಟೋರ್‌ನಲ್ಲಿ ಶನಿವಾರ ನಡೆದಿದೆ’ ಎಂದು ಸ್ಥಳೀಯ ಪೊಲೀಸ್ ಅಧಿಕಾರಿ ಟಿ.ಕೆ. ವಾಟರ್ಸ್ ಹೇಳಿದ್ದಾರೆ.

‘ಬಂದೂಕುಧಾರಿ ತನಗೆ ತಾನೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ’ ಎಂದು ಅವರು ತಿಳಿಸಿದ್ದಾರೆ.

ಎಮರ್‌ಸನ್ ಮರು ಆಯ್ಕೆ

ಹರಾರೆ (ಎಪಿ): ಜಿಂಬಾಬ್ವೆಯ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ಶನಿವಾರ ಹೊರಬಿದ್ದಿದ್ದು, ಈಗಿನ ಅಧ್ಯಕ್ಷ ಎಮರ್‌ಸನ್ ಮನಾಂಗಾಗ್ವ ಅವರು ಎರಡನೇ ಮತ್ತು ಅಂತಿಮ ಅವಧಿಗೆ ಅಧ್ಯಕ್ಷರಾಗಿ ಶನಿವಾರ ಮರು ಆಯ್ಕೆಯಾಗಿದ್ದಾರೆ.

ಎಂಟು ತಿಂಗಳ ಗರ್ಭಿಣಿ ಪುತ್ರಿ ಕೊಲೆಗೈದ ಪೋಷಕರು

ಲಖನೌ: ಪ್ರೇಮಿ ವಿರುದ್ಧ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ನಿರಾಕರಿಸಿದ ಕಾರಣಕ್ಕೆ 19 ವರ್ಷದ ಗರ್ಭಿಣಿ ಪುತ್ರಿಯನ್ನು ಪೋಷಕರೇ ಹತ್ಯೆಗೈದ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯಲ್ಲಿ ನಡೆದಿದೆ.

ಪೋಷಕರು, ಪುತ್ರಿಯ ಕತ್ತು ಹಿಸುಕಿ ಕೊಲೆ ಮಾಡಿ ಶವವನ್ನು ನದಿಗೆ ಎಸೆದಿದ್ದರು. ಪೋಷಕರನ್ನು ಬಂಧಿಸಲಾಗಿದೆ. ವಿಚಾರಣೆ ವೇಳೆ ‘ಕುಟುಂಬದ ಗೌರವಕ್ಕಾಗಿ’ ಕೊಲೆ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ, ಕಳೆದ ವರ್ಷ ಅಕ್ಟೋಬರ್‌ನಲ್ಲಿ ಮೀರತ್ ನಿವಾಸಿ ರಾಹುಲ್ ಕುಮಾರ್ ಎಂಬಾತನ ಜೊತೆ ಹೋಗಿದ್ದರು. ಆದರೆ ‘ರಾಹುಲ್ ತಮ್ಮ ಮಗಳನ್ನು ಅಪಹರಿಸಿ, ಅತ್ಯಾಚಾರ ನಡೆಸಿದ್ದಾನೆ’ ಎಂದು ಪೋಷಕರು ದೂರು ನೀಡಿದ್ದರು. ನಂತರ ರಾಹುಲ್‌ನನ್ನು ಬಂಧಿಸಲಾಗಿತ್ತು. ವಿಚಾರಣೆಗೆ ಹಾಜರಾಗುವಂತೆ ಕೋರ್ಟ್ ಯುವತಿಗೆ ಸೂಚಿಸಿತ್ತು. ಪ್ರೇಮಿ ವಿರುದ್ಧ ಸಾಕ್ಷಿ ಹೇಳಲು ಎಂಟು ತಿಂಗಳ ಗರ್ಭಿಣಿಯನ್ನು ಪೋಷಕರು ನಿರಂತರವಾಗಿ ಒತ್ತಾಯಿಸಿದ್ದರು. ಆದರೂ ಆಕೆಯ ಮನವೊಲಿಸಲು ಸಾಧ್ಯವಾಗಿರಲಿಲ್ಲ.

ಕಾಂಗ್ರೆಸ್, ಬಿಆರ್‌ಎಸ್, ಎಐಎಂಐಎಂ ‘4ಜಿ, 3ಜಿ, 2ಜಿ’ ಪಕ್ಷಗಳು: ಅಮಿತ್ ಶಾ

ಹೈದರಾಬಾದ್ (ಪಿಟಿಐ): ವಂಶ ಪಾರಂಪರ್ಯ ರಾಜಕೀಯ ವಿಚಾರವಾಗಿ ಕಾಂಗ್ರೆಸ್, ಬಿಆರ್‌ಎಸ್ ಮತ್ತು ಎಐಎಂಐಎಂ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಆ ಪಕ್ಷಗಳನ್ನು ‘4ಜಿ, 3ಜಿ, 2ಜಿ’ ಪಕ್ಷಗಳು ಎಂದು ಜರಿದರು.

ಖಮ್ಮಮ್‌ನಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಕಾಂಗ್ರೆಸ್ 4ಜಿ ಪಕ್ಷ– ಜವಾಹರ್‌ಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಮತ್ತು ರಾಹುಲ್ ಗಾಂಧಿ–ಹೀಗೆ ನಾಲ್ಕು ತಲೆಮಾರುಗಳ ಪಕ್ಷ. ಕೆಸಿಆರ್ ಅವರದ್ದು 2ಜಿ ಪಕ್ಷ. ಓವೈಸಿ ಅವರದ್ದು 3ಜಿ ಪಕ್ಷ’ ಎಂದು ಟೀಕಿಸಿದರು.

2ಜಿ, 3ಜಿ ಅಥವಾ 4ಜಿ ಬರಲಿ. ಈಗ ‘ಕಮಲ’ದ ಸರದಿ ಎಂದು ಹೇಳಿದರು.

‘ಭ್ರಷ್ಟ ಮತ್ತು ದಬ್ಬಾಳಿಕೆ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್ ಮತ್ತು ಅದಕ್ಕೆ ಬೆಂಬಲ ನೀಡುತ್ತಿರುವ ಅಸಾದುದ್ದೀನ್ ನೇತೃತ್ವದ ಎಐಎಂಐಎಂ ನೇತೃತ್ವದ ಸರ್ಕಾರ ಅಧಿಕಾರದಿಂದ ಕೆಳಗಿಳಿಯುವ ಸಮಯ ಬಂದಿದೆ’ ಎಂದು ಹೇಳಿದರು.

ಶೋಭಾ ಯಾತ್ರೆ: ನೂಹ್‌ನಲ್ಲಿ ಬಿಗಿ ಭದ್ರತೆ


ನೂಹ್ (ಹರಿಯಾಣ) (ಪಿಟಿಐ): ಸರ್ವ ಜಾತಿಯ ಹಿಂದೂ ಮಹಾ ಪಂಚಾಯಿತಿ ಸೋಮವಾರ ಬ್ರಿಜ್ ಮಂಡಲ್ ಶೋಭಾ ಯಾತ್ರೆ ನಡೆಸಲು ಕರೆ ಕೊಟ್ಟಿರುವ ಕಾರಣ ಹರಿಯಾಣದ ನೂಹ್ ಜಿಲ್ಲೆ ಮತ್ತು ಇನ್ನಿತರ ಪ್ರದೇಶಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಹೊರಗಿನವರು ನೂಹ್ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ.

ನೂಹ್ ಜಿಲ್ಲೆಯಲ್ಲಿ ಜುಲೈನಲ್ಲಿ ಕೋಮು ಹಿಂಸಾಚಾರದಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದರಿಂದ, ಶೋಭಾ ಯಾತ್ರೆಗೆ ಜಿಲ್ಲಾಡಳಿತ ಅನುಮತಿ ನೀಡಲು ನಿರಾಕರಿಸಿದೆ. ನೂಹ್ ಜಿಲ್ಲೆಯಷ್ಟೇ ಅಲ್ಲದೇ, ಅಂತರ ಜಿಲ್ಲಾ ಗಡಿಗಳು ಮತ್ತು ಅಂತರರಾಜ್ಯ ಗಡಿಗಳಲ್ಲೂ ಭದ್ರತೆ ಬಿಗಿಗೊಳಿಸಲಾಗಿದೆ.

ಜಿಲ್ಲೆಯ ಎಲ್ಲ ಪ್ರವೇಶ ದ್ವಾರಗಳನ್ನು ಮುಚ್ಚಲಾಗಿದೆ. ಮಲ್ಹಾರ್ ದೇವಸ್ಥಾನಕ್ಕೆ ಹೋಗುವ ಮಾರ್ಗವನ್ನು ಸಹ ಮುಚ್ಚಲಾಗಿದೆ. ಆದರೆ, ಕೆಎಂಪಿ ಎಕ್ಸ್‌ಪ್ರೆಸ್‌ವೇ ಮತ್ತು ದೆಹಲಿ-ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ಸಂಚಾರ ಮುಂದುವರಿಯಲಿದೆ ಎಂದು ನೂಹ್ ಜಿಲ್ಲೆಯ ಪೊಲೀಸ್ ವಕ್ತಾರರು ಹೇಳಿದ್ದಾರೆ.

ವಿಶ್ವ ಅಥ್ಲೆಟಿಕ್ಸ್: ಚಿನ್ನ ಗೆದ್ದ ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ಐತಿಹಾಸಿಕ ಸಾಧನೆ

‘ವಿಶ್ವ’ಕ್ಕೂ ನೀರಜ್ ಚಾಂಪಿಯನ್



ಬುಡಾಪೆಸ್ಟ್: ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆಲ್ಲುವ ಮೂಲಕ ಭಾರತದ ಕ್ರೀಡಾ ಇತಿಹಾಸದಲ್ಲಿ ಭಾನುವಾರ ರಾತ್ರಿ ಹೊಸ ಚರಿತ್ರೆ ಸೃಷ್ಟಿಸಿದರು.

ಕೋಟ್ಯಾಂತರ ಅಭಿಮಾನಿಗಳ ನಿರೀಕ್ಷೆಯನ್ನು ನನಸಾಗಿಸಿದ ಅವರು ಜಾವೆಲಿನ್‌ಅನ್ನು 88.17 ಮೀ. ದೂರ ಎಸೆಯುವ ಮೂಲಕ ಅಗ್ರಸ್ಥಾನ ಪಡೆದುಕೊಂಡರು. ಆರು ಎಸೆತಗಳ ಅವಕಾಶವಿದ್ದ ಫೈನಲ್‌ನ ಎರಡನೇ ಪ್ರಯತ್ನದಲ್ಲಿ ಅವರಿಂದ ಈ ಸಾಧನೆ ಮೂಡಿಬಂತು. ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ದೊರೆ ಮೊಟ್ಟಮೊದಲ ಚಿನ್ನ ಇದು.

25 ವರ್ಷದ ಚೋಪ್ರಾ ಅವರು ವಿಶ್ವ ಚಾಂಪಿಯನ್‌ಷಿಪ್ ಹೊರತುಪಡಿಸಿ ಇತರ ಎಲ್ಲ ಪ್ರಮುಖ ಕೂಟಗಳಲ್ಲಿ ಚಿನ್ನ ಗೆದ್ದಿದ್ದರು. ಇದೀಗ ‘ವಿಶ್ವ’ ಚಾಂಪಿಯನ್ ಎನಿಸುವ ಮೂಲಕ ದೇಶದ ಹಿರಿಮೆ ಹೆಚ್ಚಿಸಿದ್ದಾರೆ.

2022 ರಲ್ಲಿ ಅಮೆರಿಕದಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದ ಅವರು, ಈ ಬಾರಿ ಚಿನ್ನ ಗೆಲ್ಲುವ ‘ಫೇವರಿಟ್’ ಸ್ಪರ್ಧಿ ಎನಿಸಿಕೊಂಡಿದ್ದರು.

ಚೋಪ್ರಾ ಅವರು ಒಲಿಂಪಿಕ್ಸ್ (2021, ಟೋಕಿಯೊ), ಏಷ್ಯನ್ ಗೇಮ್ಸ್ (2018) ಮತ್ತು ಕಾಮನ್‌ವೆಲ್ತ್ ಕೂಟದಲ್ಲಿ (2018) ಚಿನ್ನ ಜಯಿಸಿದ್ದಾರೆ. ಕಳೆದ ವರ್ಷ ಡೈಮಂಡ್ ಲೀಗ್‌ನಲ್ಲಿ ಚಾಂಪಿಯನ್ ಆಗಿದ್ದರು.

ಶೂಟರ್ ಅಭಿನವ್ ಬಿಂದ್ರಾ ಬಳಿಕ ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ನ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಎರಡನೇ ಕ್ರೀಡಾಪಟು ಎಂಬ ಗೌರವ ಚೋಪ್ರಾ ತಮ್ಮದಾಗಿಸಿಕೊಂಡರು. ಬಿಂದ್ರಾ ಅವರು 2008ರ ಒಲಿಂಪಿಕ್ಸ್‌ನಲ್ಲಿ ಮತ್ತು 2006ರಲ್ಲಿ ಯಾಗ್ರೆಬ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿದ್ದರು.

ನೀರಜ್‌ಗೆ ಪ್ರಬಲ ಪೈಪೋಟಿ ನೀಡಿದ ಪಾಕಿಸ್ತಾನದ ಅರ್ಷದ್ ನದೀಮ್ (87.82 ಮೀ.) ಬೆಳ್ಳಿ ಗೆದ್ದರೆ, ಜೆಕ್ ರಿಪಬ್ಲಿಕ್‌ನ ಯಾಕುಬ್ ವಾದ್ಲೇಚ್ (86.67 ಮೀ.) ಕಂಚು ತಮ್ಮದಾಗಿಸಿಕೊಂಡರು.

ಕರ್ನಾಟಕದ ಡಿ.ಪಿ.ಮನು (83.72 ಮೀ.) ಆರನೇ ಸ್ಥಾನ ಪಡೆದರೆ, ಕಿಶೋರ್ ಜೇನಾ (84.77 ಮೀ.) ಐದನೇ ಸ್ಥಾನ ಪಡೆದು ಗಮನ ಸೆಳೆದರು.

ಕಿಪ್ಲಾಂಗಟ್‌ಗೆ ಮ್ಯಾರಥಾನ್ ಚಿನ್ನ: ಕೊನೆಯ 15 ಕಿ.ಮೀ.ಗಳಿರುವಾಗ ಎದುರಾಳಿಗಳನ್ನೆಲ್ಲಾ ಹಿಂದೆಹಾಕಿದ ಉಗಾಂಡಾದ ವಿಕ್ಟರ್ ಕಿಪ್ಲಾಂಗಟ್ ಅವರು ಪುರುಷರ ಮ್ಯಾರಥಾನ್‌ನಲ್ಲಿ ವಿಜಯಿಯಾದರು. ಹಂಗೆರಿ ರಾಜಧಾನಿಯ ರಸ್ತೆಗಳಲ್ಲಿ ಭಾನುವಾರ ನಡೆದ ಈ ಸುದೀರ್ಘ ಓಟವನ್ನು 2ಗಂಟೆ 8 ನಿಮಿಷ 53 ಸೆಕೆಂಡುಗಳಲ್ಲಿ ಮುಗಿಸಿದರು.

ಇಥಿಯೋಪಿಯಾ ಸಂಜಾತ ಇಸ್ರೇಲ್‌ನ ಓಟಗಾರ ಮಾರು ತೆಫಾರಿ 2ಗಂ. 9ನಿ. 12 ಸೆ.ಗಳಲ್ಲಿ ಓಟ ಪೂರೈಸಿ ಎರಡನೇ ಸ್ಥಾನ ಪಡೆದರು. ಏಳು ಸೆಕೆಂಡು ಹೆಚ್ಚು ತೆಗೆದುಕೊಂಡ ಇಥಿಯೋಪಿಯಾದ ಲಿಯುಲ್ ಗೆಬ್ರೆಸಿಲಾಸೆ ಅವರಿಗೆ ಕಂಚಿನ ಪದಕ ದೊರೆಯಿತು.

‘ಚಿನ್ನದ ಪದಕ ನನ್ನ ಕನಸಾಗಿತ್ತು. ಅದು ಕೊನೆಗೂ ನನಸಾಗಿದೆ’ ಎಂದು ಕಿಪ್ಲಾಂಗಟ್ ಪ್ರತಿಕ್ರಿಯಿಸಿದರು.

ಅಮಿತ್‌ಗೆ ‘ಡಬಲ್’ ಸಂಭ್ರಮ

ಬ್ಯಾಡ್ಮಿಂಟನ್: ಸಹರ್ಷ್, ಸಮಕ್ಷ್‌ಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ


ಬ್ಯಾಡ್ಮಿಂಟನ್ ಟೂರ್ನಿಯ ವಿವಿಧ ವಿಭಾಗಗಳ ವಿಜೇತರು. (ಎಡದಿಂದ): 15 ವರ್ಷದೊಳಗಿನ ಬಾಲಕಿಯರ ವಿಭಾಗದ ಡಬಲ್ಸ್ ರನ್ನರ್ ಅಪ್ ಸುಮೇಧಾ ಎಸ್, ಸಿಂಗಲ್ಸ್ ಪ್ರಶಸ್ತಿ ವಿಜೇತೆ ಮತ್ತು ಡಬಲ್ಸ್ ರನ್ನರ್ ಅಪ್ ಅದಿತಿ ಜೆ.ಆಚಾರ್ಯ, 15 ವರ್ಷದೊಳಗಿನ ಬಾಲಕರ ವಿಭಾಗದ ಡಬಲ್ಸ್ ವಿಜೇತ ಕನಿಷ್ಕ್ ಕಿರಣ್ ಬೆಂಗ್ರೆ ಮತ್ತು ಸಿಂಗಲ್ಸ್–ಡಬಲ್ಸ್ ವಿಜೇತ ಅಮಿತ್ ಎನ್‌.ರಾಜ್ –ಪ್ರಜಾವಾಣಿ ಚಿತ್ರ

ಮಂಗಳೂರು: ಗ್ಲಾಡ್ಸನ್ ಅಕಾಡೆಮಿಯ ಅಮಿತ್ ರಾಜ್ ಎನ್, ಇಲ್ಲಿನ ಮಂಗಳಾ ಬ್ಯಾಡ್ಮಿಂಟನ್ ಸಂಸ್ಥೆ ಆಯೋಜಿಸಿದ್ದ ‘ಮಂಗಳಾ ಕಪ್ ಜೂನಿಯರ್’ ವಿವಿಧ ವಯೋಮಾನದವರ ಮುಕ್ತ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ‘ಡಬಲ್’ ಪ್ರಶಸ್ತಿಯ ಸಂಭ್ರಮ ಉಂಡರು.

ನಗರದ ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಮತ್ತು ಡಬಲ್ಸ್ ಫೈನಲ್‌ನಲ್ಲಿ ಅವರು ಜಯಭೇರಿ ಮೊಳಗಿಸಿದರು. ಸಿಂಗಲ್ಸ್‌ನಲ್ಲಿ ಮಂಗಳೂರಿನ ಎಸ್‌ಬಿಎಯ ನಿಕೇತನ್ ವಿರುದ್ಧ 15–10, 16–14ರಲ್ಲಿ ಜಯ ಗಳಿಸಿದ ಅವರು ಡಬಲ್ಸ್‌ನಲ್ಲಿ ಮಂಗಳೂರಿನ ಕನಿಷ್ಕ್ ಕಿರಣ್ ಬೇಂಗ್ರೆ ಜೊತೆಗೂಡಿ ನಿಕೇತನ್ ಮತ್ತು ಬೆಂಗಳೂರು ಓವಲ್‌ನೆಟ್ ಅರೇನಾದ ತ್ರಿಶನ್ ಕುಮಾರ್ ಜೋಡಿಯನ್ನು 15–8, 10–15, 15–13ರಲ್ಲಿ ಗೆಲುವು ಮಣಿಸಿದರು.

ನಗರದ ಎಸ್‌ಬಿಎ ಆಟಗಾರರಾದ ಸಹರ್ಷ್ ಪ್ರಭು ಮತ್ತು ಸಮಕ್ಷ್ ಕ್ರಮವಾಗಿ 19 ಮತ್ತು 9 ವರ್ಷದೊಳಗಿನ ಬಾಲಕರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. 19 ವರ್ಷದೊಳಗಿನವರ ವಿಭಾಗದಲ್ಲಿ ಸಹರ್ಷ್ 15–9, 15–13ರಲ್ಲಿ ಗೋಲ್ಡನ್ ಷಟಲ್‌ನ ಆರವ್ ಮೈಂದನ್ ವಿರುದ್ಧ ಜಯ ಸಾಧಿಸಿದರು. 9 ವರ್ಷದೊಳಗಿನವರ ಪ್ರಶಸ್ತಿ ಸುತ್ತಿನ ಮುಖಾಮುಖಿಯಲ್ಲಿ ಸಮಕ್ಷ್ 15–10, 15–12ರಲ್ಲಿ ಅನುರಾಗ್ ನಾಯಕ್ ಎದುರು ಗೆದ್ದರು.

13 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಎಸ್‌ಬಿಎ ಪ್ರತಿನಿಧಿಸಿದ ಸಾತ್ವಿಕ್ ಪ್ರಭು 30–3ರಲ್ಲಿ ಬೆಂಗಳೂರಿನ ಆ್ಯಸ್ಪೈರ್ ಬ್ಯಾಡ್ಮಿಂಟನ್ ಅಕಾಡೆಮಿಯ ಇವಾನ್ ಫರ್ನಾಂಡಿಸ್ ವಿರುದ್ಧ ಗೆದ್ದರು. 11 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಎಸ್‌ಬಿಎಯ ಆದಿತ್, ಗ್ಲಾಡ್ಸನ್‌ನ ನಿವಿನ್ ಶಾರೋನ್ ವಿರುದ್ಧ 15–10, 15–3ರಲ್ಲಿ ಜಯ ಗಳಿಸಿದರು.

ಟೆಂಟ್ ಪೆಗ್ಗಿಂಗ್: ಭಾರತ ಚಾರಿತ್ರಿಕ ಸಾಧನೆ

ಜಾರ್ಜ್, ದಕ್ಷಿಣ ಆಫ್ರಿಕಾ (ಪಿಟಿಐ): ಭಾರತ ತಂಡವು ಇಲ್ಲಿ ನಡೆದ ಟೆಂಟ್ ಪೆಗ್ಗಿಂಗ್ ವಿಶ್ವಕಪ್ ನಲ್ಲಿ ಚಾರಿತ್ರಿಕ ಸಾಧನೆ ಮಾಡಿತು. ಈ ಕ್ರೀಡೆಯಲ್ಲಿ ಇದೇ ಮೊದಲ ಬಾರಿಗೆ ಮೂರನೇ ಸ್ಥಾನ ಗಳಿಸಿತು.

ಟೆಂಟ್ ಪೆಗ್ಗಿಂಗ್ ಎಂದರೆ ನೆಲದಲ್ಲಿ ನೆಟ್ಟಿರುವ ಮರದ ಗೂಟಗಳನ್ನು ವೇಗವಾಗಿ ಓಡುವ ಕುದುರೆ ಮೇಲಿರುವ ಸವಾರನು ಭರ್ಜಿಯಿಂದ ಚುಚ್ಚಿ ತೆಗೆದುಕೊಂಡು ಸಾಗುವ ಸಾಹಸ ಕ್ರೀಡೆಯಾಗಿದೆ. ಭಾರತ ತಂಡವು ಕಳೆದ ಎರಡು ಆವೃತ್ತಿಗಳಲ್ಲಿ ಕ್ರಮವಾಗಿ ಆರು ಮತ್ತು ಏಳನೇ ಸ್ಥಾನಗಳನ್ನು ಗಳಿಸಿತ್ತು.

ಈ ಬಾರಿ ಐವರು ಸವಾರರು ಇದ್ದ ತಂಡವು ಕಣದಲ್ಲಿತ್ತು. ದಿನೇಶ್ ಗಂಗಾರಾಮ್ ಕರ್ಲೇಕರ್ (4 ಅಂಕ), ಮೋಹಿತ್ ಕುಮಾರ್ (06 ಅಂಕ), ಅಮಿತ್ ಚೆಟ್ರಿ (12 ಅಂಕ), ಮೊಹಮ್ಮದ್ ಅಬ್ರಾರ್ (31 ಅಂಕ) ಮತ್ತು ಗೌತಮ್ ಕುಮಾರ್ ಆಟಾ (38 ಅಂಕ) ಉತ್ತಮ ಸಾಧನೆ ಮಾಡಿದರು.

ಅಂತರರಾಷ್ಟ್ರೀಯ ಟೆಂಟ್ ಪೆಗ್ಗಿಂಗ್ ಫೆಡರೇಷನ್‌ನಲ್ಲಿ 29 ರಾಷ್ಟ್ರಗಳು ಸದಸ್ಯತ್ವ ಹೊಂದಿವೆ. ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದ ತಂಡಗಳನ್ನು ತಲಾ ನಾಲ್ಕು ತಂಡಗಳಿರುವ ಗುಂಪುಗಳಲ್ಲಿ ವಿಂಗಡಿಸಲಾಗುತ್ತದೆ.

ಈ ಬಾರಿ ಓಮನ್‌ನಲ್ಲಿ ನಡೆದಿದ್ದ ಫೆಡರೇಷನ್ ಸರ್ವಸದಸ್ಯರ ಸಭೆಯಲ್ಲಿ ಗುಂಪುಗಳನ್ನು ಪ್ರಕಟಿಸಲಾಗಿತ್ತು.


ವಿಶ್ವ ಟೆಂಟ್ ಪೆಗ್ಗಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದ ಭಾರತ ತಂಡ –ಪಿಟಿಐ ಚಿತ್ರ

ಮಹಾರಾಜ ಟ್ರೋಫಿ ಸೆಮಿಫೈನಲ್ ಇಂದು: ಹುಬ್ಬಳ್ಳಿಗೆ ಶಿವಮೊಗ್ಗ ಸವಾಲು

ಚೇತನ್, ಅನೀಶ್ ಶತಕ ಜತೆಯಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಎರಡು ಸೆಮಿಫೈನಲ್ ಪಂದ್ಯಗಳು ಸೋಮವಾರ ನಡೆಯಲಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆಯಲಿರುವ ಮೊದಲ ಪಂದ್ಯದಲ್ಲಿ ಮನೀಷ್ ಪಾಂಡೆ ನಾಯಕತ್ವದ ಹುಬ್ಬಳ್ಳಿ ಟೈಗರ್ಸ್ ತಂಡವು ಶ್ರೇಯಸ್ ಗೋಪಾಲ್ ನೇತೃತ್ವದ ಶಿವಮೊಗ್ಗ ಲಯನ್ಸ್ ಬಳಗವನ್ನು ಎದುರಿಸಲಿದೆ. ಇನ್ನೊಂದು ಪಂದ್ಯದಲ್ಲಿ ಕರುಣ್ ನಾಯರ್ ನಾಯಕತ್ವದ ಮೈಸೂರು ವಾರಿಯರ್ಸ್ ಮತ್ತು ವೈಶಾಖ ವಿಜಯಕುಮಾರ್ ಮುಂದಾಳತ್ವದ ಗುಲ್ಬರ್ಗ ಮಿಸ್ಟಿಕ್ಸ್ ಎದುರು ಮುಖಾಮುಖಿಯಾಗಲಿವೆ.

ಭಾನುವಾರ ಲೀಗ್ ಹಂತದ ಕೊನೆಯ ಎರಡು ಪಂದ್ಯಗಳು ನಡೆದವು. ಅದರಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ತಂಡವು 8 ವಿಕೆಟ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಡ್ರ್ಯಾಗನ್ಸ್ 19.1 ಓವರ್‌ಗಳಲ್ಲಿ 144 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಅಭಿಲಾಷ್ ಶೆಟ್ಟಿ (33ಕ್ಕೆ3) ಅವರ ಅಮೋಘ ಬೌಲಿಂಗ್‌ನಿಂದ ತಂಡವು ಕುಸಿಯಿತು.

ಗುರಿ ಬೆನ್ನತ್ತಿದ ಗುಲ್ಬರ್ಗ ತಂಡವು15.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 145 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಎಲ್.ಆರ್. ಚೇತನ್ (58; 37ಎ, 4X6, 6X3) ಮತ್ತು ಕೆ.ವಿ. ಅನೀಶ್ (ಔಟಾಗದೆ 72, 42ಎ, 4X5, 6X4) ಮೊದಲ ವಿಕೆಟ್ ಜೊತೆಯಾಟದಲ್ಲಿ 114 ರನ್ ಸೇರಿಸಿ ತಂಡದ ಗೆಲುವನ್ನು ಸುಗಮಗೊಳಿಸಿದರು.


ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಕೆ.ವಿ. ಅನೀಶ್ ಬ್ಯಾಟಿಂಗ್ ಸೊಬಗು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

ಇನ್ನೊಂದು ಪಂದ್ಯದಲ್ಲಿ ಶಿವಮೊಗ್ಗ ಲಯನ್ಸ್ ತಂಡವು 11 ರನ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಜಯಿಸಿತು. ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 19.1 ಓವರ್‌ಗಳಲ್ಲಿ 144 (ಬಿ.ಆರ್. ಶರತ್ 38, ತಿಪ್ಪಾರೆಡ್ಡಿ 27, ಅನಿರುದ್ಧ ಜೋಶಿ 46, ಅಭಿಲಾಷ್ ಶೆಟ್ಟಿ 33ಕ್ಕೆ3, ವೈಶಾಖ ವಿಜಯಕುಮಾರ್ 20ಕ್ಕೆ2, ಹಾರ್ದಿಕ್ ರಾಜ್ 24ಕ್ಕೆ2) ಗುಲ್ಬರ್ಗ ಮಿಸ್ಟಿಕ್ಸ್: 15.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 145 (ಎಲ್. ಆರ್. ಚೇತನ್ 58, ಕೆ.ವಿ. ಅನೀಶ್ ಔಟಾಗದೆ 72, ಕೆ. ಗೌತಮ್ 21ಕ್ಕೆ2) ಫಲಿತಾಂಶ: ಗುಲ್ಬರ್ಗ ಮಿಸ್ಟಿಕ್ಸ್ ತಂಡಕ್ಕೆ 8 ವಿಕೆಟ್‌ಗಳ ಜಯ.

ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 192 (ರೋಹನ್ ಕದಂ 35, ವಿನಯ್ ಸಾಗರ್ 32, ಅಭಿನವ್ ಮನೋಹರ್ ಔಟಾಗದೆ 58, ಶ್ರೇಯಸ್ ಗೋಪಾಲ್ 43, ತನೀಶ್ ಮಹೇಶ್ 50ಕ್ಕೆ3) ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 181 (ಡಿ. ನಿಶ್ಚಲ್ 68, ಸೂರಜ್ ಅಹುಜಾ 29, ಆದಿತ್ಯ 24ಕ್ಕೆ2) ಫಲಿತಾಂಶ: ಶಿವಮೊಗ್ಗ ಲಯನ್ಸ್‌ಗೆ 11 ರನ್‌ಗಳಿಂದ ಜಯ.

ಸೆಮಿಫೈನಲ್ ಇಂದು
ಹುಬ್ಬಳ್ಳಿ ಟೈಗರ್ಸ್–ಶಿವಮೊಗ್ಗ ಲಯನ್ಸ್ (ಮಧ್ಯಾಹ್ನ 1)
ಮೈಸೂರು ವಾರಿಯರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 5.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್.

ಡಿವೈಇಎಸ್‌ಗೆ ಗೆಲುವು

ಬೆಂಗಳೂರು: ಡಿವೈಇಎಸ್ ಬೆಂಗಳೂರು ತಂಡ ರಾಜ್ಯ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 79–52 ರಿಂದ ಬಿಎಸ್‌ಎನ್‌ಎಲ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ 19 ಪಾಯಿಂಟ್ಸ್ ಗಳಿಸಿದ ಮನೋಜ್ ಅವರು ಡಿವೈಇಎಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ರಕ್ಷಿತ್ 14 ಪಾಯಿಂಟ್ಸ್ ತಂದಿತ್ತರು.

ಭಾರತ್ ಎಸ್.ಯು 61–45 ರಿಂದ ಐಬಿಬಿಸಿ ವಿರುದ್ಧ ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡ 67–65 ರಿಂದ ಬೀಗಲ್ಸ್ ಕ್ಲಬ್ ತಂಡವನ್ನು ಸೋಲಿಸಿತು. ವಿಜಯಿ ತಂಡದ ಪರ ಶ್ರೇಯಸ್ (17) ಮಿಂಚಿದರು.

ಹಾಕಿ ಫೈವ್ಸ್: ಭಾರತಕ್ಕೆ 3ನೇ ಜಯ

ಸಲಾಲ, ಒಮಾನ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದವರು ಏಷ್ಯನ್ ಹಾಕಿ ಫೈವ್ಸ್ ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ಸತತ ಮೂರನೇ ಗೆಲುವು ಸಾಧಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ 5–4 ಗೋಲುಗಳಿಂದ ಥಾಯ್ಲೆಂಡ್ ತಂಡವನ್ನು ಮಣಿಸಿತು. ನಾಯಕಿ ನವಜೋತ್ ಕೌರ್ (1ನೇ ನಿ.), ಮೋನಿಕಾ ದೀಪಿ ಟೊಪ್ಪೊ (1 ಮತ್ತು 7ನೇ ನಿ.), ಮಹಿಮಾ ಚೌಧರಿ (20) ಮತ್ತು ಅಜ್‌ಮಿನಾ ಕುಜೂರ್ (30) ಅವರು ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಥಾಯ್ಲೆಂಡ್ ತಂಡದ ಪರ ಪಿರ್ಸಮ್ ಅನೊಂಗ್‌ನತ್ (3ನೇ ನಿ.), ಅಂಜಯ್ ನಥಕರ್ನ್ (10 ಮತ್ತು 14ನೇ ನಿ.) ಮತ್ತು ಸುವಪತ್ ಕೊಂತೊಂಗ್ (19ನೇ ನಿ.) ಅವರು ಗೋಲು ಗಳಿಸಿದರು. ಮೊದಲ ಪಂದ್ಯದಲ್ಲಿ ಭಾರತ, 7–2 ರಿಂದ ಮಲೇಷ್ಯಾ ತಂಡವನ್ನು ಮಣಿಸಿದ್ದರೆ, 2ನೇ ಪಂದ್ಯದಲ್ಲಿ 7–1 ರಿಂದ ಜಪಾನ್ ಎದುರು ಗೆದ್ದಿತ್ತು.

ಕುನ್ಲಾವುತ್, ಆ್ಯನ್‌ಗೆ ಸಿಂಗಲ್ಸ್ ಗರಿ

ಕೋಪೆನ್‌ಹೇಗನ್ (ಪಿಟಿಐ): ಸುದೀರ್ಘ ಹೋರಾಟದಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡ ಮೂರನೇ ಕ್ರಮಾಂಕದ ಆಟಗಾರ ಕುನ್ಲಾವುತ್ ವಿತಿದ್‌ಸರನ್ 19–21, 21–18, 21–7 ರಿಂದ ನಾಲ್ಕನೇ ಕ್ರಮಾಂಕದ ಕೊಡೈ ನರವೋಕಾ ಅವರನ್ನು ಸೋಲಿಸಿ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ಚಾಂಪಿಯನ್ ಕಿರೀಟ ಧರಿಸಿದರು.

ಭಾನುವಾರ ಒಂದು ಗಂಟೆ 49 ನಿಮಿಷಗಳ ಕಾಲ ನಡೆದ ಫೈನಲ್ ಪಂದ್ಯದ ಮೊದಲ ಎರಡು ಗೇಮ್‌ಗಳು ಹೋರಾಟದಿಂದ ಕೂಡಿದ್ದವು. ಆದರೆ ಮೂರನೇ ಗೇಮ್‌ನಲ್ಲಿ ಸ್ವಲ್ಪ ಬಳಲಿದಂತೆ ಕಂಡ ಜಪಾನ್ ಆಟಗಾರನ ಎದುರು ಥಾಯ್ಲೆಂಡ್‌ನ ಆಟಗಾರ ಹತೋಟಿ ಸಾಧಿಸಿದರು. 22 ವರ್ಷದ ವಿತಿದ್‌ಸರನ್ ಕಳೆದ ವರ್ಷ ಫೈನಲ್‌ನಲ್ಲಿ (ವಿಕ್ಟರ್ ಆಕ್ಸೆಲ್‌ಸನ್ ಎದುರು) ಸೋಲನುಭವಿಸಿದ್ದರು.

ಪ್ರಣಯ್ ವಿರುದ್ಧ ಸೆಮಿಫೈನಲ್‌ನಲ್ಲೂ ವಿತಿದ್‌ಸರನ್ ಮೂರು ಗೇಮ್‌ಗಳನ್ನು ಆಡಿದ್ದು ಹಿನ್ನಡೆಯಿಂದ ಚೇತರಿಸಿಕೊಂಡಿದ್ದರು.

ಇದಕ್ಕೆ ಮೊದಲು, ವಿಶ್ವದ ಅಗ್ರಮಾನ್ಯ ಆಟಗಾರ್ತಿ ಆ್ಯನ್ ಸೆ-ಯಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ ಸಿಂಗಲ್ಸ್ ಕಿರೀಟ ಧರಿಸಿದ ದಕ್ಷಿಣ ಕೊರಿಯಾದ ಮೊದಲ ಆಟಗಾರ್ತಿ ಎನಿಸಿದರು. ಆ್ಯನ್ ಸೆ ಫೈನಲ್‌ನಲ್ಲಿ 21–12, 21–10 ರಿಂದ ಆರನೇ ಕ್ರಮಾಂಕದ ಆಟಗಾರ್ತಿ ಕರೋಲಿನಾ ಮರಿನ್ (ಸ್ಪೇನ್) ಅವರನ್ನು ಹೆಚ್ಚಿನ ಪ್ರಯಾಸವಿಲ್ಲದೇ ಸೋಲಿಸಿದರು. 21 ವರ್ಷದ ಕೊರಿಯನ್ ಆಟಗಾರ್ತಿ ಪ್ರಶಸ್ತಿ ಹಾದಿಯಲ್ಲಿ ಮರಿನ್ ಸೇರಿ ಇಬ್ಬರು ಒಲಿಂಪಿಕ್ ಚಾಂಪಿಯನ್ ಆಟಗಾರ್ತಿಯರನ್ನು ಸದೆಬಡಿದಿದ್ದು ಗಮನಾರ್ಹ.


ಕೊರಿಯಾದ ಆ್ಯನ್ ಸೆ–ಯಂಗ್

6 ವರ್ಷ ಬಳಿಕ ಅಫ್ಗನ್ ತಂಡಕ್ಕೆ ಮರಳಿದ ಕರೀಂ

ಕಾಬೂಲ್ (ಪಿಟಿಐ): ಆಲ್‌ರೌಂಡರ್ ಕರೀಂ ಜನತ್ ಅವರು ಆರು ವರ್ಷಗಳ ನಂತರ ಅಫ್ಗಾನಿಸ್ತಾನ ಏಕದಿನ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದೇ 30ರಂದು ಆರಂಭವಾಗುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಗೆ ಭಾನುವಾರ ಪ್ರಕಟಿಸಲಾಗಿರುವ ತಂಡದಲ್ಲಿ ಅನುಭವಿ ಎಡಗೈ ಬ್ಯಾಟರ್ ನಜೀಬುಲ್ಲಾ ಜದ್ರಾನ್ ಅವರನ್ನೂ ಸೇರ್ಪಡೆಗೊಳಿಸಲಾಗಿದೆ.

ಇನಿಂಗ್ಸ್‌ಗೆ ಲಂಗರು ಹಾಕುವುದಕ್ಕೆ ಪ್ರಸಿದ್ಧರಾಗಿರುವ ಎಡಗೈ ಬ್ಯಾಟರ್ ಹಷ್ಮತ್‌ಉಲ್ಲಾ ಶಾಹಿದಿ ಅವರು ತಂಡದ ನಾಯಕರಾಗಿದ್ದಾರೆ. ಮೊಣಕಾಲಿನ ನೋವಿನಿಂದ ಜದ್ರಾನ್, ಇತ್ತೀಚೆಗೆ ಪಾಕಿಸ್ತಾನ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಆಡಿರಲಿಲ್ಲ.

ತಂಡ ಇಂತಿದೆ: ಹಷ್ಮತ್‌ಉಲ್ಲಾ ಶಾಹೀದಿ (ನಾಯಕ), ರಹಮಾನುಲ್ಲಾ ಗುರ್ಬಾಝ್, ಇಕ್ರಮ್ ಅಲಿಖಿಲ್ (ಇಬ್ಬರೂ ಕೀಪರ್), ಇಬ್ರಾಹಿಂ ಜದ್ರಾನ್, ರಿಯಾಝ್ ಹಸನ್, ರಹಮತ್ ಷಾ, ನಜೀಬುಲ್ಲಾ ಜದ್ರಾನ್, ಮೊಹಮ್ಮದ್ ನಬಿ, ರಷೀದ್ ಖಾನ್, ಅಬ್ದುಲ್ ರಹಮಾನ್, ಶರ್ಫುದ್ದೀನ್ ಅಶ್ರಫ್, ಮುಜೀಬ್ ಉರ್ ರೆಹಮಾನ್, ನೂರ್ ಅಹ್ಮದ್, ಮೊಹಮ್ಮದ್ ಸಲೀಮ್ ಸಫಿ, ಫಜಲ್ ಹಕ್ ಫರೂಖಿ, ಕರೀಂ ಜನತ್.

ಅಮೆರಿಕ ಓಪನ್ ಟೆನಿಸ್ ಟೂರ್ನಿ ಇಂದಿನಿಂದ

ಜೊಕೊವಿಚ್, ಅಲ್ಕರಾಜ್ ಮೇಲೆ ಚಿತ್ತ

ನ್ಯೂಯಾರ್ಕ್ (ಎಎಫ್‌ಪಿ): ಋತುವಿನ ಕೊನೆಯ ಗ್ರ್ಯಾನ್‌ಸ್ಲಾಮ್ ಎನಿಸಿರುವ ಅಮೆರಿಕ ಓಪನ್ ಟೆನಿಸ್ ಟೂರ್ನಿ ಸೋಮವಾರ ಆರಂಭವಾಗಲಿದ್ದು, ನೊವಾಕ್ ಜೊಕೊವಿಚ್ ಮತ್ತು ಕಾರ್ಲೊಸ್ ಅಲ್ಕರಾಜ್ ನಡುವೆ ಮತ್ತೊಮ್ಮೆ ಪೈಪೋಟಿ ನಡೆಯುವ ನಿರೀಕ್ಷೆ ಮೂಡಿದೆ.

ಆರು ವಾರಗಳ ಹಿಂದೆಯಷ್ಟೆ ವಿಂಬಲ್ಡನ್ ಟೂರ್ನಿಯ ಫೈನಲ್‌ನಲ್ಲಿ ಸ್ಪೇನ್‌ನ ಅಲ್ಕರಾಜ್ ಅವರು ಸರ್ಬಿಯದ ಜೊಕೊವಿಚ್ ವಿರುದ್ಧ ಗೆದ್ದಿದ್ದರು. ಇಬ್ಬರ ನಡುವಣ ಜಿದ್ದಾಜಿದ್ದಿನ ಪೈಪೋಟಿ, ಟೆನಿಸ್ ಪ್ರಿಯರ ಮನಗೆದ್ದಿತ್ತು.

ಕಳೆದ ವಾರ ನಡೆದಿದ್ದ ಸಿನ್ಸಿನಾಟಿ ಓಪನ್ ಟೂರ್ನಿಯ ಫೈನಲ್‌ನಲ್ಲೂ ಇಬ್ಬರು ಮತ್ತೊಂದು ರೋಚಕ ಹಣಾಹಣಿ ನಡೆಸಿದ್ದರು. 23 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ಜೊಕೊವಿಚ್, 20 ವರ್ಷದ ಎದುರಾಳಿಯನ್ನು ಮಣಿಸಿ ವಿಂಬಲ್ಡನ್ ಸೋಲಿಗೆ ಮುಯ್ಯಿ ತೀರಿಸಿಕೊಂಡಿದ್ದರು.

ಅಮೆರಿಕ ಓಪನ್ ಟೂರ್ನಿಯಲ್ಲೂ ಇವರಿಬ್ಬರು ಫೈನಲ್ ಪ್ರವೇಶಿಸುವ ನೆಚ್ಚಿನ ಆಟಗಾರರು ಎನಿಸಿಕೊಂಡಿದ್ದಾರೆ. ಜೊಕೊವಿಚ್ ಕಳೆದ ಬಾರಿ ಇಲ್ಲಿ ಆಡಿರಲಿಲ್ಲ. ಅವರ ಅನುಪಸ್ಥಿತಿಯಲ್ಲಿ ಅಲ್ಕರಾಜ್, ತಮ್ಮ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಜಯಿಸಿದ್ದರು.

ಎರಡನೇ ಶ್ರೇಯಾಂಕ ಹೊಂದಿರುವ ಜೊಕೊವಿಚ್, ಸೋಮವಾರ ನಡೆಯುವ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ ಅವರನ್ನು ಎದುರಿಸಲಿದ್ದಾರೆ. ಅಲ್ಕರಾಜ್ ಅವರು ಮಂಗಳವಾರ ಜರ್ಮನಿಯ ಡಾಮಿನಿಕ್ ಕೊಪ್‌ಫೆರ್ ವಿರುದ್ಧದ ಪಂದ್ಯದೊಂದಿಗೆ ಪ್ರಶಸ್ತಿಯೆಡೆಗಿನ ಅಭಿಯಾನ ಆರಂಭಿಸುವರು.



ಕಾರ್ಲೊಸ್ ಅಲ್ಕರಾಜ್ ಮತ್ತು ನೊವಾಕ್ ಜೊಕೊವಿಚ್

ಅಲ್ಕರಾಜ್ ಅವರಿಗೆ ಫೈನಲ್ ಹಾದಿಯಲ್ಲಿ 2021ರ ಚಾಂಪಿಯನ್ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಮತ್ತು ಇಟಲಿಯ ಯಾನಿಕ್ ಸಿನೆರ್ ಅವರ ಸವಾಲು ಎದುರಾಗುವ ಸಾಧ್ಯತೆಯಿದೆ.

ಮಹಿಳೆಯರ ವಿಭಾಗದಲ್ಲಿ ಎಲ್ಲರ ಚಿತ್ತ 19 ವರ್ಷದ ಆಟಗಾರ್ತಿ ಅಮೆರಿಕದ ಕೊಕೊ ಗಾಫ್ ಮೇಲೆ ನೆಟ್ಟಿದೆ. ಅವರು ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯೊಂದಿಗೆ ಕಣಕ್ಕಿಳಿಯಲಿದ್ದಾರೆ.

ವಿಂಬಲ್ಡನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ ಅವರು ಇದೀಗ ಉತ್ತಮ ಲಯದಲ್ಲಿದ್ದಾರೆ. ಆಗಸ್ಟ್ ಆರಂಭದಲ್ಲಿ ನಡೆದಿದ್ದ ವಾಷಿಂಗ್ಟನ್ ಓಪನ್ ಜಯಿಸಿದ್ದ ಗಾಫ್, ಮಾಂಟ್ರಿಯಲ್‌ನಲ್ಲಿ ನಡೆದಿದ್ದ ಕೆನಡಿಯನ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಕಳೆದ ವಾರ ಸಿನ್ಸಿನಾಟಿ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಅದು ಅವರ ಚೊಚ್ಚಲ ಡಬ್ಲ್ಯುಟಿಎ–1000 ಪ್ರಶಸ್ತಿ ಆಗಿತ್ತು.

ಸಿನ್ಸಿನಾಟಿ ಟೂರ್ನಿಯಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ ವಿರುದ್ಧ ಗೆದ್ದಿರುವುದು, ಗಾಫ್ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಶ್ವಾಂಟೆಕ್, ಅಮೆರಿಕ ಓಪನ್‌ನಲ್ಲಿ ಕಳೆದ ಬಾರಿ ಚಾಂಪಿಯನ್ ಆಗಿದ್ದರು. ಈ ಬಾರಿ ಇವರಿಬ್ಬರು ಕ್ವಾರ್ಟರ್ ಫೈನಲ್‌ನಲ್ಲಿ ಎದುರಾಗುವ ಸಾಧ್ಯತೆಯಿದೆ.

ನೇರಪ್ರಸಾರ: ಸೋನಿ ನೆಟ್‌ವರ್ಕ್ (ರಾತ್ರಿ 8.30 ರಿಂದ)